ಖಂಡ 1 ಇತ್ಯಾದಿ

ಅಧ್ಯಕ್ಷರು: "ಖಂಡ 2ರಿಂದ 4ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 2 ಮತ್ತು 3, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ, ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಪ್ರಸ್ತಾವದ ಅಂಗೀಕಾರ

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ರ ಕರ್ನಾಟಕ ಪೌರಸಭೆಗಳ ಮತ್ತು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ರ ಕರ್ನಾಟಕ ಪೌರಸಭೆಗಳ ಮತ್ತು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಕರ್ನಾಟಕಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ. 1997,

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1997ರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಏನೆಂದು ತಿದ್ದುಪಡಿ ವಿಧೇಯಕವನ್ನು ತಂದಿದ್ದಾರೆ ಅದರ ಬಗ್ಗೆ ನಮ್ಮ ಆತಂಕವನ್ನು ಮತ್ತು ನಮ್ಮ ವಿರೋಧವನ್ನು ವ್ಯಕ್ತಪಡಿಸಬೇಕೆಂದಿದ್ದೇವೆ. ಆ ಅಮೆಂಡ್‌ಮೆಂಟ್ ಆಫ್ ಸೆಕ್ಷನ್ 2 ಎಎ ಅದರಲ್ಲಿ ತಾವು "The Registrar of Co-operative Societies Shall be the Director of Co-operative Audit for the State. "ಎಂದು ಹೇಳಿದ್ದೀರಿ. 1970-71ನೇ ಇಸವಿಯಲ್ಲಿ ಅಂದಿನ ಪಬ್ಲಿಕ್ ಅಕೌಂಟ್ಸ್ ಕಮಿಟಿ ತನ್ನ ಒಂದು ವರದಿಯನ್ನು ಕೊಟ್ಟಿತ್ತು. ಅದಾದ ನಂತರ 1977ನೇ ಇಸವಿಯಲ್ಲಿ ತುಕ್ಕೊಳ್ ವೇತನ ಆಯೋಗವು ಕೂಡ ಒಂದು ವರದಿಯನ್ನು ಕೊಟ್ಟಿತ್ತು. ಮುಂಚೆಯು ಕೂಡ ಎರಡು ಒಟ್ಟಿಗೆ ಸೇರಿ ಮರ್ಜ್ ಆಗಿ ರಿಜಿಸ್ಟಾರ್‌ರವರೆ ಅಡಿಟ್ ನೋಡಿಕೊಳ್ಳುವ ಒಂದು ಪದ್ಧತಿ ಇತ್ತು. ಅವತ್ತು ಅದನ್ನೂ ಪ್ರತ್ಯೇಕಗೊಳಿಸಲಾಯಿತು. ಸಹಕಾರಸಂಘಗಳ ಲೆಕ್ಕಪರಿಶೋಧನೆ ನಿಷ್ಪಕ್ಷಪಾತವಾಗಿ ಹಾಗೂ ಪ್ರಭಾವರಹಿತವಾಗಿ ಕಾರ್ಯನಿರ್ವಹಿಸಬೇಕೆನ್ನುವ ಉದ್ದೇಶದಿಂದ ಪ್ರತ್ಯೇಕಗೊಳಿಸಿದರು. ಯಾರ ಮೇಲೂ ನಿಯಂತ್ರಣವಿರಬಾರದು, ಅದಕೋಸ್ಕರ ಅದನ್ನು ಪ್ರತ್ಯೇಕಗೊಳಿಸಲಾಗಿತ್ತು. ಆದರೆ ಬಹಳ ಮುಖ್ಯವಾದುದು ಈ ರಿಜಿಸ್ಟಾರ್ ಏನಿದ್ದಾರೆ, ಈ ರಿಜಿಸ್ಟಾರ್ ಇಲಾಖೆಯ ಎಲ್ಲಾ ಶ್ರೇಣಿಯ ಅಧಿಕಾರಿಗಳು ಸಹಕಾರಸಂಘಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವರೆ ಒಂದೊಂದು ಪೊಸಿಷನ್ ನಲ್ಲಿರುವುದು, ಅವರ ಪ್ರಭಾವದಿಂದ ಲೆಕ್ಕಪರಿಶೋಧಕರನ್ನು ಮುಕ್ತರನ್ನಾಗಿಸುವ ಘನ ಉದ್ದೇಶವನ್ನು ಹೊಂದಲಾಗಿತ್ತು, ಅದಕೋಸ್ಕರ ಅವತ್ತು ಪ್ರತ್ಯೇಕಗೊಳಿಸಲಾಗಿತ್ತು. ಅದಾದಮೇಲೆ ಆಡಳಿತಾತ್ಮಕ ನಿರ್ಧಾರಗಳು ಲೆಕ್ಕಪರಿಶೋಧನೆಯನ್ನು ಪ್ರಭಾವಗೊಳಿಸಕೂಡದು, ಯಾವತ್ತು ಆ ಶಿಫಾರಸ್ಸು ಇರಬಾರದು. ಇನ್ನೊಂದು ಸಹಕಾರ ಸಂಘಗಳಲ್ಲಿ ಕಾರ್ಯನಿರ್ವಾಹಕರಾದಂಥವರು ತಮ್ಮ ಅವಧಿಯಾದ ನಂತರ ನನ್ನ ಕಾಲದಲ್ಲಿ ಹಣಕಾಸಿನ ಸ್ಥಿತಿ ಏನಾಯಿತು ಎಂದು ಅವರೇ ವೆರಿಫೈ ಮಾಡುವುದಕ್ಕೆ ಅವರೆ ಇನ್ವೆಸ್ಟಿಗೇಟ್ ಮಾಡುವುದಕ್ಕೆ ಕುಳಿತುಕೊಂಡರೆ ಏನಾಗುತ್ತದೆ? ನಮ್ಮ ಆತಂಕ, ನಮ್ಮ ವಿರೋಧವಿರುವುದು ಇದೊಂದರಲ್ಲಿ, ದಯವಿಟ್ಟು ಇದನ್ನು ಮರ್ಜ್ ಮಾಡದೆ ಈಗ ಹೇಗೆ ಪ್ರತ್ಯೇಕವಾಗಿದೆ ಅದನ್ನು ಮುಂದುವರೆಸಿದರೆ ಖಂಡಿತವಾಗಿ ಈ ವಿಧೇಯಕವನ್ನು ಅವಿರೋಧವಾಗಿ ಅನುಮೋದಿಸಿಕೊಂಡು ಮುಂದಕ್ಕೆ ಹೋಗಬಹುದು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಸುರೇಶ್ ಕುಮಾರ್ ರವರು ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಅದಕ್ಕೆ ನಾನು ಸಂಪೂರ್ಣವಾದ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಏಕೆಂದರೆ, ಈ ರೀತಿ ಮರ್ಜ್ ಮಾಡುವುದರಿಂದ ಅನುಕೂಲಗಳೇನಿದ್ದಾವೆ? ಲೆಕ್ಕಪರಿಶೋಧನೆ ಯಾವಾಗಲೂ ಪ್ರತ್ಯೇಕವಾಗಿರಬೇಕು. ಅವರು ಸೂಪರ್ ವೈಸಿಂಗ್ ನೇಚರ್‌ನಲ್ಲಿದ್ದರೆ ಅವರು ಪ್ರತ್ಯೇಕವಾಗಿರಬಹುದು. ಇದನ್ನೆ ನೀವು ಕೋ ಆಪರೇಟಿವ್ಸ್‌ಗೆ ಮರ್ಜ್ ಮಾಡಿದಾಗ ಏನಾಗುತ್ತದೆಂದರೆ ಈ ಲೆಕ್ಕಪರಿಶೋಧನೆ ವಿಶೇಷವಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುವುದು ಕಷ್ಟವಾಗುತ್ತದೆ. ಈಗ ಏನು ಪ್ರತ್ಯೇಕಗೊಳಿಸಿ ಡೈರಕ್ಟರೇಟ್ ಆಫ್ ಆಡಿಟ್ ಎಲ್ಲಾ ಇದೆ ಅದನ್ನು ಹಾಗೆಯೇ ಮುಂದುವರೆಸಿಕೊಂಡು ಹೋಗುವುದರಿಂದ ಒಳ್ಳೆಯದಾಗುತ್ತದೆ. ಅದರಿಂದೇನೂ ತೊಂದರೆಯಾಗುವುದಿಲ್ಲ. ಮತ್ತೆ ಈಗೇನು ಮರ್ಜ್ ಮಾಡಬೇಕೆಂದು ತಂದಿದ್ದೀರಿ, ಅದರಿಂದ ಯಾವ ಅನುಕೂಲವು ಇಲ್ಲ, ಏನಾದರೂ

ಅನುಕೂಲವಿದ್ದರೆ ನಮ್ಮದೇನೂ ಅಭ್ಯಂತರವಿಲ್ಲ. ಆದುದರಿಂದ ದಯಮಾಡಿ ಅದನ್ನು ಪುನರ್ ಪರಿಶೀಲನೆ ಮಾಡಿ ಯಥಾಸ್ಥಿತಿಯನ್ನು ಕಾಪಾಡಿಕೊಂಡು ಹೋಗುವುದು ಒಳ್ಳೆಯದು.

ಶ್ರೀ ವಿಶ್ವೇಶ್ವರ ಹೆಗ್ಡೆ (ಅಂಕೋಲ) : ಇವರು ಬೇರೆ ಬೇರೆ ಅಂಶಗಳ ಜೊತೆಗೆ ಸಹಕಾರ ಕಲ್ಯಾಣ ನಿಧಿಯನ್ನು ಮಾಡಬೇಕೆನ್ನುವ ಒಂದು ಪ್ರಮುಖ ವಿಷಯವನ್ನು ಇಟ್ಟಿದ್ದಾರೆ ಶೇಕಡ ಐದರಷ್ಟನ್ನು ಕಲ್ಯಾಣ ನಿಧಿಗೆ ಕೊಡಬೇಕು, ಅದನ್ನು ರಾಜ್ಯದಲ್ಲಿ ಹಣ ಸಂಗ್ರಹಣೆ ಮಾಡಿಟ್ಟುಕೊಂಡು ಸಹಕಾರಿಗಳಿಗೇನಾದರೂ ಅನಾರೋಗ್ಯವಾದರೆ, ಅವರ ಮಕ್ಕಳಿಗೆ ಉನ್ನತ ಶಿಕ್ಷಣಕ್ಕೆ ಇತ್ಯಾದಿಗಳಿಗೆ ಬೇಕಾದರೆ ಕೊಡುವುದಕ್ಕೆಂದು ಇಟ್ಟುಕೊಂಡಿರುವುದು. ಆದರೆ ನಮ್ಮ ಊರಿನ ಸಹಕಾರ ಸಂಘ ಲಾಭ ಮಾಡಿ ಶೇಕಡ 5 ರಷ್ಟು ರಾಜ್ಯಕ್ಕೆ ಕೊಟ್ಟು ಆಮೇಲೆ ಯಾವ ಶಿಫಾರಸ್ಸು ಉಪಯೋಗ ಮಾಡಿಕೊಂಡು ನಮ್ಮ ಸಹಕಾರಿಗಳಿಗೆ ಉನ್ನತ ಶಿಕ್ಷಣ ಇತ್ಯಾದಿಗಳನ್ನು ಮಾಡಿಕೊಳ್ಳುವುದಕ್ಕಾಗುತ್ತದೆ? ಆದುದರಿಂದ ಇದು ಸಹಕಾರಿ ತತ್ವಕ್ಕೆ ವಿರುದ್ಧವಾದುದು ಎನ್ನುವುದು ನನ್ನ ಬಲವಾದ ಭಾವನೆಯಾಗಿದೆ. ಏಕೆಂದರೆ ನಮ್ಮ ಊರಿನಲ್ಲಿರುವ ಸಹಕಾರಿ ಸಂಘ ಲಾಭ ಮಾಡಿದರೆ, ನಮ್ಮ ಊರಿನ ಸಹಕಾರಿ ಸಂಘದ ಸದಸ್ಯರಿಗೆ ಆ ಲಾಭ ಮುಟ್ಟಬೇಕೇ ಹೊರತು ರಾಜ್ಯಮಟ್ಟದಲ್ಲಿ ನಿಧಿ ಮಾಡಿಕೊಂಡು ಇಲ್ಲಿ ಮಂತ್ರಿಗಳಿಗೆ ಅಥವಾ ಸರ್ಕಾರಕ್ಕೆ ಇನ್ನ್ಯಾರಿಗೋ ಬೇಕಾದವರಿಗೆ ಕೊಡುವಂತಾಗಬಾರದು. ಹಾಗಾಗಿ ಸಹಕಾರಿ ಸಂಘಗಳು ಕಲ್ಯಾಣ ನಿಧಿಗಳನ್ನು ಅವರವರಲ್ಲೇ ಸ್ಥಾಪಿಸಿಕೊಳ್ಳಲಿ, ಆದರೆ ರಾಜ್ಯಮಟ್ಟದಲ್ಲಿ ಈ ರೀತಿ ಕಲ್ಯಾಣ ನಿಧಿಯನ್ನು ಮಾಡುವುದು ಯೋಗ್ಯವಲ್ಲ. ಇದನ್ನು ಸಂಪೂರ್ಣವಾಗಿ ಕೈಬಿಡಬೇಕೆನ್ನುವ ಒಂದು ಆಗ್ರಹವನ್ನು ನಾನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಬಯಸುತ್ತೇನೆ.

ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ತಾವು subject to the provisions of Section 128 ಎಂದು ಮಾಡಿದ್ದೀರಿ, ಅದರ ಅವಶ್ಯಕತೆ ಇಲ್ಲ. ದಯವಿಟ್ಟು ಅದನ್ನು ಕೈಬಿಡಬೇಕು ಎನ್ನುವುದು ನನ್ನ ಅಭಿಪ್ರಾಯ. ಮತ್ತೆ ಸೆಕ್ಷನ್ 24ರಲ್ಲಿ 500 ರೂಪಾಯಿ ಇದ್ದುದ್ದನ್ನು ಒಂದೇ ಸಾರಿ ಒಂದು ಲಕ್ಷ ರೂ. ಎಂದು ಬದಲಾವಣೆ ಮಾಡಿದ್ದೀರಿ. ದಯವಿಟ್ಟು ಅಷ್ಟು ದೊಡ್ಡ ಮೊತ್ತ ಇಟ್ಟಿರುವುದು ಸಮಂಜಸವಲ್ಲ, ದಯವಿಟ್ಟು ಅದನ್ನು ರೀ ಕನ್ಸಿಡರ್ ಮಾಡಬೇಕು, 500 ರೂಪಾಯಿ ಇದ್ದದನ್ನು 1000ರೂಪಾಯಿ ಮಾಡಿದರೆ ಸಾಕು ಎನ್ನುವುದು ನನ್ನ ಅಭಿಪ್ರಾಯ, ಮತ್ತೆ ಅದು ತಮ್ಮ ಅವಗಾಹನೆಗೆ ಬಿಟ್ಟದ್ದು, ಅದೇ ರೀತಿ ಸೆಕ್ಷನ್ 28ಕ್ಕೆ ಈಗಿರುವಂತೆ ಅದರ ಕೊನೆಯಲ್ಲಿ ಇನ್ ದಿ ಬೈಲಾಸ್ ಎಂದು ಸೇರಿಸಿದರೆ ಸಾಕು, ಬಾಕಿದ್ದು ಅವಶ್ಯಕತೆ ಇಲ್ಲ. ನಾನು ಎಲ್ಲವನ್ನೂ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ, ಪ್ರಮುಖವಾದ ಅಂಶಗಳನ್ನು ಮಾತ್ರ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಅದೇ ರೀತಿ ಸೆಕ್ಷನ್ 28ಎ ಗೆ not less than nine ಎನ್ನುವವರೆಗೆ ಇರುವುದನ್ನು ಮಾತ್ರ ಉಳಿಸಿ ಬಾಕಿ ಎಲ್ಲಾ ಕ್ಲಾಸ್ ಗಳನ್ನು ತೆಗೆಯಬೇಕು, ಬಾಕಿಯದು ಅವಶ್ಯಕತೆ ಇಲ್ಲ, ಅಷ್ಟು ಮಾಡಿದರೆ ಸರಿಯಾಗುತ್ತದೆ ಎನ್ನುವುದು ನನ್ನ ಭಾವನೆ. ಮತ್ತೆ ಈಗಾಗಲೇ ನಮ್ಮ ವಿಶ್ವೇಶ್ವರ ಹೆಗ್ಡೆಯವರು ಪ್ರಸ್ತಾಪ ಮಾಡಿದರು, ಇದನ್ನು ಮಾಡುವುದಿದ್ದರೂ ಕೂಡ ಸಹಕಾರ ಕಲ್ಯಾಣ ನಿಧಿಯನ್ನು ಹೇಗೆ ಸ್ಥಾಪನೆ ಮಾಡುವುದೆನ್ನುವುದರ ವಿವರಣೆಯನ್ನು ಕೊಡಲಿಲ್ಲ, ಆ ವಿವರಣೆಯನ್ನು ಕೊಡಬೇಕು, ಬಾಕಿಯದೆಲ್ಲವನ್ನೂ ನಾವು ಸ್ವಾಗತ ಮಾಡುತ್ತೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಈ ನಾಮಿನೇಷನ್ ಅಧಿಕಾರವನ್ನು ಮೂರು ಜನರನ್ನು ನಾಮಿನೇಟ್ ಮಾಡುತ್ತೇವೆಂದು ತಾವೇನು ತೆಗೆದುಕೊಂಡಿದ್ದೀರಿ, ಅವರಿಗೆ ನೀವು ಓಟಿಂಗ್ ಹಕ್ಕು ಕೊಟ್ಟಿದ್ದೀರಾ ಎನ್ನುವುದನ್ನು ಇಲ್ಲಿ ಸ್ಪಷ್ಟನೆ ಮಾಡಿಲ್ಲ. ಆಮೇಲೆ ಸೆಕ್ಷನ್ 30ರ ಪ್ರಕಾರ ನೀವು ವಿಶೇಷಾಧಿಕಾರಿಯನ್ನು ನೇಮಕ ಮಾಡುತ್ತೀರಿ, ಆ ವಿಶೇಷಾಧಿಕಾರಿ ಅವಧಿ ಮೊದಲು 6 ತಿಂಗಳೂ ಎಂದು ಹೇಳುತ್ತೀರಿ, ಆಮೇಲೆ 6 ತಿಂಗಳು ವಿಸ್ತರಿಸಬೇಕೆಂದು ಹೇಳುತ್ತೀರಿ ಇದು ಅರ್ಥವಾಗಲಿಲ್ಲ, ಈಗ ಒಂದು ವರ್ಷವಿತ್ತು ಅದನ್ನು 6ತಿಂಗಳು ಮಾಡಿದ್ದೀರಿ. ಆದರೆ ಸಂದರ್ಭಾನುಸಾರ ಮತ್ತೆ ವಿಸ್ತರಿಸಬಹುದು ಆ ರೀತಿ ವಿಸ್ತರಿಸುವುದು ಬೇಕಾಗಿಲ್ಲ, ಆ ತ ಆರು ತಿಂಗಳೊಳಗೆ ಚುನಾವಣೆ ಮಾಡುವುದಕ್ಕೆ ಅವನು ಅವಕಾಶ ಮಾಡಿಕೊಡಬೇಕು, during that period of that six months ... ಎನ್ನುವುದನ್ನು ತೆಗೆದು ಹಾಕಬೇಕು. ಈ ವಿಶೇಷಾಧಿಕಾರಿ ಈ 6 ತಿಂಗಳಾವಧಿಯಲ್ಲಿ ಆತನಿಗೆ ಎಲ್ಲಾ ಹಕ್ಕು ಇರಬಹುದು ಆದರೆ ಸದಸ್ಯತ್ವ ಮಾಡುವ ಹಕ್ಕನ್ನು ಆತನಿಗೆ ಕೊಡಬಾರದು all the powers which can be exercised ಎಂದಾಗ ಆತ ಯಾರನ್ನು ಬೇಕಾದರೆ ಸದಸ್ಯತ್ವ ಮಾಡಿ ಬೇರೆ ಚುನಾವಣೆ ಮಾಡುವ ರಾಜಕೀಯ ಮಾಡುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಆತನಿಗೆ ನಾಮಿನೇಟ್ ಮಾಡುವ ಅಥವಾ ಸದಸ್ಯತ್ವ ಮಾಡುವ, ಎಲಿಜಿಬಿಲಿಟಿ ಡಿಸೈಡ್ ಮಾಡುವ ಹಕ್ಕನ್ನು ಅವನಿಗೆ ಕೊಡಬಾರದೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಮತ್ತೆ 6 ತಿಂಗಳೊಳಗೆ ಚುನಾವಣೆ ಮಾಡುವುದಕ್ಕೆ ಕ್ರಮತೆಗೆದುಕೊಳ್ಳಬೇಕು, ಆತ ಒಂದು ವೇಳೆ ಮಾಡಲಿಲ್ಲವೆಂದರೆ ಸೆಕ್ಷನ್ 109ರ ಪ್ರಕಾರ ಅವನ ಮೇಲೆ ನೀವು ಕ್ರಮ ತೆಗೆದುಕೊಳ್ಳಬೇಕು. ಯಾರನ್ನು ನೀವು ವಿಶೇಷಾಧಿಕಾರಿಯನ್ನಾಗಿ ಮಾಡಿರುತ್ತೀರಿ, ಆತ ಆರು ತಿಂಗಳೊಳಗೆ ಚುನಾವಣೆಯನ್ನು ಮಾಡದಿದ್ದರೆ ಅವನ ಮೇಲೆ ಕ್ರಮ ತೆಗೆದುಕೊಳ್ಳುವ ಅಧಕಾರವನ್ನೂ ಕೂಡ ಸೆಕ್ಷನ್ 109ರ ಪ್ರಕಾರ ಇದರಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಸನ್ಮಾನ್ಯ ಅಧ್ಯಕ್ಷರೆ, 1977ನೇ ಇಸವಿಯವರೆಗೆ ಈ ಆಡಿಟರ್, ರಿಜಿಸ್ಟ್ರಾರ್ ಒಬ್ಬರೇ ಇದ್ದರು. ಆಗ ಒಂದು ಭಾರಿ ತೀರ್ಮಾನಗಳನ್ನು ತೆಗೆದುಕೊಂಡು, ಇವರ ನಾಯಕರಾದ ದೇವೇಗೌಡರು, ಸನ್ಮಾನ್ಯ ನಂಜೇಗೌಡರು ಆ ಸಮಿತಿಯಲ್ಲಿದ್ದರು. ದೇವೇಗೌಡರೇ ಅದರ ಅಧ್ಯಕ್ಷರಾಗಿದ್ದು ಆಡಿಟ್ ವಿಂಗ್‌ಅನ್ನು ಪ್ರತ್ಯೇಕಗೊಳಿಸದೆ ಹೋದರೆ ರಿಜಿಸ್ಟ್ರಾರ್ ರವರ ಕಛೇರಿ ಏನಿದೆ ಅವರೆ ನೋಂದಣಿ ಮಾಡುವುದು, ಅವರೆ ಆಡಳಿತವನ್ನು ನಡೆಸುವುದು, ಅವರೆ ಲೆಕ್ಕಪತ್ರ ಪರಿಶೀಲನೆ ಮಾಡುವುದು, ಅವರೆ ಬೇಕಾದಕಡೆ ತಿದ್ದುಕೊಳ್ಳುವ ಕೆಲಸವಾಗುತ್ತದೆನ್ನುವ ಒಂದೇ ಘನ ಉದ್ದೇಶದಿಂದ ಈ ರಾಜ್ಯದಲ್ಲಿ ಆಡಿಟ್‌ವಿಂಗ್ ಪ್ರತ್ಯೇಕವಾಗಿರಬೇಕೆಂದು ನಿರ್ಣಯ ತೆಗೆದುಕೊಂಡರು. ಆ ಆಡಿಟ್ ವಿಂಗ್ ಪ್ರತೇಕವಾಗಿದ್ದರೆ ಕನಿಷ್ಟ ರಿಜಿಸ್ಟ್ರಾರ್ ಆಫ್ ಕೋ ಆಪರೇಟಿವ್ ಸೊಸೈಟೀಸ್ ನಿಯಂತ್ರಣದಲ್ಲಿ ಲೆಕ್ಕಪರಿಶೋಧನೆ ಉಳಿದುಕೊಂಡಿದ್ದರೆ ಇವತ್ತು ಸಹಕಾರ ಸಂಘಗಳು ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎನ್ನುವುದು ಜನರಲ್ ಬಾಡಿಗೆ ಅರ್ಥವಾಗುವುದು. ಇವತ್ತು ತಾವು ರಿಜಿಸ್ಟ್ರಾರ್ ರನ್ನೇ ಆಡಿಟರ್ ಆಫ್ ಕೋ ಆಪರೇಟಿವ್ ಸೊಸೈಟೀಸ್ ಮಾಡಿ, ಅವರು ನಿಮ್ಮ ನಿಯಂತ್ರಣದಲ್ಲಿ ಇರುವುದು. ಇದು ಪ್ರಿನ್ಸಿಪಲ್ ರಿಜಿಸ್ಟ್ರಾರ್ ಅಟಾನಮಸ್ ಆಗಿರಬೇಕು. ರಿಜಿಸ್ಟ್ರಾರ್

ಯಾವುದೇ ಸರ್ಕಾರದ ನಿಯಂತ್ರಣದಲ್ಲಿ ಇಲ್ಲದಾಗ, ಕಾರ್ಯದರ್ಶಿ ನಿಯಂತ್ರಣ ಅವರ ಮೇಲಿಲ್ಲದಾಗ, ಮಂತ್ರಿಗಳ ನಿಯಂತ್ರಣವಿಲ್ಲದಿದ್ದಾಗ ಅವರನ್ನು ಸ್ಟ್ರಿಕ್ಟ್ ಸೆನ್ಸ್‌ನಲ್ಲಿ ರಿಜಿಸ್ಟ್ರಾರ್ ಆಫ್ ಕೋ ಆಪರೇಟವ್ ಸೊಸೈಟೀಸ್ ಎಂದು ನಾವು ತೆಗೆದುಕೊಳ್ಳಬಹುದು. ರಿಜಿಸ್ಟ್ರಾರ್‌ಗೆ ನಿಮ್ಮಿಂದ ಕಾಲಕಾಲಕ್ಕೆ ನಿರ್ದೇಶನ ಹೋಗುವುದು, ಅವರು ಕಾಲಕಾಲಕ್ಕೆ ಸರ್ಕಾರದ ಮರ್ಜಿನಲ್ಲಿ ಕ್ರಮ ತೆಗೆದುಕೊಳ್ಳುವ ಕಾಲದಲ್ಲಿ ಆಡಿಟ್ ಅನ್ನೂ ಅವರ ಕೆಳಗೆ ತಂದಿರುವುದು ನ್ಯಾಯವೇ? ಅದರ ಬದಲಾಗಿ ಆಡಿಟ್ ವಿಂಗ್ ಅನ್ನು ಇನ್ನೂ ಬಲಗೊಳಿಸಬೇಕಾಗಿತ್ತು. ತಮಗೆ ನಿಜವಾಗಿ ಸಹಕಾರ ಸಂಘಗಳಲ್ಲಿ ಲೆಕ್ಕಪರಿಶೋಧನೆ ಚೆನ್ನಾಗಿ ಆಗಬೇಕೆಂದರೆ ಲೆಕ್ಕಪರಿಶೋಧನೆಯ ನಿರ್ದೇಶಕರಿದ್ದಾರೆ ಅವರಿಗೆ ಇನ್ನೂ ಹೆಚ್ಚಿನ ಶಕ್ತಿಯನ್ನು ತುಂಬಿ ಅದು ಚೆನ್ನಾಗಿ ಕೆಲಸ ಮಾಡುವಂತೆ ಮಾಡುವುದು ನಿಜವಾಗಿ ಆಗುತ್ತಿತ್ತು. ಇವರಿಬ್ಬರೂ ಕಾರ್ಯದರ್ಶಿಗಳ ಮುಖಾಂತರ ತಮ್ಮ ನಿಯಂತ್ರಣಕ್ಕೆ ಬಂದೇ ಬರುತ್ತಿದ್ದರು. ಡೈರೆಕ್ಟರ್ ಆಫ್ ಆಡಿಟ್ ಆಗಲಿ, ರಿಜಿಸ್ಟ್ರಾರ್ ಆಗಲಿ ನಿಮ್ಮ ಸರ್ಕಾರದ ಕಾರ್ಯದರ್ಶಿಗಳ ಕೆಳಗೆ ಇರುವುದರಿಂದ ತಮ್ಮ ಸರ್ಕಾರಕ್ಕೆ ನಿಯಂತ್ರಣವಿಲ್ಲವೆಂದೇನು ಭಾವಿಸಿದ್ದೀರಿ ಅದನೇನು ಹೋಗುತ್ತಿರಲಿಲ್ಲ. ದಯಮಾಡಿ ತಾವು ಮತ್ತೊಮ್ಮೆ ಪರಿಶೀಲನೆ ಮಾಡಬೇಕು. ಡೈರೆಕ್ಟರ್ ಆಫ್ ಆಡಿಟ್ ಪೋಸ್ಟ್ ಅನ್ನು ಮುಂದುವರೆಸಬೇಕು ಮತ್ತೆ statutory 441 Audit ಏನಿದೆ ಅದನ್ನು ಕಡ್ಡಾಯ ಮಾಡಬೇಕು. ನೀವೇನು ಚಾರ್ಟೆಡ್ ಅಕೌಂಟೆಂಟ್‌ನಿಂದ ಆಡಿಟ್ ಮಾಡಿಸಬಹುದೆಂದೇನು ಭಾವನೆ ಇಟ್ಟುಕೊಂಡಿದ್ದೀರಿ ಅದು ಖಂಡಿತವಾಗಿಯೂ ಸಾಧುವಲ್ಲವೆಂದು ಹೇಳುತ್ತೇನೆ. ವಿಶೇಷಾಧಿಕಾರಿಯನ್ನು ಏನು ನೇಮಕ ಮಾಡಬಹುದೆಂದು ಹೇಳುತ್ತೀರಿ, ಎಲ್ಲಾ ಕಡೆ ಇವರ ಅಧಿಕಾರ ಆರು ತಿಂಗಳೂ ಅಧಿಕಾರ ಎನ್ನುತ್ತಾರೆ ರಿಜಿಸ್ಟ್ರಾರ್ ಮನಸ್ಸು ಮಾಡಿದರೆ ಮತ್ತೆ 6 ತಿಂಗಳು ವಿಸ್ತರಿಸಬಹುದೆನ್ನುತ್ತಾರೆ ಅದು ಇನ್ನು ಒಂದು ವರ್ಷವೇ ಆಗುತ್ತದೆ. ಎಲ್ಲಾ ಸಹಕಾರ ಸಂಘಗಳು ರಿಜಿಸ್ಟ್ರಾರ್‌ಗೆ ಅಪೀಲ್ ಮಾಡಿಕೊಂಡು ಒಂದು ವರ್ಷದವರೆಗೂ ವಿಸ್ತರಿಸಿಕೊಂಡೇ ಹೋಗುತ್ತಾರೆ. ಅದು ಸೊಸೈಟಿ ಎಲೆಕ್ಷನ್ ಇರಲಿ. ಪ್ರೆಸಿಡೆಂಟ್ ಎಲೆಕ್ಷನ್ ಇರಲಿ, ಆರ್ ಸಿ ಎಸ್‌ಗೆ ಅಧಿಕಾರ ಇದ್ದರೆ, ತಮಗೆ ಅಧಿಕಾರ ಇದೆ. ಎಂದೇ ಅರ್ಥ. ತಾವು ಅಧಿಕಾರ ಇಟ್ಟುಕೊಂಡಾಗ ಅದನ್ನು ಚಲಾಯಿಸಲು ಆದರೆ ತಾನೇ ಮಂತ್ರಿಗಳು ಎಂದು ಆಗುವುದು. ಅದನ್ನು ತಾವು ಆರು ತಿಂಗಳಿಗೆ ನಿರ್ಬಂಧ ಮಾಡಬೇಕು. ಅದರಲ್ಲಿ ಎರಡನೇ ಮಾತಿಲ್ಲ. ಇನ್ನು ಚುನಾವಣಾ ಪ್ರಕ್ರಿಯೆಯ ಬಗ್ಗೆ ತಾವು ಏನು ಹೇಳಿದ್ದೀರಿ ಎಂದರೆ, the day it deems to be as quit the office ಎಂದು. ಅದಕ್ಕೆ ನೀವು ಎಲೆಕ್ಷನ್ ಕಮಿಷನ್ ಎಂದು ಒಂದು ಬಾಡಿಯನ್ನು ಮಾಡಬೇಕು. ಕೋ ಆಪರೇಟೀವ್ ಎಲೆಕ್ಷನ್‌ನಲ್ಲಿ ನಿಮ್ಮ ಕಡೆಯಿಂದ ಎಲೆಕ್ಷನ್ ಕಂಟ್ರೋಲ್ ಇಟ್ಟುಕೊಂಡು ಅವನು ಅವತ್ತೇ ಆಫೀಸ್ ಬಿಡಬೇಕು ಎನ್ನುವುದಕ್ಕಾಗುವುದಿಲ್ಲ. ಏಕೆಂದರೆ, ನೀವೇ ಎಕ್ಸ್‌ಟೆಂಡ್ ಮಾಡಿಬಿಟ್ಟಿದ್ದೀರಿ. ಪಾರ್ಲಿಮೆಂಟ್ ಎಲೆಕ್ಷನ್‌ಗೂ ಮತ್ತು ಕೋಆಪರೇಟೀವ್ ಸೊಸೈಟಿಗಳ ಎಲೆಕ್ಷನ್ ಗೂ ಏನೂ ಸಂಬಂಧವೇ ಇರಲಿಲ್ಲ. ಆದರೂ ನಿಮ್ಮ ಕಛೇರಿಯಿಂದಲೇ ಒಂದು ಆದೇಶ ಹೋಯಿತು. ಪಾರ್ಲಿಮೆಂಟ್ ಎಲೆಕ್ಷನ್ ಆಗುವವರೆಗೂ ಸಹಕಾರ ಸಂಘಗಳ ಚುನಾವಣೆಯನ್ನು ಮುಂದೂಡಿದ್ದೇವೆ ಎಂದು ಆದೇಶ ಹೋಯಿತು. ಆಗ ಕನ್‌ಫ್ಯೂಷನ್ ಕ್ರಿಯೇಟ್ ಆಯಿತು. ಚುನಾವಣೆಗೆ ಕ್ಯಾಲೆಂಡರ್ ಹಾಕಿದ್ದರೂ ಅದನ್ನು ವಿತ್ ಡ್ರಾ ಮಾಡಬೇಕು ಎಂದು ತಾವು ಆದೇಶದಲ್ಲಿ ಹಾಕಿದ್ದೀರಿ. ಆಗಲೇ

ಜನರಲ್ ಬಾಡಿಗೆ ರೆಡಿ ಮಾಡಿಕೊಂಡು, ಸದಸ್ಯರಿಗೆ ನೋಟೀಸ್ ಕೊಟ್ಟಿದ್ದಂಥ ಸಂಘದವರೂ ಕೂಡ ನಿಮ್ಮ ಆದೇಶವನ್ನು ನೋಡಿ ಮುಂದಕ್ಕೆ ಹಾಕಿ ಎಂದು ಹೇಳಿದರು. ಮತ್ತು ಆಫೀಸ್ ಬೇರರ್ಸ್ ಎಲೆಕ್ಷನ್, ಅಧ್ಯಕ್ಷರ ಚುನಾವಣೆ ಆಗಬೇಕಾಗಿತ್ತು. ಅವರಿಗ್ ಕನ್‌ಫ್ಯೂಷನ್ ಕ್ರಿಯೇಟ್ ಮಾಡಿದಿರಿ. ಮಾರ್ಚ್ ಕೊನೆಯೊಳಗೆ ಎಲ್ಲೆಲ್ಲಿ ಅಧ್ಯಕ್ಷರ ಚುನಾವಣೆ ಆಗಬೇಕಾಗಿತ್ತು, ಅದನ್ನು ಇನ್ನೂ ಮಾಡಲಿಲ್ಲ. ಏಕೆಂದರೆ, ಏಪ್ರಿಲ್ ಕೊನೆಯವರೆಗೆ ಮಾಡಬೇಡಿ ಎಂದು ಮಂತ್ರಿಗಳೇ ಹೇಳಿದ್ದಾರೆ, ನಾವು ಮಾಡುವ ಅಗತ್ಯವಿಲ್ಲ ಎಂದು ಹೇಳಿದ್ದಾರೆ. ಒಂದು ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಮೂರನೇ ಎರಡಕ್ಕಿಂತ ಕಡಿಮೆ ಕೋರಂ ಇದ್ದರೆ ಆಗ ಅಡ್ಮಿನಿಸ್ಟ್ರೇಟರ್ ಅನ್ನು ಹಾಕಬೇಕು ಎಂದು ತಾವು ಶಿಫಾರಸ್ಸು ಮಾಡಿದ್ದೀರಿ. ಹೀಗಾದರೆ, ಹಾಲಿನ ಸೊಸೈಟಿಯಲ್ಲಿ ಒಂದು ಸಮಸ್ಯೆ ಉದ್ಭವವಾಗುತ್ತದೆ. 150 ದಿವಸ ಕಡ್ಡಾಯವಾಗಿ ಹಾಲನ್ನು ಹಾಕದೇ ಹೋದರೆ, ಆ ಸೊಸೈಟಿಯಲ್ಲಿರುವ ಒಬ್ಬ ಸದಸ್ಯ ಡೈರೆಕ್ಟರ್ ಆಗಲು ಆಗುವುದಿಲ್ಲ. ಕೆಲವರು ಸ್ಕ್ರೂಟಿನಿ ಸಮಯದಲ್ಲಿ ಬಿದ್ದುಹೋಗುತ್ತಾರೆ, ಕೆಲವರು ಅರ್ಜಿ ಹಾಕುವಾಗ ಬಿದ್ದು ಹೋಗುತ್ತಾರೆ. ನಮ್ಮ ಕೋಆಪರೇಟೀವ್ ಪಿರಿಯಡ್ ಮೂರು ವರ್ಷ ಇದೆ. ಇದರ ಮಧ್ಯೆ ಚುನಾವಣೆ ಮಾಡಲು ಕಾಯಿದೆಯಲ್ಲಿ ಅವಕಾಶವನ್ನು ಕಲ್ಪಿಸಿಲ್ಲ. ಅದು ಮೊದಲೂ ಇರಲಿಲ್ಲ, ಈಗಲೂ ಅದಕ್ಕೆ ಪ್ರಾವಿಷನ್ ಮಾಡಿಲ್ಲ. ಚುನಾವಣೆ ಆಗುವ ಸಮಯದಲ್ಲಿ ಕೋರಂ ಬರದಿದ್ದರೆ ಏನು ಮಾಡಬೇಕು ಎಂದು ತಾವು ಹೇಳಿಲ್ಲ. ಒಂದು ಸಲ ಬಾಡಿ ಕಾನ್ಸ್ ಟಿಟ್ಯೂಟ್ ಮಾಡಿ ವೇಕನ್ಸಿ ಕ್ರಿಯೇಟ್ ಆದರೆ ನೀವು ಕೋಪ್-ಆಫ್ಟ್ ಮಾಡಬಹುದು ಅಥವಾ ಅಡ್ಮಿನಿಸ್ಟ್ರೇಟರ್ ಅನ್ನು ಹಾಕಬಹುದು ಎಂದು ಪ್ರಾವಿಷನ್ ಮಾಡಿಕೊಂಡಿದ್ದೀರಿ. ಆದರೆ ಚುನಾವಣೆಯ ಸಮಯದಲ್ಲೇ ಕೋರಂ ಬರದಿದ್ದರೆ, ಆ ಡೈರೆಕ್ಟರ್ 3 ವರ್ಷಗಳ ಕಾಲ ನಾನು ಡೈರೆಕ್ಟರ್ ಎಂದು ಕುಳಿತು ಕೊಳ್ಳುತ್ತಾನೆ. ಎಲೆಕ್ಟ್ ಆಗಿರುವ ನಾಲ್ಕು ಜನ ಡೈರೆಕ್ಟರ್‌ಗಳನ್ನು ನೀವು ಮನೆಗೆ ಕಳುಹಿಸಲು ಆಗುವುದಿಲ್ಲ. ನಾಲ್ಕು ಜನ ಡೈರೆಕ್ಟರುಗಳಿಂದ ಸೊಸೈಟಿಯನ್ನೂ ನಡೆಸಲು ಆಗುವುದಿಲ್ಲ. ಆ ಪ್ರಕ್ರಿಯೆಗೆ ತಾವು ಒಂದು ಅರ್ಥವನ್ನು ಕಲ್ಪಿಸಬೇಕು. ಏಕೆಂದರೆ, ಆ ಸಮಯದಲ್ಲಿ ಆಗಲಿಲ್ಲ ಎಂದರೆ ಮತ್ತೆ ನೀವು ಫಿಲ್-ಅಪ್ ಮಾಡಲು ಆಗುವುದಿಲ್ಲ.

ಅಧ್ಯಕ್ಷರು : ಕ್ವಾಲಿಫೈ ಆಗಿರತಕ್ಕಂಥ ಡೈರೆಕ್ಟರ್‌ಗಳು ಇಲ್ಲದೇ ಇರತಕ್ಕಂಥ ಸೊಸೈಟಿ, ಆಫೀಸ್ ಬೇರರ್ಸ್ ಅನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಏಕೆ ಇರಬೇಕು?

ಶ್ರೀ ಜೆ.ಸಿ. ಮಾಧುಸ್ವಾಮಿ : ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರನ್ನು ಕರೆದುಕೊಂಡು ಬಂದು ಅರ್ಜಿ ಹಾಕಿಸಬೇಕು. ನಾವು ಹಾಲು ಉತ್ಪಾದಕರ ಸಂಘಕ್ಕೆ ಮಹಿಳೆಯರನ್ನು ಕರೆದುಕೊಂಡು ಬಂದು ಅರ್ಜಿ ಹಾಕಿಸಬೇಕು. ಎಲ್ಲರೂ ಆಸಕ್ತಿಯಿಂದ ಇರುತ್ತಾರೆ ಎಂದು ತಾವು ಭಾವಿಸಬಾರದು.

ಅಧ್ಯಕ್ಷರು : ಹಾಲು ಹಾಕಿ, ಹಾಲು ಉತ್ಪಾದಕರಾಗಿ ಅರ್ಹತೆಯನ್ನು ಸಂಪಾದನೆ ಮಾಡಿಕೊಳ್ಳದೇ ಇರತಕ್ಕಂಥವರು ಇರುವ ಸಂಘ ಇದ್ದರೆಷ್ಟು, ಇಲ್ಲದಿದ್ದರೆ ಎಷ್ಟು. ಅದಕ್ಕೆ ಚುನಾವಣೆ ಏಕೆ ಆಗಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಸಂಘದ ಬಗ್ಗೆ ಮಾತನಾಡುತ್ತಿಲ್ಲ. ಅಲ್ಲಿ ಡೈರೆಕ್ಟರ್ ಆಗಿ ಚುನಾಯಿತರಾಗಿ ಬಂದಂಥ ನಾಲ್ಕು ಜನರ ಗತಿ ಏನು? ಅವರನ್ನು ಇವರು ಮನೆಗೂ ಕಳುಹಿಸಲು ಆಗುವುದಿಲ್ಲ. ಇನ್ನೂ 5 ಜನರ ಹುದ್ದೆ ಖಾಲಿ ಉಳಿದು ಬಿಡುತ್ತಾರೆ. ಅದಕ್ಕೆ ನೀವು ಕಾಯಿದೆಯಲ್ಲಿ

ಏನಾದರೊಂದು ಪರಿಹಾರವನ್ನು ಸೂಚಿಸಬೇಕು. ಒಂದು ವಿಷಯವನ್ನು ನಾನು ಬಹಳ ನೋವಿನಿಂದ ಹೇಳಬೇಕಾಗಿದೆ. ಸಂಘದಿಂದ ಸಂಘ ಮೆಂಬರ್ ಇರುವ ಕಡೆ ಅಫಿಲಿಯೇಟ್ ಸಂಘಗಳು ಡೀಫಾಲ್ಟ್ ಎನ್ನುವುದನ್ನು ತಾವು ಹಿಂದಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಇದು ಒಂದು ದೊಡ್ಡ ಕುತಂತ್ರ. ಏಪ್ರಿಲ್ 15ನೇ ತಾರೀಖಿನೊಳಗೆ ಡಿಸಿಸಿ ಬ್ಯಾಂಕಿಗೆ ಅಡ್ಜಸ್ಟ್‌ಮೆಂಟ್ ಆಗಿರುವ ಸರಕಾರ ಸಂಘ ಮಾತ್ರ eligible to vote and contest. ಎಂದು ಮಾಡುತ್ತಾರೆ. ಮಾರ್ಚ್ 31ನೇ ತಾರೀಖು ರೆಕವರಿ ಮಾಡಿದರೂ ಅದರ ಮುಂದೆ ನಡೆಸುವ ಜನರಲ್ ಬಾಡಿಗೆ ಅವರು ವೋಟರ್ ಆಗುವುದಿಲ್ಲ. ಅಭ್ಯರ್ಥಿಯೂ ಆಗುವುದಿಲ್ಲ. ಈ ಷಡ್ಯಂತ್ರದಿಂದ ತಾವು ಆಚೆ ಬರಬೇಕು. ಸಂಘವನ್ನು ಏಕೆ ನೀವು ಸುಸ್ತಿ ಎಂದು ಹೇಳುತ್ತೀರಿ? ಜನರಲ್ ಬಾಡಿಯೇ ಬೇರೆ, ವಸೂಲು ಮಾಡುವುದೇ ಬೇರೆ ಎಂದು ನೀವು ಮಾಡಿ. ಯಾವ ಸದಸ್ಯ ನಿಮ್ಮ ಸಂಘಕ್ಕೆ ದುಡ್ಡು ಕೊಡುವುದಿಲ್ಲ ಆತನು ಆ ಸಂಘದ ಓಟರ್ ಆಗುವುದಕ್ಕೆ ಮತ್ತು ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸಲು ನಿರ್ಬಂಧ ಇಡಬೇಕಾದುದು ಸರಿ. ಆದರೆ ಡೀಫಾಲ್ಟ್ ಎಂದು ಇರುವುದರಿಂದ ನಮ್ಮ ಇಡೀ ಜಿಲ್ಲೆಯಲ್ಲಿ ಪ್ರತಿಸಲ ಚುನಾವಣಾ ಸಮಯದಲ್ಲಿ ಒಂದೇ ಒಂದು ಪಿಎಲ್ ಡಿ ಬ್ಯಾಂಕಿನವರು ಎಲಿಜಬಲ್ ಆಗುತ್ತಾರೆ. ಅವರೊಬ್ಬರೇ ಡೈರೆಕ್ಟರ್ ಆಗುತ್ತಾರೆ.

ಅಧ್ಯಕ್ಷರು : ಬೇರೆ ಅಫೆಕ್ಸ್ ಇನ್ಸ್‌ಟಿಟ್ಯೂಷನ್‌ಗಳಲ್ಲೂ ಕೂಡ ಒಂದು ಸಲ ಡೈರೆಕ್ಟರ್ ಆಗಿ ಬಂದು ಬಿಟ್ಟರೆ he manages to see that other institutions in the District remain defaulters. ಅವರಿಗೆ ಕ್ವಾಲಿಫಿಕೇಷನ್ ಬರದಂತೆ ಮಾಡಿ ಖಾಯಂ ಆಗಿ ತಾವೇ ಡೈರೆಕ್ಟರ್ ಆಗಿ ಇರುತ್ತಾರೆ. ಅದು ಹೌಸ್ ಬಿಲ್ಡಿಂಗ್ ಆಗಬಹುದು, ಇನ್ನೊಂದು ಆಗಬಹುದು, ಮತ್ತೊಂದು ಆಗಬಹುದು. ಇದು ತಮಗೆಲ್ಲಾ ಗೊತ್ತಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅದಕ್ಕೆ ತಾವು ಏನಾದರೂ ಮಾಡಬೇಕೆಂದು ಹೇಳುತ್ತೇನೆ. ಇನ್ನು, ಯಾವುದೇ ಸದಸ್ಯ ಸಹಕಾರ ಸಂಘದ ಸದಸ್ಯರಾಗಲು ಅಡ್ಡಿ ಆತಂಕಗಳಿರಬಾರದು ಎಂದು ಹೇಳಿದ್ದೀರಿ. ಆದರೆ ಪಿಎಲ್ ಡಿ ಬ್ಯಾಂಕಿನಲ್ಲಿ ಇವತ್ತು ಈ ಸ್ಥಿತಿ ಇಲ್ಲ. ತಾವು ತಿಪಟೂರು ಪಿಎಲ್‌ಡಿ ಬ್ಯಾಂಕನ್ನು ವಿಚಾರಣೆ ಮಾಡಿ ನೋಡಿ. ಯಾರಾದರೂ ಅಪ್ಲಿಕೇಷನ್ ತೆಗೆದುಕೊಳ್ಳಬೇಕು ಎಂದರೆ ಅದನ್ನು ಮ್ಯಾನೇಜ್ ಮೆಂಟ್ ನವರು ಒಪ್ಪಿ ಅರ್ಜಿಯನ್ನು ಕೊಡಬೇಕಾಗಿದೆ. ನಾನು ಶೇರ್ ಹಾಕುತ್ತೇನೆ, ನಾನು ಸಾಲ ತೆಗೆದುಕೊಳ್ಳುತ್ತೇನೆ, ಸದಸ್ಯತ್ವ ತೆಗೆದುಕೊಳ್ಳುತ್ತೇನೆ ಎಂದರೆ ಪಿಎಲ್‌ಡಿ ಬ್ಯಾಂಕಿನಲ್ಲಿ ಅದನ್ನು ಕೊಡುವ ಸ್ಥಿತಿ ನಿರ್ಮಾಣವಾಗಿಲ್ಲ. ಯಾರಿಗೆ ಸಾಲ ಕೊಡಬೇಕು, ಅವನು ಮುಂದಿನ ಸಲ ನನಗೆ ಓಟು ಹಾಕುತ್ತಾನೋ, ಇಲ್ಲವೋ ಎಂದು ನೋಡುವ ಸ್ಥಿತಿ ನಿರ್ಮಾಣವಾಗಿದೆ. ಬೋರ್ಡ್ ಮುಂದೆ ರೆಸೆಲ್ಯೂಷನ್ ಪಾಸ್ ಆಗಿ ಲೋನ್ ಅಪ್ಲಿಕೇಷನ್ ಅನ್ನು ಸ್ಯಾಂಕ್ಷನ್‌ಗೆ ಕಳುಹಿಸಬೇಕು ಎನ್ನುವ ಒಂದೇ ಒಂದು ಸಣ್ಣ ಕಾರಣಕ್ಕಾಗಿ ಸುಮಾರು ಲೋನ್ ಅಪ್ಲಿಕೇಷನ್‌ಗಳು ಪೆಂಡಿಂಗ್‌ನಲ್ಲಿವೆ. ಇದನ್ನು ತಾವು ತೆಗೆದು ಹಾಕಬೇಕು. ಸಾಲ ತೆಗೆದುಕೊಳ್ಳುವುದು ರೈತನ ಹಕ್ಕು. ಸಹಕಾರ ಸಂಘಕ್ಕೆ ಸದಸ್ಯನಾಗುವುದು ಅವನ ಹಕ್ಕು. ನಾನು ಇವತ್ತು ಆಫೀಸ್ ಬೇರರ್ ಆಗಿದ್ದೇನೆ ಎನ್ನುವ ಒಂದೇ ಕಾರಣಕ್ಕಾಗಿ ಇನ್ನೊಬ್ಬನನ್ನು ಅಲ್ಲಿ ಶೇರ್ ಹೋಲ್ಡರ್ ಆಗುವುದನ್ನು ನಿರ್ಬಂಧ ಮಾಡುವುದು, ಅವನಿಗೆ ಸಾಲ ಸಿಕ್ಕುವುದನ್ನು

ತಡೆಯುವಂಥ ಸೊಸೈಟಿಗಳಿಗೆ ಕಠಿಣವಾದಂಥ ಕ್ರಮವನ್ನು ತಾವು ಕಾಯಿದೆಯಲ್ಲಿ ಮಾಡಬೇಕು. ಇನ್ನು, ನಾಮಮಿನೇಷನ್ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಅದಕ್ಕಾಗಿ ನಾನು ಸಹಕಾರ ಸಚಿವರನ್ನು ಮೆಚ್ಚಿಕೊಳ್ಳುತ್ತೇನೆ. 10 ಲಕ್ಷಕ್ಕಿಂತ ಕೆಳಗಿರತಕ್ಕಂಥ ಸೊಸೈಟಿಗಳಿಗೆ ಓಟು ಹಾಕುವಂಥ ಡೈರೆಕ್ಟರ್ ಇರಬಾರದು ಎಂದು ಹೇಳಿದ್ದೀರಿ. ಇದರಲ್ಲಿ ಮಂತ್ರಿಗಳು ಅಭಿನಂದನಾರ್ಹರು. ಇನ್ನೊಂದು ಮಾತನ್ನು ಕೇಳುತ್ತೇನೆ, ಅವರಿಗೆ ಪ್ರಥಮದಲ್ಲೇ 5 ವರ್ಷವನ್ನು ಮುಂದುವರೆಸಬಹುದಾಗಿತ್ತು. ಮುಂದಿನ ಸಲ ಚುನಾವಣೆ ಆದಮೇಲೆ ಆ ಬೋರ್ಡ್ 5 ವರ್ಷ ಅಧಿಕಾರದಲ್ಲಿ ಇರುತ್ತದೆ ಎಂದು ತಾವು ಪ್ರಾವಿಷನ್ ಮಾಡಿದ್ದೀರಿ. ಈಗ ಇರುವವರಿಗೂ 5 ವರ್ಷ ಅಧಿಕಾರವನ್ನು ಕೊಡಬಹುದು. ಇದರಲ್ಲೇನೂ ತಪ್ಪಾಗುವುದಿಲ್ಲ. ನಾನು ನಿಮ್ಮನ್ನು ಒಂದು ಪ್ರಶ್ನೆ ಕೇಳಲು ಇಷ್ಟಪಡುತ್ತೇನೆ. ಅಧ್ಯಕ್ಷರ ಅವಧಿಯ ಬಗ್ಗೆ ತಾವು ಒಂದು ಸ್ಪಷ್ಟೀಕರಣವನ್ನು ಕೊಡಬೇಕು. ಅದು ಒಂದು ವರ್ಷಕ್ಕಿಂದ ಹೆಚ್ಚು ಇದ್ದರೆ, ದಯಮಾಡಿ ಆತನನ್ನು ಇಂಪೀಚ್ ಮಾಡಲು ಅವಕಾಶ ಮಾಡಬೇಕು. ಇದರಲ್ಲಿ ಎರಡನೇ ಮಾತಿಲ್ಲ. ಅಧ್ಯಕ್ಷರಿಗೆ ಎರಡೂವರೆ ವರ್ಷ ಅಧಿಕಾರ ಕೊಡುತ್ತೇವೆ ಎಂದರೆ ಸಹಕಾರ ಸಂಘದ ನಿರ್ದೇಶಕರು ಆತನ ಮೇಲೆ ಅವಿಶ್ವಾಸ ಬಂದಾಗ ಆತನನ್ನು ಕೆಳಗಿಳಿಸುವ ಅಧಿಕಾರವನ್ನು ತಾವು ಕೊಡಬೇಕು. ಇಡೀ ಬೋರ್ಡ್‌ನಲ್ಲಿರುವವರೇ ಒಂದು ಕಡೆಯಾಗಿ, ಅಧ್ಯಕ್ಷರು ಒಂದು ಕಡೆಯಾದಾಗ, ಆ ಅಧ್ಯಕ್ಷರು 2 ವರ್ಷ ಅಲ್ಲಿ ಕುಳಿತುಕೊಳ್ಳುವ ಸ್ಥಿತಿಯನ್ನು ನಿರ್ಮಾಣ ಮಾಡಬಾರದು. ಈಗ ಅವರ ಅವಧಿ ಒಂದು ವರ್ಷವಿದೆ. ಹೇಗೋ ಕಾಲ ತಳ್ಳಿಹಾಕುತ್ತಾರೆ ಎಂದು ಬೋರ್ಡುಗಳಲ್ಲಿ ಸಹಿಸಿಕೊಳ್ಳುತ್ತಿದ್ದಾರೆ. ಆದರೆ ನೀವು ಅವರಿಗೆ 2 ವರ್ಷ ಅಧಿಕಾರ ಕೊಡುವುದಾದರೆ, ದಯಮಾಡಿ ಆತನ ಮೇಲೆ ಅವಿಶ್ವಾಸ ತರಲು ಅವಕಾಶವಿರುವುದನ್ನು ಇದರಲ್ಲಿ ಸೇರಿಸಬೇಕು. ಇಲ್ಲವೆಂದರೆ ಪ್ರತಿ ಜನರಲ್ ಬಾಡಿಯಾದ ಮೇಲೆ ಈಗಿರುವಂತೆ ಅಧ್ಯಕ್ಷರ ಚುನಾವಣೆಯಾಗುವಂತೆ ಮಾಡಿ. ಯಾರೇ ಇರಲಿ, ಆದರೆ ಅವರು ವಿಶ್ವಾಸ ಇಟ್ಟುಕೊಂಡು ಅಧ್ಯಕ್ಷರಾಗಿರಲಿ. ಅದಕ್ಕೆ ನಮ್ಮದೇನೂ ಆಕ್ಷೇಪಣೆ ಇಲ್ಲ. ಮೂರನೆಯದಾಗಿ, ಅಧ್ಯಕ್ಷರ ಚುನಾವಣೆಯನ್ನು ಒಂದು ವರ್ಷಕ್ಕೆ ಸರಿಯಾಗಿ ಮಾಡದಿದ್ದರೆ, ಮುಂದೆ ಬರುವವರಿಗೆ ನೀವು ಒಂದು ವರ್ಷದ ಟರ್ಮ ಅನ್ನು ಕೊಡದಿದ್ದರೆ ಆಗ ಕೋರ್ಟುಗಳು ಇಂಟರ್ ಫಿಯರ್ ಆಗುತ್ತದೆ. ಅವರಿಗೆ ಒಂದು ವರ್ಷ ಅವಧಿ ಎಂದು ನೀವು ಕಾಯಿದೆಯಲ್ಲಿ ಮಾಡಿಬಿಟ್ಟದ್ದೀರಿ. ಉದಾಹರಣೆಗೆ ನಾನು ಇವತ್ತು ಅಧ್ಯಕ್ಷನಾದರೆ, ಇವತ್ತಿನಿಂದ ಒಂದು ವರ್ಷದವರೆಗೆ ನಾನು ಅಧ್ಯಕ್ಷನಾಗಿ ಇರಬೇಕಾಗುತ್ತದೆ. ಕೆಲವರು ಟರ್ಮ್‌ಗಳನ್ನು ಒಂದು ತಿಂಗಳು, ಎರಡು ತಿಂಗಳು, ಮೂರು ತಿಂಗಳು ಪುಲ್ ಆನ್ ಮಾಡುತ್ತಿದ್ದಾರೆ. ಅಂಥವರ ಮೇಲೆ ಕಡ್ಡಾಯವಾಗಿ ಕ್ರಮವನ್ನು ಜರುಗಿಸುವಂಥ ಸ್ಥಿತಿಯನ್ನು ತರಬೇಕು. ಅದು ಬೋರ್ಡಿನ ವ್ಯಾಪ್ತಿಗೆ ಬರಬಾರದು. ಅಧ್ಯಕ್ಷರ ಅಧಿಕಾರ ಅವಧಿ ಮುಗಿದ ಮೇಲೆ, ಬೇರೊಬ್ಬ ಅಧ್ಯಕ್ಷರನ್ನು ಆಯ್ಕೆ ಮಾಡುವ ಅಧಿಕಾರ ಆ ಸಂಸ್ಥೆಯ ಕಾರ್ಯದರ್ಶಿಯವರು ಅಥವಾ ಸಿಇಓ ಎಂದು ಹೇಳಿರುವವರಿಗೆ ಇರುವ ಹಾಗೆ ಮಾಡಬೇಕು ಈ ಬಗ್ಗೆ ಸಿಇಓ ಕಡ್ಡಾಯವಾಗಿ ನೋಟಿಫಿಕೇಷನ್ ಹಾಕುವಂಥ ಸ್ಥಿತಿಯನ್ನು ನೀವು ನಿರ್ಮಾಣ ಮಾಡಬೇಕು. ಅವನು ಬೋರ್ಡನ್ನು ಕೇಳಿ ಡೇಟ್ ಫಿಕ್ಸ್ ಮಾಡಬಾರದು. ಅಧ್ಯಕ್ಷರ ಅಧಿಕಾರಾವಧಿ ಮುಗಿದ ತಕ್ಷಣ ಈತನು ಇಂಥ ದಿವಸ ನೂತನ ಅಧ್ಯಕ್ಷರ ಆಯ್ಕೆ ಎಂದು ಇನ್ನೊಂದು ಕ್ಯಾಲೆಂಡರನ್ನು ಹಾಕಬೇಕು. ಅಧ್ಯಕ್ಷರ ಮೇಲೆ ಕ್ರಮ ಜರುಗಿಸಬೇಡಿ. ಅದರಲ್ಲಿ ವಿಫಲವಾದರೆ

ಕಾರ್ಯದರ್ಶಿ ಅಥವಾ ಸಿಇಓ ಮೇಲೆ ಕ್ರಮ ತೆಗೆದುಕೊಳ್ಳುವಂಥ ಸ್ಥಿತಿಯನ್ನು ನಿರ್ಮಾಣ ಮಾಡಿದರೆ ಮಾತ್ರ ಕಾಲಕಾಲಕ್ಕೆ ಇವು ಸರಿಯಾಗಿ ಹೋಗುತ್ತವೆ ಇಲ್ಲವೆಂದರೆ ಬೋರ್ಡ್ ರೆಸೊಲ್ಯೂಷನ್ ಮಾಡುತ್ತದೆ, ಒಂದು ತಿಂಗಳೂ, 2 ತಿಂಗಳೂ, 3 ತಿಂಗಳು ಟೈಂ ಕೇಳುತ್ತಾರೆ. ಇದನ್ನು ತಾವು ಕಡ್ಡಾಯವಾಗಿ ಮಾಡಬೇಕು. ಇನ್ನು 29 ಎಫ್‌ನಲ್ಲಿ ನೀವು ಸಿಇಓಗೆ ಸ್ಟಾಟ್ಯುಟರಿ ಪವರ್ಸ್ ಅನ್ನು ಕೊಟ್ಟಿಲ್ಲ, ಮ್ಯಾನ್‌ಡೇಟರಿ ಮಾಡಿದ್ದೀರಿ. ನೀವು ಅದನ್ನು ಕಡ್ಡಾಯ ಮಾಡಬೇಕು. ಆ ಸಂಸ್ಥೆಯ ಕಾರ್ಯದರ್ಶಿ ಅಥವಾ ಸಿಇಓಗೆ ನೀವು ಇಷ್ಟು ಅಧಿಕಾರವನ್ನು ಕೊಡುವಂಥ ಕೆಲಸವನ್ನು ಮಾಡಬೇಕೆಂದು ಹೇಳಿ, ನಾನು ಆ ಬಿಲ್ಲನ್ನು ವ್ಯಾಪಕವಾಗಿ ಸ್ವಾಗತಿಸುತ್ತೇನೆ. ಆದರೆ ಇದರಲ್ಲಿ ಎರಡು ಕಾಯಿದೆ ಮಾಡಿದ್ದು ಸಾಧುವೇ, ಇಲ್ಲವೇ ಎಂದು ನನಗೆ ಗೊತ್ತಿಲ್ಲ. ಏಕೆಂದರೆ ಇವತ್ತು ಆಂಧ್ರ ಪ್ರದೇಶದಲ್ಲಿ ಈ ರೀತಿ ಸೌಹಾರ್ದ ಕಾಯಿದೆ ಎಂದು ಇದ್ದು, ಇವತ್ತಿನವರೆಗೆ ಕೇವಲ 130-135 ಸಂಘಗಳು ಮಾತ್ರ ರಿಜಿಸ್ಟರ್ ಆಗಿವೆ. ಅದಕ್ಕೋಸ್ಕರ ಇನ್ನೊಂದು ಕಾಯಿದೆಯನ್ನು ಮಾಡಬೇಕಾಗಿತ್ತೇ ಎನ್ನುವುದನ್ನು ತಮ್ಮ ವಿವೇಚನೆಗೆ ಬಿಡುತ್ತೇನೆ. ತಾವು ಮಂತ್ರಿಗಳು, ಈ ರಾಜ್ಯವನ್ನು ಮುನ್ನಡೆಸುವ ಜವಾಬ್ದಾರಿ ನಿಮಗೆ ಇದೆ. ಆಡಿಟ್ ಡೈರೆಕ್ಟರ್ ಅನ್ನು ತಾವು ಮುಂದುವರೆಸದೇ ಹೋದರೆ ನಾವೆಲ್ಲಾ ಕಡ್ಡಾಯವಾಗಿ ಇದನ್ನು ವಿರೋಧ ಮಾಡಬೇಕಾಗುತ್ತದೆ. ಈ ವಿಷಯದಲ್ಲಿ ನೀವು ನಮ್ಮ ಜೊತೆ ರಾಜಿ ಮಾಡಿಕೊಳ್ಳಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಬಿ.ಆರ್. ಯಾವಗಲ್ (ನರಗುಂದ) : ಮಾನ್ಯ ಅಧ್ಯಕ್ಷರೆ, ಬಹಳ ಆಮೂಲಾಗ್ರವಾದಂಥ ಬದಲಾವಣೆಯನ್ನು ತರುವಂಥ ಈ ಪ್ರಯತ್ನಕ್ಕಾಗಿ ಸಹಕಾರ ಸಚಿವರನ್ನು ನಾನು ಅಭಿನಂದಿಸುತ್ತೇನೆ. ಸಹಕಾರ ಕಾಯಿದೆ ಒಂದು ರೀತಿಯಿಂದ ಹಾಸ್ಯಾಸ್ಪದವಾಗಿತ್ತು ಎಂದರೆ ತಪ್ಪಾಗುವುದಿಲ್ಲ. ಸಹಕಾರೀ ಆಂದೋಲನ ಸರ್ಕಾರೀ ಅಂದೋಲನವಾಗಿ ಹೆಚ್ಚು ಹೆಚ್ಚು ಹಾಳಾಗಿತ್ತು ಎಂದು ಹೇಳಿದರೆ ತಪ್ಪಾಗುವುದಿಲ್ಲ. 121ನೇ ಕಲಂ ಅನ್ನು ತೆಗೆದಿದ್ದಾರೆ. ಅದು ಇದ್ದಾಗ ಆಕ್ಟನ್ನು ಸಸ್ಪೆಂಡ್ ಮಾಡಲು ಈ ಸೆಕ್ಷನ್ ಕೆಳಗೆ ಮಂತ್ರಿಗಳಿಗೆ ಅಧಿಕಾರ ಇತ್ತು. ಇದನ್ನು ಕಾಲಕಾಲಕ್ಕೆ ಇದ್ದಂಥ ಸರ್ಕಾರಗಳು ಯಶಸ್ವಿಯಾಗಿ ಉಪಯೋಗ ಮಾಡಿ ಮಾಡೀ ಒಂದು ರೀತಿಯಿಂದ ಪ್ರತಿಯೊಂದು ಸಹಕಾರ ಸಂಘಗಳು ಅತಂತ್ರ ಸ್ಥಿತಿಯಲ್ಲಿರಲು ಕಾರಣವಾಗಿತ್ತು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅದನ್ನು ತಾವು ತೆಗೆದಿದ್ದೀರಿ. ಅದು ಹೈಕೋರ್ಟಿಗೆ ಹೋಗಿತ್ತು, ಕಮಿಟಿಯವರ ಅಬ್ಸರ್‌ವೇಷನ್ ಇತ್ತು, ಕೆಲಮಟ್ಟಿಗೆ ಕೆಲವರು ಇದನ್ನು ತಾಂತ್ರಿಕವಾಗಿ ಎತ್ತಿ ಹಿಡಿದರು. ಆದ್ದರಿಂದ ಇದು ಕ್ರಾಂತಿಕಾರಕ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅಂಥ ಒಂದು ಉದ್ದೇಶದಿಂದ ತಾವು ಇದನ್ನು ತಂದಿದ್ದೀರಿ. ಅದಲ್ಲದೆ, ಇನ್ನೂ ಅನೇಕ ಬಿಲ್ಲುಗಳು, ಯಾವ್ಯಾವುವು ಸಹಕಾರದ ಬೆಳವಣಿಗೆಗೆ ಅಥವಾ ಸಹಕಾರ ತತ್ವಕ್ಕೆ ವಿರೋಧವಾಗಿದ್ದಂಥವುಗಳು, ಇದರ ಮೇಲೆ ಇದ್ದಂಥ ಪ್ಲಾನಿಂಗ್ ಕಮಿಷನ್ನಿನ ಶಿಫಾರಸ್ಸು ಇರಬಹುದು.

11.50 ಎ.ಎಂ

ಜನರಲ್ ತಿಳುವಳಿಕೆಗೆ ರಾಷ್ಟ್ರದಲ್ಲಿರತಕ್ಕಂಥ ಅದಕ್ಕನುಗುಣವಾಗಿ ಏನು ಬದಲಾವಣೆಗಳನ್ನು ತಂದಿದ್ದೀರಿ ಇದು ಸ್ವಾಗತಾರ್ಹ ಮತ್ತು ಅದಕ್ಕೆ ನನ್ನ ವೈಯುಕ್ತಿಕ ಅಭಿನಂದನೆಗಳನ್ನು ತಿಳಿಸುತ್ತೇನೆ. ಮಾನ್ಯ

ಮಾಧುಸ್ವಾಮಿಯವರು ಹೇಳಿದ ಹಾಗೆ, ಡೈರೆಕ್ಟರೇಟ್ ಆಫ್ ಅಡೀಟರನ್ನು ಪ್ರತ್ಯೇಕವಾಗಿ ಇರುವುದು ಯೋಗ್ಯವೆಂದು ನಾನು ಭಾವಿಸುತ್ತೇನೆ. ಹಾಗೂ ಸಿ.ಎ.ಗಳ ಮುಖಾಂತರ ಆಡಿಟ್ ಮಾಡಿಸಬೇಕೆಂದು ಏನು ವಿಚಾರ ಇದೆ ಇದೊಂದು ಯೋಗ್ಯವಾದ ವಿಚಾರ ಎಂದರೆ ತಪ್ಪಾಗಲಾರದು. ಇವತ್ತು ಸಹಕಾರ ಸಂಸ್ಥೆಗಳು ಇತ್ತೀಚೆಗೆ ತೀರ ಕೆಳಮಟ್ಟಕ್ಕೆ ಹೋಗಿ ಹಾಳಾಗುವುದಕ್ಕೆ ಈ ಆಡಿಟ್ ವಿಂಗ್ ಕಾರಣ. ಇವತ್ತು ಅಲ್ಲಿರುವ ನ್ಯೂನತೆಗಳನ್ನು ಉಪಯೋಗಿಸಿಕೊಂಡು ಅವರನ್ನು ಬ್ಲಾಕ್‌ಮೇಲ್ ಮಾಡುವಂತಹ ಸ್ಥಿತಿ ಉಂಟಾಗಿದೆ. ಆದ್ದರಿಂದ ಆಡಳಿತ ವಿಂಗ್ ಮತ್ತು ಆಡಿಟ್ ವಿಂಗ್ ಎರಡೂ ಜೊತೆಗೆ ಸೇರಿದರೆ ಇನ್ನೂ ಬಹಳ ಗಂಡಾಂತರದ ಪರಿಸ್ಥಿತಿ ಉದ್ಭವಾದೀತು. ಇದು ಪ್ರತ್ಯೇಕವಾಗಿರಬೇಕು. ಇರುವಂಥ ಅಧಿಕಾರವನ್ನು ದೊಡ್ಡ ದೊಡ್ಡ ಸಂಸ್ಥೆಗಳು 441 ಆಡಿಟರ್ಸ್ ಹಾಕಿಕೊಂಡು ಮಾಡುತ್ತಾರೆ. ಇಲ್ಲಿ ಕಾಲಾವಕಾಶ ಮತ್ತು ಮಾಡಿಸುವಂತಹ ಸಂದರ್ಭ ಇವು ಎರಡು ಒಂದು ರೀತಿಯಲ್ಲಿ ಸೇಫರ್ ಎಂದು ಹೇಳುವುದಾದರೆ, ನಿಗದಿಪಡಿಸಿದ ಕಾಲಾವಕಾಶದಲ್ಲಿ ಮುಗಿಸಲು ಕಷ್ಟವಾಗುತ್ತದೆ. ಅಧಿಕಾರಿಗಳು ಬಂದು ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗೂ ಇವರನ್ನು ಅಲ್ಲಿ ಉಳಿಸುವುದಕ್ಕೂ ಕೂಡ ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣ ಆಗುತ್ತದೆ. ಇದು ಬಹಳಷ್ಟು ಸಂದರ್ಭದಲ್ಲಿ ತಪ್ಪುಗಳನ್ನು ಮಾಡಿದ್ದರೂ ಅದನ್ನು ಮುಚ್ಚಿಡುವಂತಹ ಪ್ರಯತ್ನ ಆಗುತ್ತದೆ. ಇದರಿಂದಾಗಿ ಅದನ್ನು ಬದಲಾವಣೆ ತರಬೇಕು, ಹಾಗೂ ಅದನ್ನು ಪ್ರತ್ಯೇಕವಾಗಿ ಇಟ್ಟರೆ ಯೋಗ್ಯವೆಂದು ನಾನು ಭಾವಿಸುತ್ತೇನೆ. ಮತ್ತೊಮ್ಮೆ ನಾನು ಈ ಕಾಯಿದೆಯನ್ನು ಬೆಂಬಲಿಸಿ, ಸ್ವಾಗತ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಹೆಚ್. ಶಿವಪ್ಪ (ಹರಿಹರ) : ಸನ್ಮಾನ್ಯ ಅಧ್ಯಕ್ಷರೆ, ಇದೊಂದು ತಿದ್ದುಪಡಿ ಐತಿಹಾಸಿಕ ತಿದ್ದುಪಡಿ ಎಂದು ನಾವು ಭಾವಿಸುತ್ತೇವೆ. ಈ ತಿದ್ದುಪಡಿ ಬಹಳ ದಿವಸಗಳಿಂದ ನನೆಗುದಿಗೆ ಬಿದ್ದಿತ್ತು. ಸಹಕಾರಿ ಭೀಷ್ಮನೆಂದು ಕರೆಯಲ್ಪಡುತ್ತಿದ್ದ ದಿವಂಗತ ಕೆ.ಹೆಚ್. ಪಾಟೀಲ್ ರವರ ಕಾಲದಿಂದಲೂ ಈ ತಿದ್ದುಪಡಿ ತರಬೇಕೆಂದು ಇತ್ತು. ಇಂಥ ಒಂದು ತಿದ್ದುಪಡಿಯನ್ನು ನಮ್ಮ ಸಹಕಾರಿ ಸಚಿವರು ತಂದಿದ್ದಾರೆ. ಇದನ್ನು ಯಾವ ಉದ್ದೇಶದಿಂದ ತಂದಿದ್ದಾರೆ ಎಂದರೆ, ಇದುವರೆವಿಗೂ ಇಲ್ಲಿ ಸರ್ಕಾರದ ಹಸ್ತಕ್ಷೇಪ ಇತ್ತು ಇದರಿಂದಾಗಿ ಅಲ್ಲಿ ಪ್ರಗತಿ ಬಹಳ ಕುಂಠಿತವಾಗಿತ್ತು, ಈ ಒಂದು ಆಂಧೋಲನಕ್ಕೆ ಸ್ವಾಯತ್ತತೆ ಕೊಡಬೇಕು, ಸ್ವತಂತ್ರವಾಗಿ ಇವು ಕೆಲಸ ಮಾಡಬೇಕು ಎನ್ನುವ ಒಂದು ಘನ ಉದ್ದೇಶದಿಂದ ಇದನ್ನು ತಂದಿದ್ದಾರೆ. ಕೆಲವರು ಆಪಾದನೆ ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ತಾವು ಮೈಸೂರಿನಲ್ಲಿ ನಡೆದಂಥ ಒಂದು ಸಭೆಯಲ್ಲಿ ಸಹಕಾರಿ ಸಂಸ್ಥೆಗಳು ವ್ಯವಸ್ಥಿತವಾಗಿ ಕೆಲಸ ಮಾಡುತ್ತಿಲ್ಲ ಎಂದು ರಿಮಾರ್ಕ್ ಮಾಡಿದಿರಿ. ಹಾಗೂ ಒಂದು ಹೆಣ್ಣು ಮಗುವಿದೆ ಮದುವೆ ಆಗಬೇಕಾದರೆ ಯಾರೂ ಬೇಡ ಸಹಕಾರಿ ಸಂಘದ ಕಾರ್ಯದರ್ಶಿಯಾದರೂ ಸಾಕು ಎನ್ನುವ ಮಾತನ್ನು ಬಹಳ ಅರ್ಥ ಗರ್ಭಿತವಾಗಿ ಹೇಳಿದಿರಿ. ಇದು ಏಕೆ ಪ್ರಗತಿಯಾಗಿಲ್ಲ? ಗುಜರಾತ್, ಮಹಾರಾಷ್ಟ್ರ ಹಾಗೂ ಇತರೆ ಬೇರೆ ರಾಜ್ಯಗಳಲ್ಲಿ ಈ ಆಂಧೋಲನ ಎಷ್ಟು ಎತ್ತರಕ್ಕೆ ಬೆಳೆಯಬೇಕಾಗಿತ್ತು ಅಷ್ಟು ಎತ್ತರಕ್ಕೆ ಬೆಳೆದಿದೆ. ಅಲ್ಲಿ ಸರ್ಕಾರದ ಹಸ್ತಕ್ಷೇಪ ಬಹಳ ಕಡಿಮೆ, ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲ. ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಆ ರಾಜ್ಯಗಳು ಬಿಟ್ಟಿರುವುದರಿಂದ ಪ್ರಗತಿ ಕಣ್ಣಿಗೆ ಕಾಣುವಂತೆ ಆಗಿದೆ. Perceptible progress ಆಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಇದುವರೆವಿಗೂ ಹಸ್ತಕ್ಷೇಪ ಇದ್ದಂಥ ಸೆಕ್ಷನ್ 121, 14ಎಗೆ

ಇಂಥ ರಾಜಕೀಯ ಅಸ್ತ್ರವನ್ನು ಬಳಸಿ ಆಡಳಿತ ಅಧಿಕಾರಗಳನ್ನು ನೇಮಿಸಿ ಸಹಕಾರಿ ಸಂಸ್ಥೆಗಳನ್ನು ಹಾಳು ಮಾಡುತ್ತಿದ್ದರೋ ಇದನ್ನು ತಪ್ಪಿಸುವ ಸಲುವಾಗಿ ಇಂಥ ಒಂದು ಸಮಗ್ರವಾದ ತಿದ್ದುಪಡಿಗಳನ್ನು ಮಾನ್ಯ ಸಚಿವರು ತಂದಿರುವುದರಿಂದ ನನಗೆ ಬಹಳ ಸಂತೋಷವಾಗಿದೆ ಹಾಗೂ ನಾನು ಇದನ್ನು ಸ್ವಾಗತಿಸಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದರ ಜೊತೆಗೆ ಇನ್ನೊಂದೆರಡು ಅಂಶಗಳನ್ನು ಬಿಟ್ಟಿದ್ದಾರೆ. ಸೆಕ್ಷನ್ 13 (ಬಿ) ಡೈರೆಕ್ಷನ್ ಎಂದು ಇರುವುದನ್ನು ಡಿಲೀಟ್ ಮಾಡಬೇಕು, ಹಾಗೂ ಸೆಕ್ಷನ್ 12-5 ಕೂಡ ಒಂದು ರೀತಿಯಲ್ಲಿ ಹಸ್ತಕ್ಷೇಪ. ಯಾವ ಉದ್ದೇಶದಿಂದ ಇವುಗಳಿಗೆ ಸ್ವಾಯತ್ತತೆ ಕೊಡಬೇಕೆಂದೇನು ನೀವು ಈ ತಿದ್ದುಪಡಿ ತಂದಿದ್ದಿರೋ, ಅದಕ್ಕೆ ಇವೆರಡನ್ನು ನೀವು ತೆಗೆಯದಿದ್ದರೆ, ಈ ಒಂದು ಆಂಧೋಲನದ ಬೆಳವಣಿಗೆ ಮಾರಕವಾಗುತ್ತದೆ. ಸರ್ಕಾರದಿಂದ ಡೈರೆಕ್ಷನ್ ಕೊಟ್ಟರೆ 12-5 ಪ್ರಕಾರ ನಾವು ಪುನಃ ಬೈಲಾವನ್ನು ತಿದ್ದುಪಡಿ ಮಾಡಬೇಕು. ಸಹಕಾರಿ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು ಇವು ಪ್ರಜಾತಂತ್ರದ ಅಂಗಗಳೆಂದೂ ನಾವು ಭಾವಿಸಬೇಕಾಗುತ್ತದೆ. ಇದಕ್ಕೆ ನಾವು ಪುನಃ ಧಕ್ಕೆ ತರುವ ರೀತಿಯಲ್ಲಿ ಆಗುತ್ತದೆ. ಆದ್ದರಿಂದ, 12-5ನ್ನು ನಾವು ರೀಟೈನ್ ಮಾಡಿದರೆ, ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಮಾರಕವಾಗುತ್ತದೆ, ಆದ್ದರಿಂದ ಅದನ್ನು ತಾವು ಡಿಲೀಟ್ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ. ಸೂಪರ್ ಸಿಷನ್ ಮಾಡಿದಾಗ ಅಂಡರ್ ಸೆಕ್ಷನ್ 30 ಪ್ರಕಾರ ಬಹಳ ದಿವಸಗಳಿಂದ ಆಡಳಿತ ಅಧಿಕಾರಿಗಳ ಹಿಡಿತದಲ್ಲಿರಬಾರದು, ಒಂದು ಲಿಮಿಟೆಡ್ ಪರ್ಪಸ್ ಗೋಸ್ಕರ ಇರಬೇಕು, ಏನಾದರೂ ಅವ್ಯವಹಾರ ಆಗಿದ್ದರೆ, ಅಥವಾ ಇರೆಗ್ಯುಲಾರಿಟಿಸ್ ಆಗಿದ್ದರೆ ಅದನ್ನು ಸರಿಪಡಿಸಿ ಪುನಃ ವಾಪಸ್ ಆಡಳಿತವನ್ನು ಚುನಾಯಿತ ಆಡಳಿತ ಮಂಡಳಿಗೆ ವಾಪಸ್ ಕೊಡಬೇಕೆಂದು ತಿದ್ದುಪಡಿಯಲ್ಲಿ ಒಂದು ವರ್ಷದ ಬದಲಾಗಿ ಆರು ತಿಂಗಳಿಗೆ ಎಂದು ನೀವು ಏನು ತಂದಿದ್ದೀರಿ,

``Registrar, for the reasons stated, can extend the period for another six months". ಅದು ಹೇಗೆಂದರೆ "ಅಳಿಯ ಅಲ್ಲ ಮಗಳ ಗಂಡ" ಎನ್ನುವ ಗಾದೆ ರೀತಿಯಲ್ಲಿದೆ. ಆದ್ದರಿಂದ ಇದನ್ನು ತಾವು ತೆಗೆಯಬೇಕು. ``Administrator is appointed for a limited purpose. If there are irregularities committed, he has to rectify and put the society on rail. ಆ ದೃಷ್ಟಿಯಿಂದ ಈಗ ಏನೊಂದು ತಿದ್ದುಪಡಿ ತಂದಿದ್ದೀರಿ, ಪುನಃ ಅದನ್ನು ಅಧಿಕಾರಿಗಳ ಕೈಗೆ ಕೊಡಕೂಡದು. ಅವರು ಆರು ತಿಂಗಳಾದನಂತರ ನಮ್ಮ ರಿಜಿಸ್ಟ್ರಾರ್ ರವರನ್ನು ಎಕ್ಸಟೆನ್‌ಷನ್ ಮಾಡಿ ಪುನಃ ತಮ್ಮ ಅಧಿಕಾರವನ್ನು ಆರು ತಿಂಗಳು ಉಳಿಸಿಕೊಂಡರೆ, ಮಾಡದೇ ಇದ್ದರೆ ಅದಕ್ಕೆ ಪೀನಲ್ ಕ್ಲಾಸ್ ಎಲ್ಲಿದೆ? Any unscrupulous Administrator can continue beyond the statutory limit. What is your answer? ಇಲ್ಲವಾದರೆ ಅವನಿಗೆ ಪನಿಷ್ ಮೆಂಟ್ ಕೊಡಬೇಕು. ಆರು ತಿಂಗಳಲ್ಲಿ ಅವನು ಮಾಡದೇ ಇದ್ದರೆ ಅಂಥವರಿಗೆ ಸೆಕ್ಷನ್ 109ರಲ್ಲಿ ಶಿಕ್ಷೆ ವಿಧಿಸುವಂತಹ ಕಾನೂನನ್ನು ತಂದು ತಾವು ಇದನ್ನು ಅಳವಡಿಸಿಕೊಳ್ಳಬೇಕು.

ಅಧ್ಯಕ್ಷರು : ಇದು ಹೇಗೆ ಶಿವಪ್ಪನವರೇ, ನಾನೇನೂ ಕೋ-ಆಫರೇಟರ್ ಅಲ್ಲ. ಪೊಲಿಟಿಕಲ್ ರೀಸನ್ಸ್‌ಗಾಗಿಯೇ ಈ ಅಡ್ಮಿನಿಸ್ಟ್ರೇಟರ್ ಬರುತ್ತಾರೆ.

ಶ್ರೀ ಹೆಚ್. ಶಿವಪ್ಪ : ಇಲ್ಲ ಇದನ್ನು ತಪ್ಪಿಸುವ ಸಲುವಾಗಿ ಈ ತಿದ್ದುಪಡಿ ತಂದಿರುವುದು.

ಅಧ್ಯಕ್ಷರು : ಪುನಃ ಅವರು ಕಂಟಿನ್ಯೂ ಆಗುವುದೂ ಕೂಡ ಪೊಲಿಟಿಕಲ್ ರೀಸನ್ಸ್ ಗಾಗಿ. ನೀವು ಇಲ್ಲಿ ಮಾಡಿ ಅವರಿಗೆ ಶಿಕ್ಷೆ ಕೊಟ್ಟರೆ ಇದೇನಿದು?

Sri. H. SHIVAPPA : To put an end to that's he should not become a political weapon. ಈ ಉದ್ದೇಶಕ್ಕಾಗಿಯೇ ಈ ತಿದ್ದುಪಡಿಯನ್ನು ತಂದಿರುವುದು.

ಅಧ್ಯಕ್ಷರು : ಆರು ತಿಂಗಳಿಗೆ ಮುಗಿಯಬೇಕು ಎನ್ನುವ ಒಂದು ಸ್ಟ್ಯಾಂಡಿಗೆ ಬನ್ನಿ. ಪುನಃ ಎಕ್ಸ್‌ಟೆಂಡ್ ಮಾಡುವುದು ಬೇಡ, ಆರು ತಿಂಗಳಿಗೆ ಮಾತ್ರ ಇರಲಿ ಎನ್ನುವ ಒಂದು ಸ್ಟ್ಯಾಂಡಿಗೆ ಬನ್ನಿ.

ಶ್ರೀ ಹೆಚ್. ಶಿವಪ್ಪ : ಆರು ತಿಂಗಳಲ್ಲಿ ಮುಗಿಸಬೇಕು.

ಅಧ್ಯಕ್ಷರು : ಒಂದು ವೇಳೆ ಆಡಳಿತ ಮಂಡಳಿಯಲ್ಲಿ ಮುಂದುವರಿಸಬೇಕಾದರೆ ಕಾನೂನು ಪ್ರಕಾರ ಅದು ಆಗುವುದಿಲ್ಲ. He must hand it over to the people's representatives.

Sri. H. SHIVAPPA : If he does not hand it over to the people's representatives ....

ಅಧ್ಯಕ್ಷರು : ಇಲ್ಲಿ ಆತನದ್ದು ಏನೂ ಇರುವುದಿಲ್ಲ, The Government should make it compulsory. ಇದನ್ನು ನಿಮ್ಮ ಆಕ್ಟ್‌ನಲ್ಲಿ ಮಾಡಿಕೊಳ್ಳಬೇಕು.

ಶ್ರೀ ಹೆಚ್. ಶಿವಪ್ಪ : ಕಂಪಲ್ ಸರಿ ಎಂದು ಮಾಡಿದರೂ ಒಬ್ಬ ಅಧಿಕಾರಿ ಇರುತ್ತಾನೆ. ಆದರೆ ಅವನಿಗೆ ಹ್ಯಾಂಡ್ ಓವರ್ ಮಾಡಿರುವುದಿಲ್ಲ. What is the answer?

MR. SPEAKER : If there is no provision for anybody to extend it beyond the period of six months under the law itsel how can anybody continue?

ಶ್ರೀ ಹೆಚ್. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಇಲ್ಲಿ ಆ ಪ್ರಶ್ನೆ ಬರುವುದಿಲ್ಲ. ಮೊನ್ನೆಯ ದಿವಸ ಮಾನ್ಯ ರಾಮಸ್ವಾಮಿರವರು ಏನು ಹೇಳಿದರೆಂದರೆ, although the official was under suspension, that was not obliged. He continued in the service.

SRI K.N. NAGEGOWDA : Communication gap.

SRI H. SHIVAPPA : Whatever it may be. Such officers will create such communication gap or occasions to continue for themselves. In the first evenutality, what is the penal provision?

MR. SPEAKER : Mis-conduct by a civil servant is possible only if he has political patronage. No civil servant shall have the guts to misbehave in an

indifferent way or with disregard to law, if he has no political patronage. Let us be clear about it. Let us not mince words.

ಶ್ರೀ ಹೆಚ್. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಪೊಲಿಟಿಕಲ್ ಪ್ಯಾಟ್ರನೈಜ್ ಅಲ್ಲಿ ಇರಬಾರದೆಂಬ ಉದ್ದೇಶದಿಂದ ....

ಅಧ್ಯಕ್ಷರು : ಮಾನ್ಯ ಕಾಗೋಡು ತಿಮ್ಮಪ್ಪನವರಿದ್ದಾರೆ ಮತ್ತು ಆಡಳಿತ ಪಕ್ಷದ ಕಡೆ ಮಾನ್ಯ ಪ್ರಕಾಶ್ ರವರು ಇದ್ದಾರೆ, ಅವರೇ ಇದರ ಬಗ್ಗೆ ಹೇಳಲಿ. Is it not so? Can any civil servant indulge in misconduct or misbehave, if he does not have the political patronage? ಇದಕ್ಕೆ ಧೈರ್ಯ ಇರುತ್ತದೆಯೇ ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ತಾವು ಹೇಳುತ್ತಿರುವುದು ನಿಜವಾದರೂ ಕೂಡ, ಅನೇಕ ಸಂದರ್ಭದಲ್ಲಿ ಕೆಲವರು ಹುಂಬತನದ ಅಧಿಕಾರಿಗಳು ಇರುತ್ತಾರೆ. ಅವರಿಗೆ ರಾಜಕೀಯ ಪ್ರಭಾವ ಇಲ್ಲದಿದ್ದರೂ ಕೂಡ, ಅವರೇ ಸ್ವತಃ ಹುಂಬುತನದಿಂದ ಮಾಡತಕ್ಕಂಥವರು ಇರುತ್ತಾರೆ.

Mr. SPEAKER : Very rare.

SRI M.P. PRAKASH : By and large as you rightly pointed, it is only such type of officers who indulge in this.

ಶ್ರೀ ಹೆಚ್. ಶಿವಪ್ಪ : ಅದಕ್ಕೋಸ್ಕರ specific provision must be there. ಮಾನ್ಯ ಸಚಿವರು ಹುಂಬರೆಂದು ಏನು ಹೇಳಿದರಲ್ಲಾ, ಆ ಅಧಿಕಾರಿಗಳಿಗೆ ಕ್ರಮ ತೆಗೆದುಕೊಳ್ಳತಕ್ಕಂಥದಕ್ಕೆ ನಾವು ಕಾನೂನಿನಲ್ಲಿ ಅಳವಡಿಸಿಕೊಳ್ಳಬೇಕು. ಇದನ್ನು ಅತಿಮುಖ್ಯವಾಗಿ ಮಾಡಲೇಬೇಕು. ಇವತ್ತು ಅಸಿಸ್ಟೆಂಟ್ ಸೊಸೈಟಿ, ಫೆಡರಲ್ ಸೊಸೈಟಿ ಮತ್ತು ಅಫೆಕ್ಸ್ ಸೊಸೈಟಿ ಎಂದು ಮಾಡಿದ್ದೀರಿ. ತಾವು ಈಗ ಮಾಡಿರತಕ್ಕಂಥದಕ್ಕೆ ರೆಪ್ರಸೆಂಟೇಷನ್ ಎಲ್ಲಾ ಜಿಲ್ಲೆಗೂ ಸಿಗುತ್ತಿಲ್ಲ. ಆದ್ದರಿಂದ ಜಿಲ್ಲೆಗೊಂದು ರೆಪ್ರಸೆಂಟೇಷನ್ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಇದು ಅಪೆಕ್ಸ್ ಸೊಸೈಟಿಯಲ್ಲಾಗಲಿ ಅಥವಾ ಫೆಡರಲ್ ಸೊಸೈಟಿಯಲ್ಲಾಗಲಿ ಈ ವ್ಯವಸ್ಥೆಯನ್ನು ಮಾಡಬೇಕು. ಇನ್ನು ಶ್ರೀಮತಿ ಪ್ರಮೀಳಾ ನೇಸರ್ಗಿರವರು ಹೇಳಿದರು. During the supersession, the administrator or special officer shall not exercise. You must add, all the powers except enrolment of members. He is appointed for a limited purpose. He cannot interfere in the structural matter of the society.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಪ್ಪನವರು ಬಹಳ ಅನುಭವದಿಂದ ಹೇಳುತ್ತಿದ್ದಾರೆ.

ಶ್ರೀ ಹೆಚ್. ಶಿವಪ್ಪ : ಅನುಭವ ಇರುವುದರಿಂದಲೇ ಹೇಳುತ್ತಿರುವುದು. ಆ ಒಂದು ಸಂದರ್ಭದಲ್ಲಿ ಅವರ ಬಗ್ಗೆ ಅವರು ಪ್ರಾವಿಷನ್ ಮಾಡಿದರು. ಆಮೇಲೆ ಚೀಫ್ ಎಕ್ಸಿಕ್ಯೂಟಿವ್ ಸೆಕ್ಷನ್

29 (ಎಫ್)ರ ಪ್ರಕಾರ ಅಜೆಂಡಾ ಪ್ರಿಪೇರ್ ಮಾಡಬೇಕಾದರೆ, in consultation with the President ಎಂದು ತಾವು ಹೇಳಿದ್ದೀರಿ. ಇನ್‌ಕನ್ಸ್‌ಲ್ಟೇಷನ್ ಸರಿಯಾಗುವುದಿಲ್ಲ, with the consent or approval, ಎಂದು ಇದನ್ನು ತಾವು ಮಾಡಬೇಕಾಗುತ್ತದೆ. Either of the way. ಈ ಒಂದು ಪ್ರಾವಿಷನ್‌ನನ್ನು ಇಲ್ಲಿ ಅಳವಡಿಸಬೇಕು. ಆಡಿಟ್ ಬಗ್ಗೆ ಬಹಳ ಸ್ನೇಹಿತರು ಈಗಾಗಲೇ ಹೇಳಿದ್ದಾರೆ. ಸೆಕ್ಷನ್ 2ಎ ಯಲ್ಲಿರುವ 63ನ್ನು ತಾವು ತಂದಿರುವುದು ಸರಿಯಲ್ಲ. ಏಕೆಂದರೆ ಪ್ರಾಸಿಕ್ಯೂಟರ್ ಮತ್ತು ಜಡ್ಜ್ ಅವರೇ ಆಗಿರುತ್ತಾರೆ. ಅದು ಎಷ್ಟರಮಟ್ಟಿಗೆ fair dispensation of justice ಆಗುತ್ತದೆ ನೀವೇ ಹೇಳಿ? ಅವರು ಸ್ವತಂತ್ರವಾಗಿ ಕೆಲಸ ನಿರ್ವಹಿಸಬೇಕು. 1997ನೇ ಇಸವಿಯಲ್ಲಿ ಬೇರೆ ಬೇರೆ ಮಾಡಬೇಕೆಂದು ತುಕೋಳ್ ಪೇ ಕಮೀಷನ್ ನಲ್ಲಿ ನೀವೇ ಹೇಳಿದ್ದೀರಿ. ಇವತ್ತು ಆಡಳಿತ ಮಾಡುವವರು ಮತ್ತು ಲೆಕ್ಕಪರಿಶೋಧನೆ ಮಾಡುವುದಕ್ಕೂ ಒಬ್ಬರೇ. ಆದರೆ ಖಂಡಿತ ನ್ಯಾಯ ದೊರಕುವುದಿಲ್ಲ. ಮಾಂಟೆಸ್ಕೋ ಏನು ಹೇಳಿದ್ದಾರೆಂದರೆ Theory of separation of powers ಇರಬೇಕು. ಈಗ ನಾವು, we are in an era of decentralisation of powers. ಮತ್ತೆ ಕಾನ್ಸಂಟ್ರೇಷನ್ಸ್ ಆಫ್ ಪವರ್‌ಗೆ ನೀವು ಹೋಗುತ್ತಿದ್ದೀರಿ ಮತ್ತು ನಮ್ಮ ತತ್ವಕ್ಕೆ ವಿರುದ್ಧವಾಗಿ ಹೋಗುತ್ತಿದ್ದೀರಿ. ಅದನ್ನು ತಾವು ದಯವಿಟ್ಟು ಬಿಡಬೇಕು. ಮತ್ತೆ ಅದನ್ನು ತಾವು ಕಂಬೈನ್ಡ್ ಮಾಡಬಾರದು. ಪದಾಧಿಕಾರಿಗಳನ್ನು ಚುನಾವಣೆ ಮಾಡಬೇಕಾದರೆ ಇಲ್ಲಿ ನೀವು ಯಾವುದೇ ಕ್ರಮವನ್ನು ಹೇಳಿಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರೇ, ಸೆಕ್ಷನ್ 29 (ಎಫ್)ರ ಪ್ರಕಾರ ಅಧ್ಯಕ್ಷರನ್ನು ಚುನಾಯಿಸಬೇಕಾದರೆ ಸದಸ್ಯರಲ್ಲಿ ಒಬ್ಬರು ಪ್ರಿಸೈಡ್ ಮಾಡಬೇಕೆಂದು ಅವರು ಹೇಳಿದ್ದಾರೆ. ಇಲ್ಲಿ ಸದಸ್ಯರಲ್ಲಿ ಒಬ್ಬರನ್ನು ಪ್ರಿಸೈಡ್ ಮಾಡಬೇಕಾದರೆ, if all the 9 members are the contestants. Who is to preside? How do you meet such an eventuality? It is very vague, ambiguous. ಇದಕ್ಕೆ ತಾವು ಏನು ಹೇಳುತ್ತೀರಿ? ಇದನ್ನು ಸರಿಪಡಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು.

ಶ್ರೀ ಚಂದ್ರಶೇಖರ್ ಎಂ. ಮಾಮನಿ (ಉಪಾಧ್ಯಕ್ಷರು) : ಅದಕ್ಕೆ ಏನು ಮಾಡಬೇಕೆಂಬುದನ್ನು ತಾವೇ ಹೇಳಿ.

ಶ್ರೀ ಹೆಚ್. ಶಿವಪ್ಪ : ಸೆಕ್ಷನ್ 29 (ಎ)ರಲ್ಲಿ ಹೊಸ ಚ್ಯಾಪ್ಟರ್ ಇಂಟ್ರೊಡ್ಯೂಸ್ ಮಾಡಿದ್ದಾರೆ, ಅದರಲ್ಲಿ ಇದನ್ನು ಸೇರಿಸಬಹುದು. ಚುನಾವಣೆ ಅಧಿಕಾರಿಗಳನ್ನು ಮಾಡಿದರೆ ಅವರು ನಿಷ್ಪಕ್ಷಪಾತವಾಗಿ ಮಾಡುತ್ತಾರೆ. ಒಬ್ಬ ಅಧಿಕಾರಿಗೆ ಜನರಲ್ ಮೀಟಿಂಗ್‌ನಲ್ಲಿ ಚುನಾವಣೆ ಮಾಡುವುದಕ್ಕೆ ಅಧಿಕಾರ ಕೊಡುತ್ತೀರಿ, ಹಾಗೆಯೇ ಈ ಅಧಿಕಾರಿಗೆ ಅಧ್ಯಕ್ಷರನ್ನು ಮತ್ತು ಉಪಾಧ್ಯಕ್ಷರನ್ನು ಚುನಾಯಿಸತಕ್ಕಂಥ ಅಧಿಕಾರವನ್ನು ಕೊಡಿ. ಇದರಿಂದ ನಿಮಗೆ ಏನು ಲುಕ್ಸಾನು ಆಗುತ್ತದೆ? ಜನರಲ್ ಬಾಡಿಗೆ ಸಂಬಂಧಪಟ್ಟ ಹಾಗೆ ಸೆಕ್ಷನ್ 27ರಲ್ಲಿ ತಿದ್ದುಪಡಿಯನ್ನು ತಂದಿದ್ದಾರೆ. One of the items of the agenda, ಎಲೆಕ್ಷನ್ ಎಂದು ಹಿಂದೆ ಇತ್ತು, ಆದರೆ ಈಗ ಅದನ್ನು ಬಿಟ್ಟಿದ್ದೀರಿ. ಜನರಲ್ ಬಾಡಿ ಮೀಟಿಂಗ್‌ನಲ್ಲಿ ಚುನಾವಣೆಯ ಫಲಿತಾಂಶವನ್ನು ಪ್ರಕಟಣೆ ಮಾಡಬೇಕಾಗಿತ್ತು, ಆದರೆ ಅದನ್ನು ತೆಗೆದು ಹಾಕಿದ್ದೀರಿ. ಇದನ್ನು ಮತ್ತೆ ತಾವು ಪರಿಶೀಲಿಸಬೇಕೆಂದು ಹೇಳುತ್ತಾ ಮತ್ತೊಮ್ಮೆ ಈ ಒಂದು ತಿದ್ದುಪಡಿಯನ್ನು ಸ್ವಾಗತಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಅಧ್ಯಕ್ಷರೆ, ಸಹಕಾರಿ ಕಾನೂನಿಗೆ ವ್ಯಾಪಕವಾದ ಬದಲಾವಣೆಗಳನ್ನು ತಂದು ಸರ್ಕಾರದ ಹಸ್ತಕ್ಷೇಪ ಕಡಿಮೆ ಮಾಡುವಂತೆ ಸಚಿವರ ಪ್ರಯತ್ನ ಏನು ಇದೆ, ಇದನ್ನು ಶ್ಲಾಘನೆ ಮಾಡಬೇಕಾಗುತ್ತದೆ. ಆದರೆ ಏಕೋ ಕೆಲವು ಹಳೆಯ ಕಾನೂನಿನಲ್ಲಿರತಕ್ಕಂಥ ಬಹಳ ಸೆಕ್ಷನ್‌ಗಳನ್ನು ಡಿಲೀಟ್ ಮಾಡುವುದಕ್ಕೆ ಸಚಿವರು ಪ್ರಯತ್ನ ಮಾಡುತ್ತಾರೆ. 29ಡಿ, ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಧಿಯನ್ನು ಎರಡು ಟೆರ್ಮಿಗೆ ರಿಸ್ಟ್ರಿಕ್ಷನ್ ಮಾಡಿದ್ದು ಅದನ್ನು ತಾವು ಇಲ್ಲಿ ಡಿಲೀಟ್ ಮಾಡಿ ಅವರು ಎಷ್ಟು ಟರ್ಮ್ ಆದರೂ ಅಧ್ಯಕ್ಷರಾಗಿರಬಹುದು ಎನ್ನುವ ಒಂದು ವ್ಯವಸ್ಥೆಯನ್ನು ತಾವು ತರುತ್ತಿದ್ದೀರಿ. ತಮಗೆ ಗೊತ್ತಿದೆ, ಇದು ಡಿಲೀಟ್ ಆದರೆ ಎಸ್. ಎಸ್. ಪಾಟೀಲ್ ಮತ್ತು ಡಿ.ಆರ್. ಪಾಟೀಲ್ ಇರುವ ಸಂಸ್ಥೆಯೊಳಗೆ ಸಾಯುವವರೆಗೆ ಯಾರೂ ಅವರನ್ನು ತೆಗೆಯಲು ಆಗುವುದಿಲ್ಲ ಎನ್ನುವ ಅನುಭವ ತಮಗೆ ಇದೆ. ಆ ಅನುಭವದ ಹಿನ್ನಲೆಯಲ್ಲಿ ದೇವರಾಜ್ ಅರಸರು ಎರಡು ಟೆರ್ಮ್‌ಗೆ ಮಾತ್ರ ತಂದಿದ್ದರು. ಅದನ್ನು ದಯಮಾಡಿ ಡಿಲೀಟ್ ಮಾಡಬೇಡಿ 3, 5, 10 ವರ್ಷ ಎಂದು ಹೋಗುತ್ತದೆ. ಹೊಸಬರಿಗೆ ಅವಕಾಶ ಸಿಗಲಿ ಎಂದು ದೇವರಾಜ್ ಅರಸರ ಸರ್ಕಾರದ ಘನ ಉದ್ದೇಶ ಇತ್ತು. ಅದನ್ನು ಉಳಿಸಿಕೊಂಡು ಹೋಗಬೇಕೆನ್ನುವ ಮಾತನ್ನು ನಾನು ತಮಗೆ ಹೇಳುತ್ತಿದ್ದೇನೆ. ತಾವು ಸೆಕ್ಷನ್ 121ನ್ನೂ ಕೂಡ ತೆಗೆದಿದ್ದೀರಿ ಸೆಕ್ಷನ್ 30(ಬಿ)ಯನ್ನೂ ಡಿಲೀಟ್ ಮಾಡುತ್ತಿದ್ದೀರಿ, ಇದಕ್ಕೆ ನಾವು ನಿಮಗೆ ಅಭಿನಂದನೆ ಮಾಡಲೇಬೇಕು. ಆದರೆ 12:5 ರಿಟೈನ್ ಮಾಡುತ್ತಿದ್ದೀರಿ ಏಕೆ? ಅದು ಅವಶ್ಯಕತೆ ಬರುವುದಿಲ್ಲ. 12:5 ರಿಟೈನ್ ಮಾಡಿ ಬೈಲಾ ಅಮೆಂಡ್‌ಮೆಂಟ್ ಮಾಡುವಂಥ ಪರಿಮಾಧಿಕಾರಿ ಆ ಜನರಲ್ ಬಾಡಿಗೆ ಇರಬೇಕು. ಇಲ್ಲಿರುವಂಥ ಅಧಿಕಾರಿಗಳಿಗೆ ಇರಬಾರದು. ಅಧಿಕಾರಿಗಳಿಗೆ ಸ್ವತಂತ್ರ ಇರುವುದಿಲ್ಲ. ಮಂತ್ರಿಗಳು ಆದೇಶ ಕೊಡುತ್ತಾರೆ, ಆ ಆದೇಶದ ಪ್ರಕಾರ ಅಧಿಕಾರಿಗಳು ಡೈರೆಕ್ಷನ್ ಕೊಡತಕ್ಕಂಥ ಪರಿಸ್ಥಿತಿ ನಿರ್ಮಾಣ ಆಗುವುದರಿಂದ ದಯಮಾಡಿ ರಾಜಕೀಯವಾಗಿ ನಿರ್ಣಯವಾಗುವುದಕ್ಕೆ ಅವಕಾಶ ಕೊಡಬಾರದು. ಇದು ಒಳ್ಳೆಯ ಉಪಯೋಗವಾಗುವಂಥ ವ್ಯಪನ್ ಅಲ್ಲ. ಈಗಲಾದರೂ ತಾವು ದೊಡ್ಡ ಮನಸ್ಸು ಮಾಡಿ ಯಾವುದು ಕೆಟ್ಟದ್ದು, ಕೆಟ್ಟದ್ದು ಇರುವಂಥದ್ದನ್ನು ತೆಗೆದುಬಿಡಿ. ಕೆಟ್ಟದ್ದನ್ನು ತೆಗೆಯಬೇಕೆಂದು ತಾವು ಮಾಡಿದ್ದಿರೋ ನಾನು ನಿಜವಾಗಿಯೂ ಶ್ಲಾಘನೆ ಮಾಡುತ್ತೇನೆ. ನಿಮ್ಮ ಟೆರ್ಮಿನ ಕೊನೆಯಲ್ಲಿ, ನೀವು ಕೊನೆಯ ಹಂತಕ್ಕೆ ಬಂದಿರುತ್ತೀರಿ. ನಿಮ್ಮ ರಾಜಕೀಯ ಜಾಣ್ಮೆಯನ್ನು ನಾವು ಅಭಿನಂದನೆ ಮಾಡಬೇಕು. ಮೂರು ವರ್ಷ ಉಪಯೋಗ ಮಾಡಿಕೊಂಡು, ಯಾವ ಸಂಸ್ಥೆಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬೇಕು, ಯಾರನ್ನು ಮನೆಗೆ ಕಳುಹಿಸಬೇಕು ಕಳುಹಿಸಿ, ಇನ್ನು ಮುಂದೆ ಯಾರಿಗೂ ಅವಕಾಶ ಕೊಡಬಾರದು, ಏಕೆಂದರೆ ಇವರ ಅಧಿಕಾರ ಹೋಗುತ್ತದೆ. ಇನ್ನು ಬೇರೆಯವರು ಅಧಿಕಾರಕ್ಕೆ ಬರುತ್ತಾರೆ, ಅದಕ್ಕಾಗಿ ಯಾರಿಗೂ ಅವಕಾಶ ಸಿಗಬಾರದು. ಇವರ ಒಂದು ಉದ್ದೇಶ ಏನು ಇದೆ ಇದು ನಿಜವಾಗಿಯೂ ರಾಜಕೀಯ ಜಾಣ್ಮೆ ಇದನ್ನು ಮೆಚ್ಚುತ್ತೇವೆ. ಆದರೆ ಚಳುವಳಿಯ ಹಿತದೃಷ್ಟಿಯಿಂದ ನೀವು ಎಲ್ಲಾ ಕ್ರಮವನ್ನು ಕೈಗೊಂಡಿದ್ದೀರಿ. ನಾವು ಶ್ಲಾಘನೆ ಮಾಡಬೇಕು. ಆದರೆ ಒಂದು ಮಾತು, ಸದನದ ಆ ಕಡೆ ಸದಸ್ಯರು ಮತ್ತು ಈ ಕಡೆ ಸದಸ್ಯರು ಆಡಿಟ್ ಮತ್ತು ಅಡ್ಮಿನಿಸ್ಟ್ರೇಷನ್ ಬೇರೆ ಬೇರೆ ಇರಬೇಕೆನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆ ಅಭಿಪ್ರಾಯಕ್ಕೆ ತಾವು ಒಪ್ಪಿ ಅದನ್ನು ಬೇರೆ ಇಡಲು ತಾವು ಅವಕಾಶ ಕಲ್ಪಿಸಿಕೊಡಬೇಕು. ಮೊದಲಿನಿಂದ ಏನು ಇತ್ತು ಅದನ್ನು

ಮುಂದುವರೆಸಿಕೊಂಡು ಹೋಗಬೇಕು. ಕಾನೂನು ಸಚಿವರು ಮತ್ತು ಕಾಗೋಡು ತಿಮ್ಮಪ್ಪನವರು ಭಾಗವಹಿಸಿದ ಸಭೆಯಲ್ಲಿ ನಾವು ಹೇಳಿದ, ಅನೇಕ ಸಲಹೆಗಳಲ್ಲಿ ಎರಡು ಸಲಹೆಗಳನ್ನು ಒಪ್ಪಿರುತ್ತೀರಿ. ಎಲ್ಲಿ ನಾಮಿನೇಟ್ ಇದೆ, ಅಲ್ಲಿ ಒಂದು ಎಸ್ ಸಿ/ಎಸ್ ಟಿ ಇರಬೇಕು ಒಂದು ಮಹಿಳೆಗೆ ಮೀಸಲು ಇರಬೇಕು ಎಂದು ಮಾಡಿರುವ ಆ ಅಫಿಷಿಯಬ್ ಅಮೆಂಡ್‌ಮೆಂಟ್ ನಮಗೆ ಬಂದಿಲ್ಲ. ದಯಮಾಡಿ ಅದನ್ನು ಮಾಡಿ ನಮಗೆ ಕಳುಹಿಸಬೇಕು. ಆಮೇಲೆ ಪ್ರೈಮರಿ ಮತ್ತು ಸೆಕಂಡರಿ ಸೊಸೈಟಿ ಬೋರ್ಡ್ ಆಫ್ ಡೈರೆಕ್ಟರ್ ಎಷ್ಟೆಷ್ಟು ಇರಬೇಕು, ನಾವು ನೀವು ಕೂಡಿ ಬದಲಾವಣೆ ಮಾಡಿದ್ದೆವು. ಆಮೇಲೆ ಕಲ್ಯಾಣ ನಿಧಿಯ ಬಗ್ಗೆ ನಮ್ಮ ವಿಶ್ವೇಶ್ವರ ಹೆಗಡೆಯವರು ಏನು ಹೇಳಿದ್ದಾರೆ, ಅದು ಬಹಳ ಒಳ್ಳೆಯದು. ಯಾರು ಒಳ್ಳೆಯ ಸಂಸ್ಥೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ, ಯಾವ ಏರಿಯಾದಲ್ಲಿ ಕೆಲಸ ಮಾಡುತ್ತದೆ ಆ ಏರಿಯಾದಲ್ಲಿರುವ ಸಹಕಾರಿ ಕಲ್ಯಾಣನಿಧಿಗೆ ಲಾಭವಾಗಬೇಕು. ಒಳ್ಳೆಯ ಕೆಲಸ ಮಾಡಿದಂಥ ಸಹಕಾರಿ ಸಂಸ್ಥೆಗಳ ಹಣವನ್ನು ತೆಗೆದುಕೊಂಡು, ಯಾವ ಸಹಕಾರಿ ಸಂಸ್ಥೆ ದಿವಾಳಿ ಆಗಿರುತ್ತದೆ ಆ ಕಲ್ಯಾಣ ನಿಧಿಗೆ ಕೊಡುವಂಥ ವ್ಯವಸ್ಥೆ ಆಗಬಾರದು. ಒಮ್ಮೆ ಅಧಿಕಾರ ಮಂತ್ರಿಗಳಿಗೆ ಸಿಗುತ್ತದೆ ಅಥವಾ ಮಂತ್ರಿಗಳು ಹೇಳಿದ ಅಧಿಕಾರಿಗಳಿಗೆ ಸಿಗುವಂತಾದರೆ ಅದು ರಾಜಕೀಯ ನಿರ್ಣಯವಾಗುತ್ತದೆ. ಅಲ್ಲಿ ಸರಿಯಾಗಿ ನಿರ್ಣಯವಾಗುವುದಿಲ್ಲವೆಂದು ನಮ್ಮ ನಿಮ್ಮ ಅನುಭವ. ನಾನು ಯಾವಾಗಲೂ ಅಧಿಕಾರ ಇಟ್ಟುಕೊಳ್ಳಬಾರದು, ಅಧಿಕಾರವನ್ನು ಹಂಚಿಕೊಳ್ಳಬೇಕು. ಜನರ ಕೈಯಲ್ಲಿ ಅಧಿಕಾರ ಕೊಡಬೇಕು, ಶಾಸಕರ ಕೈಯಲ್ಲಿ ಅಧಿಕಾರ ಇರಬೇಕು. ಆಗ ಅನ್ಯಾಯ ಕಡಿಮೆ ಆಗುತ್ತದೆಂದು ನಮ್ಮ ನಿಮ್ಮ ಅನುಭವ. ಅದಕ್ಕೆ ದಯಮಾಡಿ ಈ ಅಧಿಕಾರವನ್ನು ಕಲ್ಯಾಣನಿಧಿಗೆ ಇಡಿ. ಅಧಿಕಾರವನ್ನು ಇಡುವುದು ಅದು ಯೋಗ್ಯ. ಆದರೆ ಅದನ್ನು ನಿರ್ಧಾರ ಮಾಡುವ ಅಧಿಕಾರ ಸಂಸ್ಥೆಗೆ ಇರಲಿ. ಆ ಜಿಲ್ಲೆಗೆ ಉಪಯೋಗ ಆಗಲಿ. ಆ ಸಂಸ್ಥೆಯ ಕಾರ್ಯವ್ಯಾಪ್ತಿಯಲ್ಲಿಯೇ ಇರಲಿ, ಕಲ್ಯಾಣ ನಿಧಿ ಅರ್ಹ ಸಹಕಾರಿ ಕಾರ್ಯಕರ್ತರಿಗೆ ಮತ್ತು ಧುರೀಣರಿಗೆ ಆಗುವ ಒಂದು ವ್ಯವಸ್ಥೆಯನ್ನು ತಾವು ತಂದರೆ ಬಹಳಷ್ಟು ಅನುಕೂಲವಾಗುತ್ತದೆ. ತಾವು ಕೆಲವು ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ನಿಮಗೆ ರಾಜಕೀಯವಾಗಿ ಅನುಕೂಲ ಮಾಡಿಕೊಳ್ಳುವ ಈ ಅಮೆಂಡ್‌ಮೆಂಟ್ ತಂದರೂ ಸಹ ಚಳುವಳಿ ಮುಖಾಂತರ ಮತ್ತು ಚಳುವಳಿಯ ಹಿತದೃಷ್ಟಿಯಿಂದ ಒಳ್ಳೆಯದಾಗಿ ಇರುವಂಥದ್ದನ್ನು ನಾನು ಸ್ವಾಗತ ಮಾಡುತ್ತೇನೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಇವತ್ತು ಬಿಲ್‌ಗೆ ಕೊನೆಯ ದಿನ ಇರುವುದರಿಂದ, ಇದು ಆದ ನಂತರ ಇನ್ನು ಅನೇಕ ಜನರು ಸಮಯವನ್ನು ಕೇಳಿ ತಮ್ಮ ವಿಚಾರವನ್ನು ಪ್ರಸ್ತಾಪ ಮಾಡುವವರು ಇರುವುದರಿಂದ ಎರಡೆರಡು ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

+ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಇಂತಹ ಒಂದು ತಿದ್ದುಪಡಿ ತಂದಿರತಕ್ಕಂಥ ಮಾನ್ಯ ಮಂತ್ರಿಗಳಿಗೆ ನಾನು ಅಭಿನಂದಿಸುತ್ತೇನೆ. ಆದರೆ ಈ ತಿದ್ದುಪಡಿಯಲ್ಲಿ ಅನೇಕ ಸಣ್ಣಪುಟ್ಟ ನ್ಯೂನತೆಗಳು ಇವೆ. ನಾನು ಎಲ್ಲೆಲ್ಲಿ ಸೂಕ್ತವಾದ ಕಾನೂನಿಗೆ ತಿದ್ದುಪಡಿ ತರುತ್ತೇವೆ ಆಗ ಕಿರುಕುಳ ಪ್ರಾರಂಭವಾಗುತ್ತದೆ. ಇದನ್ನು ಸಣ್ಣ ಸಮಸ್ಯೆ ಎಂದು ಹೇಳಿಬಿಟ್ಟರೆ ಇದು ಸಹಕಾರಿ ಆದಂಥ ತಮ್ಮ ಗಮನದಲ್ಲಿದೆ ಎಂದು ನಾನು ಭಾವಿಸುತ್ತೇನೆ. 17ನೇ ಪ್ರಕರಣದ ತಿದ್ದುಪಡಿಯಲ್ಲಿ ತಂದಿರುವ ಹತ್ತಿರದ ಸಂಬಂಧಿ ಎನ್ನುವ

ಪದವನ್ನು ವಿಶ್ಲೇಷಣೆ ಮಾಡಿ ಇತರ ಸಂಬಂಧಿ ಎಂದು ಹೇಳಿ ರಿಜಿಸ್ಟ್ರಾರ್‌ಗೆ ಬಿಟ್ಟರು. ನಾಳೆ ಏನು ಬೇಕಾದರೂ ಆಗಬಹುದು. ರಿಜಿಸ್ಟ್ರಾರ್, ಉಪ ರಿಜಿಸ್ಟ್ರಾರ್ ಏನು ಬೇಕಾದರೂ ತೀರ್ಮಾನ ಕೊಡಬಹುದು. ಹತ್ತಿರ ಸಂಬಂಧಿ ಎಂದು ಹೇಳುವಂಥದ್ದು ಇದರಲ್ಲಿ ಇದೆ. ಇನ್ನೂ ಯಾವುದಾದರೂ ಸೇರಿಸುವುದು ಇದ್ದರೆ, ಆ ಅಧಿಕಾರಿಗೆ ಇದರ ಬಗ್ಗೆ ಅಧಿಕಾರವನ್ನು ಕೊಡಬೇಡಿ, ಸಾಕಷ್ಟು ತೊಂದರೆ ಕೊಡುವಂಥದ್ದು ಇದೆ.20ಎ ವಿಧಿಯಲ್ಲಿ ಮೂರನೆ ವಿಧಿಯನ್ನು ಸೇರಿಸಿ ಒಂದು ವರ್ಷದ ಹಿಂದೆ ಸದಸ್ಯ ಎನ್ನುವುದನ್ನು ತಂದರೆತುಂಬಾ ಆರೋಗ್ಯ ಕರವಾದಂಥ ವಿಷಯ. ಅದಕ್ಕೆ ನಮ್ಮ ಸ್ವಾಗತಾರ್ಹ ಇದೆ. 21ನೇ ತಿದ್ದುಪಡಿಗೆ ಸಂಸ್ಥೆಯು ಈ ಜನರಲ್ ಬಾಡಿಯನ್ನು ಕರೆಯುವ ತೀರ್ಪು ಆಡಳಿತ ಮಂಡಳಿಗೆ ಮೂರು ವರ್ಷ 5 ವರ್ಷ ಎಂದು ಮಾಡಿರುತ್ತೀರಿ. ಸಭೆಯನ್ನು ಕರೆಯದಿದ್ದರೆ ಒಂದು ಸಾವಿರ ರೂಪಾಯಿಗಳನ್ನು ಫೈನ್ ಹಾಕುತ್ತೀರಿ ಒಂದು ಸಾವಿರ ರೂ.ಗಳನ್ನು ಫೈನ್ ಹಾಕುವುದಕ್ಕೆ ಹೇಳುತ್ತಾರೆ, ಆಡಳಿತ ಮಂಡಳಿಯವರೇ ಅವರನ್ನು ಕರೆಸಿ ಒಂದು ಸಾವಿರ ರೂ.ಗಳನ್ನು ಫೈನ್ ಕಟ್ಟಿಬಿಡುತ್ತಾರೆ. ಈ ರೀತಿಯಾಗಿ ನುಣುಚುಕೊಳ್ಳುವಂಥ ಅನೇಕ ಸಹಕಾರಿ ಸಂಘಗಳು ಇವೆ. ಅದನ್ನು ಡಿಸ್‌ಮಿಸ್ ಮಾಡುವುದನ್ನು ಇದರಲ್ಲಿ ತೆಗೆದುಕೊಂಡು ಬನ್ನಿ. ಒಂದು ಸಾವಿರ ರೂ.ಗಳನ್ನು ಫೆನಾಲ್ಟಿ ಕಟ್ಟುವುದು ಏನೂ ದೊಡ್ಡದು ಅಲ್ಲ. ಅದನ್ನು ಎಲ್ಲರು ಕಟ್ಟಿಬಿಡುತ್ತಾರೆ. ಆಮೇಲೆ ಈ ಡಿವಿಡೆಂಟ್ 25 ಪರ್‌ಸೆಂಟ್ ಹಂಚುವಂತೆ ಹೇಳಿದ್ದಾರೆ. ನನ್ನದೊಂದು ಸಲಹೆ ಇದೆ. ಮಿಲ್ಕ್ ಯೂನಿಯನ್‌ದಲ್ಲಿ ನಾವು ಮಾಡುತ್ತೇವೆ, ಹೆಚ್ಚು ಲಾಭ ಬಂದಿರತಕ್ಕಂಥ ಮಿಲ್ಕ್ ಯೂನಿಯನ್‌ದಲ್ಲಿ ಮಾರ್ಕೆಟ್ ಡಿಫರನ್ಸ್ ಎಂದು ಹೇಳಿ ವರ್ಷದಲ್ಲಿ ಎಷ್ಟು ಹಾಲು ಹಾಕಿದ್ದಾನೆ ಅದರೊಳಗೆ ದಾಮಾಷಾ ಲೆಕ್ಕ ಮಾಡಿ ಹಾಲು ಹಾಕಿದವರಿಗೆ ವಾಪಸ್ಸು ಕೊಡುತ್ತೇವೆ. ಈ ಡಿವೆಡೆಂಟ್ ಶೇರು ಹಣದ ಮೇಲೆಯೇ ಬರುತ್ತದೆ ಹೊರತು, ಬೇರೆ ಯಾವುದರ ಮೇಲೂ ಬರುವುದಿಲ್ಲ. ನಮ್ಮ ಹತ್ತಿರ ಹಣ ಜಾಸ್ತಿ ಇದ್ದರೆ ನನ್ನ ಮನೆಯಲ್ಲಿ ಇದ್ದವರಿಗೆಲ್ಲಾ ಶೇರು ಹಾಕಿ ಬಿಡುತ್ತೇವೆ. ಆದ್ದರಿಂದ ಇದರಲ್ಲಿ ವಹಿವಾಟು ಯಾರು ಮಾಡುತ್ತಾರೆ ಆ ವಹಿವಾಟು ಮಾಡಿರುವುದರ ಮೇಲೆ ಅವರಿಗೆ ಇಂತಿಷ್ಟು ಪರ್ಸೆಂಟ್ ಎಂದು ಹೇಳಿ ವಾಪಸ್ಸು ಕೊಡಲಿಕ್ಕೆ ಪ್ರಾವಿಷನ್ ಮಾಡಬೇಕಾಗುತ್ತದೆ. ದಯಮಾಡಿ ತಾವು ಇದನ್ನು ತರಬೇಕು. ಆಮೇಲೆ 24ನೇ ಪ್ರಕರಣದಲ್ಲಿ 500 ರೂಪಾಯಿಗಳ ಶೇರು ಹಣ ಇದ್ದರೆ ಅವರ ನಾಮಿನಿಗೆ ವಾಪಸ್ಸು ಕೊಡಲಿಕ್ಕೆ ಇಂಡೆಮ್‌ನಿಟಿ ಬಾಂಡ್ ತೆಗೆದುಕೊಂಡು ಕೊಡುವುದಕ್ಕೆ ಸಮಿತಿಗೆ ಅವಕಾಶ ಇತ್ತು. ಅದನ್ನು ಒಂದು ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿದ್ದೀರಿ. ಅನೇಕ ಸೊಸೈಟಿಯವರು ಏನು ಮಾಡುತ್ತಾರೆಂಬುದು ತಮಗೆ ಗೊತ್ತಿದೆ. ಒಂದು ಲಕ್ಷ ರೂಪಾಯಿಗಳಿದ್ದರೆ 8-9 ಡೈರೆಕ್ಟರ್‌ಗಳು, ಅವರು ಮನಸ್ಸು ಮಾಡಿದರೆ ಅದನ್ನು ಮುಗಿಸಿ ಬಿಡುತ್ತಾರೆ. ಅದನ್ನು ನ್ಯಾಯಾಲಯದಿಂದ ಒಂದು ದೃಢೀಕರಣ ತೆಗೆದುಕೊಂಡು 5 ನೂರು ರೂಪಾಯಿಗಳು ಇರುವಂಥದ್ದನ್ನು 5 ಸಾವಿರ ರೂಪಾಯಿಗಳಿಗೆ ಏರಿಸಿ ಈ ರೀತಿಯ ಇಂಡೆಮ್‌ನಿಟಿ ಬಾಂಡ್ ಮೇಲೆ ಸಮಿತಿಗೆ ಅಧಿಕಾರ ಕೊಡಿ. 5 ಸಾವಿರಕ್ಕಿಂತ ಹೆಚ್ಚು ಶೇರು ವಿತರಣೆ ಮಾಡಬೇಕಾದರೆ ಕೋರ್ಟಿನಿಂದ ಖಂಡಿತವಾಗಿ ಅಫಿಡೆವಿಟ್ ತರಬೇಕು. ಇಲ್ಲದಿದ್ದರೆ ಬೇರೆ ಯಾರಿಗಾದರೂ ಅನ್ಯಾಯ ಮಾಡುವಂಥ ಚಾನ್ಸಸ್ ಸಾಕಷ್ಟು ಇದೆ. ಈಗ 28ನೇ ಪ್ರಕರಣದ ಒಂದನೆ ಉಪ ಪ್ರಕರಣಕ್ಕೆ ತಿದ್ದುಪಡಿ ತರುವಾಗ 50 ಜನರು ಅಂದರೆ 5ನೇ ಒಂದು ಭಾಗ ಯಾವುದು

ಕಡಿಮೆಯೋ ಅದು ಎಂದು ಹೇಳಿದ್ದೀರಿ. ಯಾವುದು ಹೆಚ್ಚು ಎಂದು ಹೇಳಿ, ನಮ್ಮ ಮ್ಯಾಂಕೋಸ್‌ನಲ್ಲಿ 10 ಸಾವಿರ ಜನರು ಷೇರುದಾರರಿದ್ದಾರೆ. 50 ಜನರು ಕೂಡಿ ಜನರಲ್ ಬಾಡಿ ಸಭೆ ಕರೆಯಬೇಕೆಂದು ನೋಟೀಸು ಕೊಟ್ಟು ಹೇಳಿ ಹೋದರೆ, ಪ್ರತಿ ವರ್ಷ 4 ಸ್ಪೆಷಲ್ ಜನರಲ್ ಬಾಡಿ ಸಭೆ ಕರೆದರೆ ಅಲ್ಲಿರುವ ಹಣ ಮುಗಿದುಹೋಗುತ್ತದೆ.

12.20 ಪಿ.ಎಂ

ಜನರಲ್ ಬಾಡಿ ಕರೆಯುವುದು ದೊಡ್ಡ ಹೊರೆಯಾಗುತ್ತದೆ. ಆದುದರಿಂದ, ಐದನೆಯ ಒಂದು ಭಾಗ ಅಥವಾ 50 ಜನ, ಯಾವುದು ಹೆಚ್ಚು ಅದು ಎಂದು ದಯಮಾಡಿ ಇದರಲ್ಲಿ ತಿದ್ದುಪಡಿ ಇಟ್ಟುಕೊಂಡರೆ ತುಂಬಾ ಒಳ್ಳೆಯದಾಗುತ್ತದೆ. ಸಹಕಾರಿ ಕಲ್ಯಾಣ ನಿಧಿ ಏನಿದೆ ಇದರಲ್ಲಿ 2 ಪರ್ಸೆಂಟ್ ಈಗಾಗಲೇ ಅವರಿಗೆ ಕೊಡುತ್ತಿದ್ದಾರೆ. ಇದರ ಬಗ್ಗೆ ಎಲ್ಲರೂ ಹೇಳಿದ್ದಾರೆ. ದಯಮಾಡಿ ಅದನ್ನು ಮಾಡಬೇಡಿ. ಒಳ್ಳೆಯ ಸೊಸೈಟಿಗಳನ್ನು ಚೆನ್ನಾಗಿ ಬೆಳಸಬೇಕೆಂದು ಯೋಚನೆ ಮಾಡಿರತಕ್ಕ ಸಹಕಾರಿಗಳೆಲ್ಲಾ ಸೇರಿ ಹೆಚ್ಚು ಲಾಭ ಮಾಡುವುದಕ್ಕೆ ಇದರಿಂದ ನಿರುತ್ಸಾಹ ಮಾಡಿದಂತಾಗುತ್ತದೆ. ಹೆಚ್ಚು ಲಾಭ ಮಾಡಿದ ಹಾಗೆ ಹೆಚ್ಚಿನ ಹಣವನ್ನು ಕೇಂದ್ರ ಸಂಘಕ್ಕೆ ಕೊಡಬೇಕಾಗುತ್ತದೆಂದರೆ ಇದನ್ನು ಯಾರೂ ಮಾಡುವುದಿಲ್ಲ. ಯಾವ ಕೆಟ್ಟ ಸಹಕಾರ ಸಂಘ ಇದೆಯೋ, ಯಾರು ಅಸಮರ್ಥರೋ ಅವರು ಅದನ್ನು ಅನುಭವಿಸಬೇಕು, ಪಾಲಿಗೆ ಬಂದದ್ದು ಪಂಚಾಮೃತ ಎಂದು. ಒಳ್ಳೆಯ ಸಹಕಾರ ಸಂಘದ ಲಾಭವನ್ನು ಕಿತ್ತು ಅವರಿಗೆ ಕೊಡುವ ಕೆಲಸವನ್ನು ದಯಮಾಡಿ ಮಾಡಬೇಡಿ ಎಂದು ವಿನಂತಿಸಿಕೊಂಡು ಇನ್ನೂ ಅನೇಕ ಸಲಹೆಗಳಿದ್ದರೂ ಸಮಯದ ಅಭಾವದಿಂದ ಹೆಚ್ಚು ಹೇಳುವುದಕ್ಕೆ ಹೋಗದೆ, ಇರುವುದರ ಮಟ್ಟಿಗೆ ಈ ಮಸೂದೆ ಚೆನ್ನಾಗಿದೆ. ಈ ತಿದ್ದುಪಡಿಯನ್ನು ಮಂಡಿಸುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ......

ಅಧ್ಯಕ್ಷರು : ನನ್ನದೇನೂ ತಕರಾರು ಇಲ್ಲ.

ಶ್ರೀ ಅರಗ ಜ್ಞಾನೇಂದ್ರ : ಕಾಂಗ್ರೆಸ್ ಮಿತ್ರರಾದ ಮಾನ್ಯ ಖರ್ಗೆಯವರು ಇದನ್ನು ಜಂಟಿ ಸದನದ ಸಮಿತಿಗೆ ಕಳುಹಿಸಬೇಕೆಂದು ಹೇಳುತ್ತಿದ್ದರು. ಜಂಟಿ ಸದನದ ಸಮಿತಿಗೆ ಹೋಗಿದ್ದರೆ ಮತ್ತೆ ಇನ್ನೊಂದು ವರ್ಷ ಮುಂದೆ ಹೋಗುತ್ತಿತ್ತು. ಈ ತಿದ್ದುಪಡಿ ಮಸೂದೆಯನ್ನು ಈಗಲೇ ಪಾಸ್ ಮಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಅವರಿಗೆ ಅಭಿನಂದಿಸಿ, ನಾನು ಒಬ್ಬ ಸಹಕಾರಿಯಾಗಿ ಕೊನೆಯದಾಗಿ ತಮಗೂ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಆರ್. ಜಿ. ವೆಂಕಟಾಚಲಯ್ಯ (ದೊಡ್ಡಬಳ್ಳಾಪುರ) : ಮಾನ್ಯ ಅಧ್ಯಕ್ಷರೆ, ನಾನು ಹೇಳಬೇಕಾದ್ದುದನ್ನು ಅವರು ಹೇಳಿದ್ದಾರೆ. ಆದರೆ ಒಂದು ವಿಷಯ. ಸಾರ್ವಜನಿಕರ ಅಭಿಪ್ರಾಯದಲ್ಲಿ ಸಹಕಾರ ಸಂಘ ಸಂಸ್ಥೆಗಳಿಗೆ ದುಡ್ಡು ತಿಂದುಹಾಕಿದರೆ ಸರ್ಕಾರ ಏನೂ ಮಾಡುವುದಿಲ್ಲವೆಂಬ ಅಭಿಪ್ರಾಯ ಬಂದಿದೆ. ಕಾರಣವೇನೆಂದರೆ, ಸರ್ಕಾರ ತೆಗೆದುಕೊಳ್ಳತಕ್ಕ ತೀರ್ಮಾನ ಏನಿದೆ ಅದನ್ನು ಜಾಗ್ರತೆಯಾಗಿ ತೆಗೆದುಕೊಳ್ಳುತ್ತಿಲ್ಲ. ಪ್ರಾಥಮಿಕ ಸಹಕಾರ ಸಂಘಗಳ ಕಾರ್ಯದರ್ಶಿಗಳನ್ನು ವರ್ಗ ಮಾಡಿದರೆ ಸಸ್ಪೆಂಡ್ ಮಾಡಿದರೆ ಪುಸ್ತಕಗಳನ್ನು ಕೊಡುವುದಿಲ್ಲ, ಚಾರ್ಜ್ ಕೊಡುವುದಿಲ್ಲ. ಒಂದು ಪುಸ್ತಕ ಕೊಟ್ಟರೆ ಇನ್ನೊಂದು ಪುಸ್ತಕ ಕೊಡುವುದಿಲ್ಲ. ಅವರ ಮೇಲೆ ಕ್ರಮ ಕೈಗೊಳ್ಳುವುದು ವರ್ಷಗಟ್ಟಲೆ

ಹಿಡಿಯುತ್ತಿದೆ. ಇವತ್ತು ಜಿಲ್ಲಾ ಬ್ಯಾಂಕ್ ಆಗಲಿ, ಯಾವುದೇ ಬ್ಯಾಂಕ್ ಆಗಲಿ ಸಹಕಾರ ಸಂಘಗಳಲ್ಲಿ ಹಣ ತಿಂದಿರತಕ್ಕದ್ದರ ಮೇಲೆ ಸರ್ಚಾರ್ಜ್ ಪ್ರೊಸೀಡಿಂಗ್ಸ್ ಇದೆ. ಬಹುಶಃ ಸರ್ಕಾರ ಯಾರ ಮೇಲಾದರೂ ಸರ್ಚಾರ್ಜ್ ಪ್ರೊಸೀಡಿಂಗ್ಸ್ ಹಾಕಿ ಹಣ ವಸೂಲ್ಮಾಡಿದೆ ಎಂಬುದು ನನಗೆ ಗೊತ್ತಿರುವ ಹಾಗೆ ಯಾವುದೂ ಇಲ್ಲ. ಆದ್ದರಿಂದ, ದಯಮಾಡಿ ಕೇಳಿಕೊಳ್ಳುತ್ತೇನೆ, ಸಹಕಾರ ಸಂಸ್ಥೆಗಳಲ್ಲಿ ನಂಬಿಕೆ ಇಟ್ಟುಕೊಂಡಿರತಕ್ಕ ಅನೇಕ ಜನರು ಇರುವಾಗ, ಸಹಕಾರ ಸಂಸ್ಥೆಗಳಲ್ಲಿ ಹಣ ತಿಂದವರು ಎಷ್ಟೇ ದೊಡ್ಡ ಮನುಷ್ಯರು ಇರಲಿ, ಯಾವುದೇ ರಾಜಕೀಯ ಒತ್ತಡ ಇದ್ದವರು ಇರಲಿ, ಅಂಥವರನ್ನು ಮೊದಲು ಜೈಲಿಗೆ ಕಳುಹಿಸತಕ್ಕ ವ್ಯವಸ್ಥೆ ಮಾಡುವುದಕ್ಕೆ ಮೊದಲು ಕಾನೂನು ತಿದ್ದುಪಡಿ ತನ್ನಿ. ಈಗ ಇರತಕ್ಕ ಕಾನೂನು ಚೌಕಟ್ಟಿನಲ್ಲಿ ಅಷ್ಟೊಂದು ಕ್ರಮ ಇಲ್ಲ. ಏಕೆಂದರೆ ನನಗೆ ಗೊತ್ತಿರುವ ಹಾಗೆ ನಾನು ಜಿಲ್ಲಾ ಬ್ಯಾಂಕ್ ಅಧ್ಯಕ್ಷನಾಗಿ 6 ವರ್ಷ ಕೆಲಸ ಮಾಡಿದ್ದೇನೆ. ಬೇಕಾದಷ್ಟು ಸಹಕಾರ ಸಂಘಗಳಲ್ಲಿ ಹಣ ದುರುಪಯೋಗವಾಗಿದೆ. 10-15 ವರ್ಷಗಳಾದರೂ ಇದುವರೆಗೆ ಅದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ರೆವ್ಯೂ ಮಾಡಿದಾಗ ಪುಸ್ತಕ ಸೀಜ್ ಮಾಡುವುದಕ್ಕೆ ಕೊಟ್ಟಿದ್ದಾರೆ. ತಡ ಮಾಡಿದಷ್ಟೂ ಆಸ್ತಿ ಪರಭಾರೆ ಮಾಡಿ ಅದರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ. ಸೆಕ್ಷನ್ 107 ಹಾಕಿದ್ದಾರೆ, ಕಡೆಗೆ ಏನೂ ಸಿಗುವುದಿಲ್ಲ. ಆದುದರಿಂದ ಈ ಸಹಕಾರ ಸಂಘ ಸಂಸ್ಥೆಗಳಲ್ಲಿ ಹಣ ತಿಂದು ಹಾಕಿದರೆ ಏನೂ ಮಾಡುವುದಿಲ್ಲ ಎಂಬ ಸಾಮಾನ್ಯ ಅಭಿಪ್ರಾಯ ಬಂದಿರುವುದರಿಂದ ದಯಮಾಡಿ ಮಾನ್ಯ ಸಹಕಾರ ಸಚಿವರು ಇದಕ್ಕೆ ಒಂದು ಸರಿಯಾದ ತಿದ್ದುಪಡಿಯನ್ನು ತಂದು ಯಾರು ಎಷ್ಟೇ ದೊಡ್ಡ ವ್ಯಕ್ತಿಯಾಗಲಿ, ಕಾರ್ಯದರ್ಶಿಯಾಗಲಿ, ಆಡಳಿತ ಮಂಡಳಿಯವರಾಗಲಿ ಅವರನ್ನು ಜೈಲಿಗೆ ಕಳುಹಿಸತಕ್ಕ ವ್ಯವಹಾರ ಮಾಡುವುದಕ್ಕೆ ತಾವು ತಿದ್ದುಪಡಿಯನ್ನು ತರಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೆಮಾರನಹಳ್ಳಿ) : ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಮೇರೆಗೆ ಈ ಒಂದು ತಿದ್ದುಪಡಿ ವಿಧೇಯಕವನ್ನು ಮಾನ್ಯ ಸಚಿವರು ತಂದಿದ್ದಾರೆ. ನಾನು ಈ ವಿಧೇಯಕವನ್ನು ಪೂರ್ತಿ ನೋಡಿಲ್ಲ. ಆದರೂ ಕೂಡ ತಮ್ಮ ಅಪ್ಪಣೆ ಪಡೆದು ಕೆಲವು ಅಂಶಗಳನ್ನು ಸದನದ ಮುಂದೆ ಮಂಡಿಸಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಈ ಒಂದು ಸಹಕಾರ ಕ್ಷೇತ್ರದಲ್ಲಿ ನಾನು ತಿಳಿದ ಮಟ್ಟಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರು ಏನು ನಮ್ಮ ರಾಜ್ಯದಲ್ಲಿದ್ದೇವೆ ಈ ಒಂದು ಸಹಕಾರಿ ಕ್ಷೇತ್ರದಲ್ಲಿ ಹೆಚ್ಚಿಗೆ ನಾವು ಪಾಲ್ಗೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಅವುಗಳ ವಿಚಾರದಲ್ಲಿ ನಾನು ತಿಳಿದಮಟ್ಟಿಗೆ ಪ್ರಾಥಮಿಕ ಸಹಕಾರ ಸಂಘಗಳಲ್ಲಿ ಒಬ್ಬರಿಗೆ ಅವಕಾಶ ಇದೆ, ಪಿ.ಎಲ್.ಡಿ. ಬ್ಯಾಂಕಿನಲ್ಲಿ ಒಬ್ಬರಿಗೆ ಅವಕಾಶ ಇದೆ, ಟಿ.ಎ.ಪಿ.ಸಿ.ಎಂ.ಎಸ್ ನಲ್ಲಿ ಒಬ್ಬರಿಗೆ ಅವಕಾಶ ಇದೆ. ಆದರೆ ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಡಿಸಿಸಿ ಬ್ಯಾಂಕ್ ಮತ್ತಿತರ ಸಂಸ್ಥೆಗಳು ಏನಿವೆ ಈ ಒಂದು ಕ್ಷೇತ್ರದಲ್ಲಿ ನಮ್ಮ ರಾಜ್ಯದಲ್ಲಿರತಕ್ಕ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರೂ ಕೂಡ ಮುಂದೆ ಸಹಕಾರಿ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದಕ್ಕೆ ಮಾನ್ಯ ಸಹಕಾರಿ ಸಚಿವರು ಕಾನೂನಿಗೆ ತಿದ್ದುಪಡಿ ತಂದು ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಬಯಸುತ್ತೇನೆ.

+ ಶ್ರೀ ಜಿ. ಚಂದ್ರಣ್ಣ (ದೇವನಹಳ್ಳಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷ್ಣ ಮೂರ್ತಿಯವರು ಏನು ಹೇಳಿದ್ದಾರೆ ಅದು ಆಗಬೇಕಾಗಿದೆ. ದಯಮಾಡಿ ಮಾನ್ಯ ಸಹಕಾರ ಸಚಿವರು ಕಾನೂನಿಗೆ ತಿದ್ದುಪಡಿ ತಂದು ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಂಡು, ನಾನು ನನ್ನ ಸಹಮತವನ್ನು ವ್ಯಕ್ತಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೆ, ಅಂತೂ ಇಂತೂ ಇದು ಮುಕ್ತಿ ಕಾಣುವ ಹಂತಕ್ಕೆ ಬಂದಿದೆ. ಒಂದೇ ಇದರಲ್ಲಿ ಪ್ರಸ್ತಾಪ ಮಾಡುವುದು, ಈಗಾಗಲೇ ಸಾಕಷ್ಟು ಸಮಿತಿಗಳು ಇದರ ಬಗ್ಗೆ ಎಲ್ಲಾ ಕುಳಿತು ಚರ್ಚೆ ಮಾಡಿ ಎಲ್ಲರ ಸಲಹೆ ಪಡೆದು ಮಸೂದೆಯನ್ನು ತಂದಿದ್ದೀರಿ. ವರ್ಗೀಕರಣ ಮಾಡಬೇಕಾದರೆ, ಪ್ರಾಥಮಿಕ ಸಂಘ, ಮಧ್ಯಮ, ಅಫೆಕ್ಸ್ ಬ್ಯಾಂಕ್ ಎಂದು ಮಾಡಿ ಸದಸ್ಯರ ಸಂಖ್ಯೆಯನ್ನು ಕ್ರಮವಾಗಿ 9, 11, 25 ಎಂದು ಮಾಡಿದ್ದೀರಿ. ಈ ರೀತಿ ವ್ಯತ್ಯಾಸಗಳು ಸಾಧುವೇ ಎಂಬುದರ ಬಗ್ಗೆ ಒಂದು ಚಿಂತನೆ ಮಾಡಿ. ಈಗಾಗಲೇ ನಾಮನಿರ್ದೇಶನ ಮಾಡತಕ್ಕದ್ದನ್ನು ಕೈಬಿಡಬೇಕೆಂದು ತೀರ್ಮಾನ ಮಾಡಿದ್ದೀರಿ. ನಾಮ ನಿರ್ದೇಶನ ಮಾಡುವ ಸಂದರ್ಭದಲ್ಲಿ 3 ಜನರನ್ನು ಮಾಡಬೇಕೆಂದು ಮಾಡಿದ್ದೀರಿ. ಅದು ಹತ್ತು ಲಕ್ಷಕ್ಕಿಂತ ಕಡಿಮೆ ಬಂಡವಾಳ ಇರತಕ್ಕ ಸಂಸ್ಥೆಯಲ್ಲಿ ಮಾಡಬೇಕಾದರೆ 3 ಜನ ಅಂದರೆ ಯಾರು? ನಾನು ಹೇಳತಕ್ಕದ್ದು, ಸಾಮಾಜಿಕವಾಗಿ ಹಿಂದುಳಿದಿರತಕ್ಕವರು, ಪರಿಶಿಷ್ಟ ಜಾತಿಯವರು ಅಥವಾ ಮಹಿಳೆಯರು ಇರಬಹುದು ಅವರಿಗೆ ಹೆಚ್ಚಿನ ಪ್ರಾತಿನಿಧ್ಯ ಬರುವ ರೀತಿಯಲ್ಲಿ ಅವಕಾಶ ಕಲ್ಪಿಸಬೇಕು. ಮತ್ತೊಂದು ತಾವು ಅವರಿಗೆ ಮತದಾನದ ಹಕ್ಕು ಇದೆಯೇ ಇಲ್ಲವೇ ಎಂದು ವರ್ಡಿಂಗ್ ನೋಡಿದಾಗ ಪದಾಧಿಕಾರಿಗಳಾಗಿ ಆಯ್ಕೆ ಮಾಡುವುದಕ್ಕೆ ಅರ್ಹರಲ್ಲ ಎಂದು ಅಷ್ಟಕ್ಕೆ ಹೇಳಿದ್ದೀರಿ. ಮತದಾನದ ಹಕ್ಕು ಇದೆಯೇ ಇಲ್ಲವೇ ಎಂಬ ದ್ವಂದ್ವ ಇದೆ. ಈ ವರ್ಡಿಂಗ್ ಬದಲಾವಣೆ ಮಾಡಿದರೆ ಸಹಾಯವಾಗುತ್ತದೆ ಎಂಬ ಮಾತನ್ನು ಹೇಳಿ ಇದು ಪ್ರಗತಿಪರವಾಗಿರತಕ್ಕ ಮಸೂದೆ, ನಿಜವಾಗಿ ಇದು ಬಹಳ ವರ್ಷಗಳ ಹಿಂದೆಯೇ ಆಗಬೇಕಾದ ಮಸೂದೆ ಎಂದು ಹೇಳಿ, ಇದನ್ನು ನಾನು ಸ್ವಾಗತಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಟಿ.ಹೆಚ್. ಬಸವರಾಜು (ಹೊಸದುರ್ಗ) : ಮಾನ್ಯ ಅಧ್ಯಕ್ಷರೆ, ಸಹಕಾರ ಸಂಘಗಳ ತಿದ್ದುಪಡಿ ವಿಧೇಯಕದಲ್ಲಿ ಈಗಾಗಲೇ ಮಾನ್ಯ ಸಚಿವರು ಕಲಂ 2(ಎ) 3 ಸಬ್ ಸೆಕ್ಷನ್ (1)ರಲ್ಲಿ ಬರುವಂಥ ಈ ಒಂದು ಲೆಕ್ಕ ಪರಿಶೋಧನಾ ವ್ಯವಸ್ಥೆಯನ್ನು ಇವತ್ತು ನಿಬಂಧಕರ ಒಂದು ಆಡಳಿತ ವ್ಯಾಪ್ತಿಯಲ್ಲಿ ತರಲಿಕ್ಕೆ ಇಚ್ಛೆಪಟ್ಟಿದ್ದಾರೆ. ಆದರೆ ಇದು ನಿಜವಾಗಿ ಸಹಕಾರಿ ವ್ಯವಸ್ಥೆಯಲ್ಲಿ ನಿಬಂಧಕರ ಒಂದು ಆಡಳಿತದಲ್ಲಿ ಬಂದರೆ ಮುಕ್ತವಾಗಿ ಆ ಒಂದು ಸಂಸ್ಥೆಯ ಲೆಕ್ಕಪತ್ರಗಳನ್ನು ಸರಿಯಾಗಿ ಮತ್ತು ಕ್ರಮವಾಗಿ ನಾವು ನಿರ್ವಹಣೆ ಮಾಡುವುದಕ್ಕಾಗುತ್ತದೆಂದು ಅನ್ನಿಸುವುದಿಲ್ಲ. ಆದ್ದರಿಂದ ದಯವಿಟ್ಟು ಮಾನ್ಯ ಸಚಿವರು ಮತ್ತೊಮ್ಮೆ ಈಗಿರತಕ್ಕ ಪದ್ಧತಿಯನ್ನೇ ಮುಂದುವರಿಸಿಕೊಂಡು ಹೋಗಬೇಕೆಂದು ವಿನಂತಿಸುತ್ತೇನೆ. ಏಕೆಂದರೆ ಇವತ್ತು ಉಪ ನಿಬಂಧಕರು ಇರಬಹುದು, ಮತ್ತು ಜಿಲ್ಲೆಯ ಒಂದು ವ್ಯವಸ್ಥೆಯಲ್ಲಿ ಇದರದ್ದೇ ಒಂದು ಪ್ರತ್ಯೇಕ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗುವ ಅವಶ್ಯಕತೆ ಇದೆ. ಮಾನ್ಯ ಸಚಿವರು ಕಳೆದ ಒಂದೂವರೆ ವರ್ಷದಿಂದ, ಐದು ವರ್ಷಗಳ ಅವಧಿಗೆ ಚುನಾವಣೆಗಳನ್ನು ಮಾಡುವಂಥ ವ್ಯವಸ್ಥೆಯನ್ನು ಈ ಒಂದು ಸಹಕಾರಿ ಕ್ಷೇತ್ರದಲ್ಲಿ ತರುತ್ತೇನೆಂದು ಹೇಳಿರುವುದು ನಿಜಕ್ಕೂ ಸ್ವಾಗತಾರ್ಹ ಏಕೆಂದರೆ 3 ವರ್ಷಗಳಿಗೊಮ್ಮೆ ಬಹಳಷ್ಟು ಸಹಕಾರ ಸಂಘಗಳಿಗೆ ಹೊರೆಯಾಗುವ

ಪದ್ಧತಿಯನ್ನು ತೆಗೆದು 5 ವರ್ಷಗಳಿಗೊಮ್ಮೆ ಚುನಾವಣೆ ಎಂದು ಮಾಡಿದ್ದನ್ನು ಸ್ವಾಗತ ಮಾಡಿ ಈಗ ನನಗೊಂದು ಸ್ಪಷ್ಟೀಕರಣ ಬೇಕಾಗಿದೆ. 5 ವರ್ಷ ಕಾಲದ ಅವಕಾಶವನ್ನು ಏನು ಕೊಟ್ಟಿದ್ದೀರಿ ಅದು ಏಪ್ರಿಲ್‌ನಲ್ಲಿ ಚುನಾವಣೆಯಾದಂಥ ಸಹಕಾರ ಸಂಘಗಳನ್ನು ಒಳಗೊಂಡೋ ಅಥವಾ ಈ ವರ್ಷದಿಂದ ಆಗತಕ್ಕ ಚುನಾವಣೆಯಿಂದಲೋ ಎಂಬುದನ್ನು ದಯವಿಟ್ಟು ಹೇಳಬೇಕು. ಕಳೆದ ವರ್ಷದಿಂದ ಇದನ್ನು ಜಾರಿಗೆ ತಂದರೆ ಹೆಚ್ಚಿನ ಸಹಕಾರ ಸಂಘಗಳಿಗೆ ಅನುಕೂಲವಾಗುತ್ತದೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಅಧ್ಯಕ್ಷರೆ, ಅಧ್ಯಕ್ಷ ಮತ್ತು ಉಪಾಧ್ಯಕ್ಷ ಪದವಿಗಳನ್ನು ಹಂಚುವ ಸಂದರ್ಭದಲ್ಲಿ ಜನತಾದಳದವರು ಸಾಮಾಜಿಕ ನ್ಯಾಯವನ್ನು ಅನುಸರಿಸಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ಕೊಟ್ಟಿದ್ದಾರೆ. ಅದು ಸ್ವಾಗತಾರ್ಹ. ತಮಗೆ ಅಭಿನಂದನೆಯನ್ನು ಸಲ್ಲಿಸಿದರೂ ಕೂಡ ತಪ್ಪಾಗಬಾರದು. ಇದೇ ಒಂದು ಪದ್ಧತಿಯನ್ನು ಇಲ್ಲೂ ಕೂಡ ತರುವಂತಹದ್ದು ಮಾಡಬೇಕು. ಸಹಕಾರ ಕ್ಷೇತ್ರದಲ್ಲಿ ಅದನ್ನು ಮಾಡಿ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಬಸವರಾಜ್‌ರವರೇ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಗೆ ಮೀಸಲಾತಿಯನ್ನು ತಂದವರು ಕಾಂಗ್ರೆಸ್‌ನವರು, ಜನತಾದಳದವರಲ್ಲ. ಕಾನೂನು ತಿದ್ದುಪಡಿ ಮಾಡಿ ತಂದವರು ನಾವು ನಮಗೆ ನೀವು ಶಹಭಾಷ್‌ಗಿರಿ ಕೊಡಿ.

ಶ್ರೀ ಹೆಚ್.ಡಿ. ಬಸವರಾಜ್ : ತಮಗೆ ಧನ್ಯವಾದಗಳು ಏಕೆಂದರೆ ರೆಕಾರ್ಡ್ಸ್ ಸೆಟ್ ರೈಟ್ ಮಾಡಿದ್ದೀರಿ. ನಾವು ತಂದಿದ್ದೇವೆಂದು ಅವರು ಹೇಳಿದ್ದಾರೆ. ಅವರು ತಂದಿರುವುದನ್ನು ಇವರು ಮುಂದುವರಿಸಬೇಕಾಗಿದೆ. ಹಾಗೆ ಮಾಡಿದರೆ ಈ ಪದ್ಧತಿಯನ್ನು ಬಹಳಷ್ಟು ಜನ ಈ ಸರ್ಕಾರವನ್ನು ಬೆಂಬಲಿಸುವುದರ ಜೊತೆಗೆ ತಮ್ಮ ಬಗ್ಗೆ ಪ್ರಶಂಸೆಯನ್ನು ಮಾಡುತ್ತಾರೆಂದು ಹೇಳಿ ಈ ಸಂದರ್ಭದಲ್ಲಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

+ ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, ಮೊಟ್ಟಮೊದಲನೆಯದಾಗಿ ಈವೊಂದು ಬಿಲ್ಲನ್ನು ಪಾಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತಮಗೆಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅದೇ ರೀತಿಯಾಗಿ ಈ ಸದನದ ಎಲ್ಲಾ ಸದಸ್ಯರಿಗೆ ಅಭಿನಂದನೆ, ಎಲ್ಲಾ ಸದಸ್ಯರು ಇವತ್ತು ಇದನ್ನು ಸ್ವಾಗತ ಮಾಡಿದ್ದಾರೆ. ಆ ಕಾರಣದಿಂದ ಅವರೆಲ್ಲರಿಗೂ ನಾನು ಕೃತಜ್ಞತೆಗಳನ್ನು ಹೇಳುತ್ತೇನೆ. ಕಳೆದ ಮೂರು ವರ್ಷಗಳಿಂದ ನಾನು ಸಹಕಾರ ಸಚಿವನಾದ ಮೇಲೆ ಈ ಪ್ರಯತ್ನವನ್ನು ಮಾಡುತ್ತಿದ್ದೇನೆ. ಹಿಂದಿನ ಮುಖ್ಯಮಂತ್ರಿಗಳಾದ ಮಾನ್ಯ ದೇವೇಗೌಡರು ಇದಕ್ಕೆ ಬೆಂಬಲ ನೀಡಿದ್ದರು ಆ ವೇಳೆಯಲ್ಲಿಯೇ ಇದು ಬರಬೇಕಾಗಿತ್ತು. ತದನಂತರ ನಮ್ಮ ಮುಖ್ಯಮಂತ್ರಿಗಳು ಹಾಗೂ ಮಂತ್ರಿಮಂಡಲದ ಸದಸ್ಯರು ಮೊಟ್ಟಮೊದಲನೆಯದಾಗಿ ನಮ್ಮ ಪಕ್ಷದ ವೇದಿಕೆಯಲ್ಲಿ ಇದನ್ನು ತಂದಾಗ ಎಲ್ಲರೂ ಇದನ್ನು ವ್ಯಾಪಕವಾಗಿ ಸ್ವಾಗತ ಮಾಡಿ, ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬೇಕೆನ್ನುವ ಮಾತನ್ನು ಹೇಳಿ ಈ ಬಿಲ್ ಬರಲು ಅವರೆಲ್ಲರೂ ಕಾರಣಕರ್ತರಾದರು ಆಮೇಲೆ ಎಲ್ಲಾ ವಿರೋಧಪಕ್ಷದ ಹಿರಿಯ ಸದಸ್ಯರು ಸಹಕಾರಿ ಕ್ಷೇತ್ರ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬೇಕು ಸರ್ಕಾರದ ಹಸ್ತಕ್ಷೇಪ

ಇರಬಾರದು, ರಾಷ್ಟ್ರಾದ್ಯಂತ ಈವೊಂದು ವ್ಯವಸ್ಥೆಯನ್ನು ತರಬೇಕೆನ್ನುವ ಪ್ರಯತ್ನದಲ್ಲಿ ಕಳೆದ ಮೂರು ವರ್ಷಗಳಿಂದ ಪ್ರಯತ್ನ ಮಾಡಿದರೂ ಕೂಡ ಮಾನ್ಯ ಮಿತ್ರರಾದ ಡಿ.ಆರ್. ಪಾಟೀಲ್ ರವರು ನೀವು ಹೋಗುವ ಮುನ್ನ ತೆಗೆದುಕೊಂಡು ಬಂದಿದ್ದೀರಿ ಅಂದರು. ಬಹುಶಃ ಹೋಗುವ ಮುನ್ನ ತೆಗೆದುಕೊಂಡು ಬರುವುದಕ್ಕೂ ಅಡ್ಡಿ ಮಾಡಿದಿರಿ ನೀವು. ತಮಗೆ ಗೊತ್ತಿದೆ, ನಮ್ಮ ಆಫೀಸಿಗೆ ಬರುವುದು ಪಾಟೀಲರೇ ಸ್ವಲ್ಪ ತಡೀರಿ ಎಲ್ಲರಿಗೂ ಹೇಳುತ್ತೇನೆ ಎಂದು ಅವರು ಹೇಳುವುದು. ಸಮನಾಗಿ ನಾನು ಮೊದಲನೇ ವರ್ಷದಲ್ಲಿ ತರಬೇಕೆಂದು ವಿಚಾರ ಇತ್ತು. ಕೆಲವು ಮೀಟಿಂಗ್‌ಗಳನ್ನು ಮಾಡಬೇಕಾಗುತ್ತದೆ. ಹಿರಿಯ ಸಹಕಾರಿಗಳನ್ನು ಕೇಳಬೇಕಾಗುತ್ತದೆ. ರಾಷ್ಟ್ರಾದ್ಯಂತ ಎಲ್ಲೆಲ್ಲಿ ಹೇಗಿದೆ ಅದನ್ನು ನೋಡಿ, ನಾನೇ ಮಹಾ ಶಾಣೆ ಎಂದು ಅಲ್ಲ. ಎಲ್ಲರ ಅಭಿಪ್ರಾಯ ಕೇಳಿ ಬಿಲ್ ಮಾಡಿದ್ದೇವೆ. ಎಲ್ಲಾ ರಾಜ್ಯಗಳಿಂದ ಮಾಹಿತಿಯನ್ನು ತರಿಸಿ ನಮ್ಮಲ್ಲಿದ್ದಂತಹ ಕೆ.ಹೆಚ್. ಪಾಟೀಲ್‌ರವರ ವರದಿ ಮತ್ತೆ ಎಲ್ಲಾ ವರದಿಗಳನ್ನು ಕ್ರೋಢೀಕರಿಸಿ ಇವತ್ತು ಈ ಬಿಲ್ಲನ್ನು ತರುವ ಪ್ರಯತ್ನ ಮಾಡಿದ್ದೇವೆ. ಮಾನ್ಯ ಡಿ.ಆರ್. ಪಾಟೀಲ್ ರವರು ಬೇಡಿಕೆಯ ಮೇಲೆ ಮಾತನಾಡುವಾಗ ಸಚಿವರು ಬರೀ ಬಸವಣ್ಣನವರ ವಚನ ಹೇಳುತ್ತಾರೆ ನುಡಿದಂತೆ ನಡೆಯುವುದಿಲ್ಲವೆನ್ನುವ ಮಾತನ್ನು ಹೇಳಿದರು. ಹಾಗೆ ನಡೆದಿದ್ದೇನೆಂದು ನನಗಂತೂ ಅನ್ನಿಸುತ್ತದೆ. ಆದರೂ ಕೂಡ ಕೆಲವು ವ್ಯವಸ್ಥೆಯಲ್ಲಿ ನಾವು ಸರಿ ಹೊಂದಿಸಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು : ನೀವು ಬಸವಣ್ಣನವರ ಅನುಯಾಯಿ ಎಂದು ಹೇಳಿದರೂ ಕೂಡ ಅದಕ್ಕೆ ಸರ್ಟಿಫಿಕೇಟ್ ಕೊಡಬೇಕಾದವರು ಮಾನ್ಯ ಶಂಕರಲಿಂಗೇಗೌಡರು ಮಾತ್ರ. ಬೇರೆ ಯಾರು ಸರ್ಟಿಫಿಕೇಟ್ ಕೊಟ್ಟರೂ ನಾನು ಒಪ್ಪುವುದಿಲ್ಲ. ಅವರು ಕೊಟ್ಟರೆ ಆಗಬಹುದು. ಮಾನ್ಯ ಶಂಕಲಿಂಗೇಗೌಡರೇ, ನೀವು ಮಾತನಾಡುತ್ತಾ ಇದ್ದಿರಿ. ಡಿ.ಆರ್. ಪಾಟೀಲ್‌ರವರು ಸಚಿವರು ಬರೀ ಬಸವಣ್ಣನವರ ವಚನ ಹೇಳುತ್ತಾರೆ ಅದರಂತೆ ನಡೆದುಕೊಳ್ಳುವುದಿಲ್ಲವೆಂದು ಹೇಳಿದರು ಅದಕ್ಕೆ ನಾನು ಹೇಳಿದೆ, ಈ ವಿಚಾರದಲ್ಲಿ ನಿಮಗೆ ಸರ್ಟಿಫಿಕೇಟ್ ಬೇಕಾಗಿದ್ದರೆ ಶಂಕರಲಿಂಗೇಗೌಡರು ಒಬ್ಬರು ಮಾತ್ರ ಕೊಡುತ್ತಾರೆ. ಅವರು ಆಧುನಿಕ ಬಸವಣ್ಣನವರು ಎಂದು ಹೇಳಿದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, "ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು, ನುಡಿದರೆ ಸ್ಪಟಿಕದ ಸಲಾಕೆಯಂತಿರಬೇಕು ನುಡಿದರೆ ಲಿಂಗಮೆಚ್ಚಿ ಹೌದೌದು ಎನ್ನಬೇಕು, ನುಡಿಯೊಳಗೆ ನಡೆಯದಿದ್ದರೆ ಕೂಡಲಸಂಗಮದೇವನೆಂತು ಮೆಚ್ಚುವನಯ್ಯ "ಇದನ್ನು ಅಳವಡಿಸಿಕೊಳ್ಳಲಿ ಮಾನ್ಯ ಸಹಕಾರ ಸಚಿವರು.

ಅಧ್ಯಕ್ಷರು : ಇಷ್ಟು ಮಾತನಾಡುವುದಕ್ಕೆ ಪ್ರೇರಣೆಯೇನು ಗೊತ್ತೇನು, ನಿನ್ನೆ ಹಗಲು ರಾತ್ರಿ ಎರಡು ಹೊತ್ತು ಕೋಳಿ ತಿಂದಿದ್ದಾರೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಅದನ್ನು ಅವರು ಅಳವಡಿಸಿಕೊಂಡಿದ್ದರೆ ಅವರಿಗೆ ಬಿರುದು ಕೊಡುತ್ತೇನೆ.

+ಶ್ರೀ ಎಸ್.ಎಚ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಸಹಕಾರಿ ಕ್ಷೇತ್ರದಲ್ಲಿ ಮಾಡಿದಂತಹ ಸೇವೆ ಮತ್ತು ಅನುಭವ ಹಿನ್ನೆಲೆಯಲ್ಲಿ ಇದು ಈ ರೀತಿಯಲ್ಲಿರಬಾರದು

ಎಂದು ನಾನು ಅಧಿಕಾರದಲ್ಲಿರುವುದಕ್ಕೆ ಪೂರ್ವದಲ್ಲಿ ವಿರೋಧಪಕ್ಷದಲ್ಲಿದ್ದಾಗ ನಾನು ಇಲ್ಲಿ ಈ ಸದನದಲ್ಲಿ ಕೂತಿರಲಿಕ್ಕೆ ಇಲ್ಲಿ. ಹೊರಗೆ ವಿರೋಧಪಕ್ಷದಲ್ಲಿದ್ದಾಗ ಸರ್ಕಾರ ಸಹಕಾರಸಂಘದ ಬಗ್ಗೆ ಇರುವ ಹಸ್ತಕ್ಷೇಪ ಇದು ಇರಬಾರದು ಸಹಕಾರಿ ಕ್ಷೇತ್ರ ಮುಕ್ತವಾಗಿ ನಡೆಯಬೇಕು ಎಂದು ಆಸೆ ಇದ್ದವು. ಸರ್ಕಾರದ ಹಸ್ತಕ್ಷೇಪ ಇರಬಾರದೆಂದು ವಾರ್ನ್ ಮಾಡಿದವರ ಪೈಕಿ ನಾನೂ ಒಬ್ಬ. ಸುದೈವದಿಂದ ರಾಜ್ಯದ ಜನತೆಯ ಆಶೀರ್ವಾದದಿಂದ ನಾನು ಸಹಕಾರ ಸಚಿವನಾದೆ. ಬಹುಶಃ ಬಹಳ ಸಂತೋಷದಿಂದ ಬಹಳ ಹೆಮ್ಮೆಯಿಂದ ಈ ಮಾತನ್ನು ಹೇಳುತ್ತೇನೆ. ನಾನು ಮಂತ್ರಿಯಾಗುತ್ತೇನೆಂದು ಬಯಸಿರಲಿಲ್ಲ. ಪ್ರಮಾಣವಚನ ಸ್ವೀಕಾರ ಮಾಡುವುದಕ್ಕೆ ಹೋಗುವ ಮುನ್ನ ನನಗೆ ಮಂತ್ರಿಯಾಗುತ್ತೇನೆಂದು ಗುರುತು ಇರಲಿಲ್ಲ. ನಾನು ರಾಜಭವನದಲ್ಲಿ ಕೆಳಗೆ ಕೂಡಲಿಕ್ಕೆ ಹೋಗುತ್ತಿದ್ದೆ. ನಮ್ಮ ಮಿತ್ರರಾದ ಸಿಂಧ್ಯಾರವರು ಹೊರಟಿದ್ದರು. ಅವರು ಅವರನ್ನು ಕರೆಯಿರಿ ಅಲ್ಲಿ ಹೋಗುತ್ತಾರೆ ಅವರು ಸಹಕಾರ ಮಂತ್ರಿಗಳು ಅಂದರು. ನನಗೆ ಆಗಲೇ ಗೊತ್ತಾಗಿದ್ದು. ಆಗ ನನಗೆ ಒಂದು ರೀತಿಯಿಂದ ನಾನು ಸಹಕಾರಿ ಕ್ಷೇತ್ರದಲ್ಲಿ ದುಡಿದಿದ್ದಕ್ಕೆ ಪ್ರತಿಫಲ ಇವತ್ತು ನನಗೆ ತಲುಪಿದೆ ಎಂದು ಒಂದು ರೀತಿ ಸಂತೋಷ ಮತ್ತು ಆನಂದ ಕೂಡ ಆಯಿತು. ಈವೊಂದು ಕ್ಷೇತ್ರದಲ್ಲಿ ನಾನು ಹೊರಗೆ ಇದ್ದಾಗ ಏನು ಕಹಿ ಅನುಭವ ಏನಿತ್ತು ನಾನು ವಿರೋಷಪಕ್ಷದಲ್ಲಿದ್ದಾಗ ಆವೊಂದು ಕಹಿ ಅನುಭವದ ಹಿನ್ನೆಲೆಯಲ್ಲಿ ಅದನ್ನೆಲ್ಲಾ ಅಳವಡಿಸಿಕೊಂಡು ಕಳೆದ ಮೂರು ವರ್ಷಗಳಿಂದ ಈ ದಿಸೆಯಲ್ಲಿ ನಾನು ಪ್ರಯತ್ನ ಮಾಡಿದೆ. ರಾಷ್ಟ್ರದ ಮತ್ತು ರಾಜ್ಯದ ಹಿರಿಯ ಸಹಕಾರಿಗಳನ್ನು ಕೇಳಿಕೊಂಡು ಮಾಡಿದ್ದೇನೆ. ನಾನೇ ಸ್ವತಂತ್ರವಾಗಿ ಏನನ್ನೂ ಮಾಡಲಿಲ್ಲ. ನಮ್ಮ ಇಲಾಖೆಯ ಹಿರಿಯ ಅಧಿಕಾರಿಗಳನ್ನೆಲ್ಲಾ ಕೂರಿಸಿಕೊಂಡು ಎಲ್ಲರ ಅನುಭವವನ್ನು ಕ್ರೋಢೀಕರಿಸಿ ನಾವು ಸ್ವತಂತ್ರವಾಗಿ ನಿರ್ವಹಿಸಬೇಕೆನ್ನುವ ದೃಷ್ಟಿಯಿಂದ ಇದನ್ನು ನಾನು ತಂದಿದ್ದೇನೆ. ಬಹುಶಃ ಇದರ ಬಗ್ಗೆ ವ್ಯಾಪಕವಾಗಿ ವಿರೋಧ ಬಂದಿರುವುದು ನನಗನ್ನಿಸುತ್ತದೆ ಸೆಕ್ಷನ್ 22(ಎ) ಬಗ್ಗೆ ಇದರ ಬಗ್ಗೆ ಬಹಳ ತಪ್ಪು ಕಲ್ಪನೆ ಬಂದಿದೆ. ಇದನ್ನು ನಾನು ಒಬ್ಬನೇ ಮಾಡಲಿಲ್ಲ. ನಮ್ಮ ಹಿರಿಯ ಸಹಕಾರಿಗಳ ನಮ್ಮ ಕಾಯಿದೆ ಸಚಿವರಾದ ಮಾನ್ಯ ನಾಣಯ್ಯನವರು ಜೊತೆಗೆ ಹಿರಿಯ ಸಹಕಾರಿಗಳ ಸಲಹೆ ಪಡೆಯಲಾಗಿದೆ. ಇದರೊಳಗೆ ಎರಡೂ ಕೂಡಿಸಿಲ್ಲ. ಬಹಳ ಜನರು ಹೇಳುತ್ತಾರೆ ಇವೆರಡೂ ಕೂಡಿಸಿಬಿಟ್ಟಿದ್ದಾರೆಂದು. ಮೊದಲು ಡೆಪ್ಯೂಟಿ ರಿಜಿಸ್ಟಾರ್ ಅವರೇ, ಮತ್ತೆ ಆಡಿಟ್ ಮಾಡುವವರು ಅವರೇ ಇದ್ದರು. ಆವೊತ್ತು ಆ ಕಾಲ ಒಂದಿತ್ತು. ಆ ದೃಷ್ಟಿಯಿಂದ ಅವರು ಒಬ್ಬರೇ ಇರುವುದರಿಂದ ಅವರು ಹೇಳುವುದು ಸರಿ. ಆದರೆ ಇವತ್ತು ಏನಾಗಿದೆ ಅಂದರೆ ನಾವು ಸಪರೇಟ್ ಇಟ್ಟಿದ್ದೇವೆ. ಅವರನ್ನು ಹೆಡ್ ಮಾಡಿದ್ದೇವೆ. ರಿಜಿಸ್ಟಾರ್ ಕೆಲಸ ಮಾಡಬೇಕಾಗುತ್ತದೆ. ಆ ಕಡೆ ಡೈರೆಕ್ಟರ್ ಕೆಲಸ ಮಾಡಿ ಇವತ್ತು ರಿಜಿಸ್ಟಾರ್ ಕೆಲಸ ಮಾಡುತ್ತಾರೆ. ಅವರೇ ಹೋಗಿ ಯಾವುದೋ ಒಂದು ಸೊಸೈಟಿಯಲ್ಲಿ ಕೆಲಸ ಮಾಡುವುದಕ್ಕೆ ಹೋಗುವುದಿಲ್ಲ. ರಿಜಿಸ್ಟಾರ್ ಹುದ್ದೆಯನ್ನು ಮೇಲ್ದರ್ಜೆಗೇರಿಸಿದ್ದೇವೆ. ಈಗ ಸಪರೇಟ್ ಇಟ್ಟಿರುವುದರಿಂದ ಮಾನ್ಯ ಮಾಧುಸ್ವಾಮಿಯವರು ಇಲ್ಲಿ ಮಾತನಾಡುವ ಮುನ್ನ ಹಾರ್ಟಿಕಲ್ಚರ್ ಫೆಡರೇಷನ್ ಇದೆ ಅಲ್ಲಿ 10 ವರ್ಷಗಳಾದರೂ ವರ್ಷಗಳಾದರೂ ಕೂಡ ಆಡಿಟ್ ಆಗಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಒಂದು ಕಡೆ ಅಡ್ಮಿನಿಸ್ಟ್ರೇಟಿವ್ ಸೆಕ್ಷನ್ ಇನ್ನೊಂದು ಕಡೆ ಆಡಿಟ್ ಸೆಕ್ಷನ್ ಹೀಗೆ ಒಬ್ಬರಿಗೊಬ್ಬರಿಗೆ ಸಂಬಂಧವಿಲ್ಲದ ಹಾಗೆ ನಡೆಯುತ್ತಿತ್ತು. ಆ ಕಾರಣದಿಂದ ಇವತ್ತು ರೈತರೊಬ್ಬರು ಮೇಲಿರುವುದರಿಂದ,

ಖಾಯಂ ಆಗಿ ಅವರೇ ಉಳಿಯುವುದಿಲ್ಲ. ಇವತ್ತು ಕಾರ್ಯದರ್ಶಿಯವರು ಇದ್ದಾರೆ ಅವರು ಎಲ್ಲಾ ಡಿಪಾರ್ಟಮೆಂಟ್‌ಗಳನ್ನು ನೋಡುತ್ತಾರೆ. ಆ ಡಿಪಾರ್ಟ್‌ಮೆಂಟ್‌ನಲ್ಲಿ ಏನಾಗಬೇಕು ಅದನ್ನು ನೋಡುತ್ತಾರೆ. ರೈತರು ಯಾವುದೇ ಸೊಸೈಟಿಗೆ ಹೋದರೂ ಅವರು ಏನು ಮಾಡಬೇಕು ಅದನ್ನು ಮಾಡುತ್ತಾರೆ. ಹಾಗೆ ಆಡಳಿತದೃಷ್ಟಿಯಿಂದ ಒಬ್ಬ ರೈತರು ಇರುವುದರಿಂದ ಎರಡೂ ವಿಂಗ್‌ಗಳು ಅವರ ಕೈಯಲ್ಲಿರುವುದರಿಂದ ಎರಡೂ ಕೂಡ ಅವರು ನೋಡಬಹುದು ಎನ್ನುವ ದೃಷ್ಟಿಯಿಂದ ಮಾಡಿದ್ದೇವೆ ವಿನಹ ಬೇರೆ ಯಾವ ದೃಷ್ಟಿಯಿಂದಲ್ಲ. ಬಹಳ ಜನ ಇದನ್ನು ಸ್ವಾಗತ ಮಾಡಿದ್ದಾರೆ. ಚಾರ್ಟರ್ಡ್ ಅಕೌಂಟೆಂಟ್ ಕೊಡುವ ವ್ಯವಸ್ಥೆ ಮಾಡುತ್ತೇವೆ. ತಮಗೆಲ್ಲಾ ಗುರುತು ಇದೆ ಪ್ರತಿಯೊಂದನ್ನೂ ಆಡಿಟ್ ಮಾಡಿರುವುದಿಲ್ಲ. ಇವತ್ತಿನ ಪರಿಸ್ಥಿತಿ ಏನಿದೆ ಸುಮ್ಮನೆ ಜನರಲ್ ಬಾಡಿ ಮಾಡುವುದು ಹೋದವರ್ಷದ್ದು ಈ ವರ್ಷದ್ದು ಅದರಲ್ಲಿ ಅಕೌಂಟ್ಸ್ ಬರಬೇಕು. ಆವೊಂದು ಹಿನ್ನೆಲೆಯಲ್ಲಿ ಕೆಲವು ಚಾರ್ಟರ್ಡ್ ಅಕೌಂಟೆಂಟ್‌ಗೆ ಬಿಟ್ಟುಕೊಡುತ್ತೇವೆ. ನಾವೇನು ಮಾಡಲಿಕ್ಕೆ ಸಾಧ್ಯವಿದೆ ಅಷ್ಟು ಮಾತ್ರ ನಾವು ಇಟ್ಟುಕೊಂಡು, ಉಳಿದದ್ದು ಸಪರೇಟಾಗಿ ಇಟ್ಟುಕೊಂಡು ಚಾರ್ಟರ್ಡ್ ಅಕೌಂಟೆಂಟ್‌ಗೆ ಕೊಡುತ್ತೇವೆಂದು ನಾನು ಸದನದಲ್ಲಿ ಹೇಳಿದ್ದೇನೆ. ಅದನ್ನು ಮಾಡುತ್ತೇವೆ ಎನ್ನುವ ಮಾತನ್ನು ತಮ್ಮ ಮುಂದೆ ಹೇಳುತ್ತೇನೆ. ತಮಗೆ ಈವೊಂದು ಸಂದರ್ಭದಲ್ಲಿ ತಪ್ಪು ಕಲ್ಪನೆಯಾಗಿದೆ. ಇದೇನು ಇವೆರಡೂ ಕೂಡಿಸಿಬಿಟ್ಟರು ಎಂದು ನಾವು ಕೂಡಿಸಿಲ್ಲ ಸಪರೇಟಾಗಿ ಉಳಿಯುತ್ತವೆ. ಮುಂದೆ ಅಲ್ಲಿ ಅಡಿಷನಲ್ ಡೈರೆಕ್ಟರ್ ಹುದ್ದೆಯನ್ನು ಅಪ್‌ಗ್ರೇಡ್ ಮಾಡುತ್ತೇವೆ. ಅವರಿಗೆ ಮತ್ತೊಂದು ಹುದ್ದೆ ಸಿಗುತ್ತದೆ. ಸೀನಿಯರ್ ಐಎಎಸ್ ಆಫೀಸರ್ ಅಲ್ಲಿರುವುದರಿಂದ, ನಮ್ಮ ಡಿಪಾರ್ಟ್‌ಮೆಂಟ್‌ನಿಂದ ಹೋದವರನ್ನು ಅಲ್ಲಿ ಹಾಕುವುದಿಲ್ಲ. ಐಎಎಸ್ ಅಧಿಕಾರಿಗಳನ್ನು ಹಾಕುತ್ತೇನೆ. ಅಲ್ಲಿ ಅವರು ರಿಜಿಸ್ಟ್ರಾರ್ ಆಗುತ್ತಾರೆ. ತಾವು ಹೇಳಿದಹಾಗೆ ಐಎಎಸ್ ಅಧಿಕಾರಿಗಳು ಎರಡು ಮೂರು ವರ್ಷಗಳು ಅಲ್ಲಿರುತ್ತಾರೆ ಆಮೇಲೆ ಬೇರೆ ಡಿಪಾರ್ಟ್‌ಮೆಂಟ್‌ಗೆ ಹೋಗುತ್ತಾರೆ. ಅದನ್ನು ಬೇರೆ ದೃಷ್ಟಿಯಿಂದ ನೋಡಬೇಕು. ಆ ಕಾರಣದಿಂದ ನನ್ನ ಮಿತ್ರರ ಜೊತೆ ಚರ್ಚೆಮಾಡಿ, ನಮ್ಮ ಅನುಭವದ ಆಧಾರದ ಮೇಲೆ ಅದನ್ನು ಸಪರೇಟ್ ಮಾಡಿದರೆ, ಒಂದೇ ಒಂದನ್ನು ಬೇರೆ ಬೇರೆ ಮಾಡಿದರೆ ಏನೋ ಒಂದು ತಪ್ಪು ಕಲ್ಪನೆಯಿಂದ ಅರ್ಥಮಾಡಿಕೊಂಡು ನಾವು ಅಧಿಕಾರದಿಂದ ಹೊರಗೆ ಇದ್ದಾಗ ಅದು ತಪ್ಪೆಂದು ಮಾತನಾಡುತ್ತಿದ್ದೆವು, ಆವೊಂದು ಹಿನ್ನೆಲೆಯಲ್ಲಿ ಕೂಡ ಇದನ್ನು ತಂದಿದ್ದೇವೆ ಎನ್ನುವ ಮಾತನ್ನು ಹೇಳುತ್ತೇವೆ. ಸೆಕ್ಷನ್ 29(ಬಿ) ಬಗ್ಗೆ ಮಾನ್ಯ ಮಿತ್ರರಾದ ಡಿ.ಆರ್. ಪಾಟೀಲ್‌ರವರು ಹೇಳಿದರು. ತಮಗೆ ಗೊತ್ತಿದೆ ಸೆಕ್ಷನ್ 29 (ಬಿ) ದುರುಪಯೋಗ ಎಷ್ಟಾಯಿತು ಎನ್ನುವುದು. ಇವತ್ತು ಸಹಕಾರ ಕ್ಷೇತ್ರ ಮುಕ್ತವಾಗಿ ನಡೆಯಬೇಕೆಂದು ಹೇಳುತ್ತೇವೆ. ನಾಲ್ಕು ಮಂದಿ ತಪ್ಪು ಮಾಡುತ್ತಾರೆ, ಹಾಗೆ ಮಾಡಿದರೆ ಅವು ಸ್ವತಂತ್ರವಾಗಿ ಉಳಿದುಕೊಳ್ಳುತ್ತವೆಯೆ? ಎಷ್ಟೋ ಜನ ಪ್ರಾಮಾಣಿಕ ಸಹಕಾರಿಗಳು ಕಟ್ಟಿರುವಂತಹ ಸಂಸ್ಥೆಗಳು ಹಾಳಾಗುತ್ತಿವೆ. ಅವರು ಬಿಟ್ಟುಹೋದ ಮೇಲೆ ಯಾರೋ ಬಂದು ಏನೋ ಮಾಡಿ ಇವತ್ತು ಹಾಳಾದಂತಹ ಉದಾಹರಣೆಗಳಿವೆ. ಅವುಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ಇವತ್ತಿನ ಪರಿಸ್ಥಿತಿಯಲ್ಲಿ ಆಗುತ್ತಿಲ್ಲ. ಸಹಕಾರಿ ಸಂಸ್ಥೆಗಳು ತಮ್ಮ ಕಾರ್ಯಕ್ರಮಗಳನ್ನು ಸ್ವತಂತ್ರವಾಗಿ ನಿರ್ವಹಿಸಬೇಕು ಸರ್ಕಾರದ್ದು ಏನೂ ಹಸ್ತಕ್ಷೇಪವಿರಬಾರದು. ಜನರಲ್ ಬಾಡಿ ಯಾವಾಗ ಬೇಕೋ ಆಗ ಬರಬೇಕೆನ್ನುವ ಮಾತನ್ನು

ಹೇಳುತ್ತಾರೆ. ನಾನು ಕೇಳುತ್ತೇನೆ, ನಾನು ಒಬ್ಬ ಮಂತ್ರಿಯಾಗಿದ್ದೇನೆ. ಸದಸ್ಯನಾಗಿದ್ದೇನೆ. ನಾನು ಆರಿಸಿ ಬಂದರೆ ಎಷ್ಟು ವರ್ಷ ಮಂತ್ರಿಯಾಗಿರಬೇಕು, ಎಷ್ಟು ವರ್ಷ ಶಾಸಕನಾಗಿರಬೇಕು? ಆದರೆ ಒಬ್ಬ ಸಹಕಾರಿಗೆ ನೀನು ಇಷ್ಟು ವರ್ಷ ಇರಪ್ಪ ಎಂದರೆ ಅದು ಸಂವಿಧಾನಾತ್ಮಕವಾಗಿ ಸರಿ ಅಲ್ಲವೆಂದು ನನ್ನ ವಾದ. ಈ ಕಾರಣದಿಂದ ನಾನು ಅಧಿಕಾರಿಗಳಿಗೆ ಹೇಳಿದೆ, ಒಳ್ಳೆಯ ರೀತಿಯಿಂದ ಕೆಲಸ ಮಾಡದೇ ಇದ್ದರೆ ಜನರಲ್ ಬಾಡಿಯಿಂದ ಕಿತ್ತುಹಾಕುತ್ತಾರೆ. ಆದ್ದರಿಂದ ಜನರಲ್ ಬಾಡಿಗೆ ಅಧಿಕಾರವನ್ನು ಇಟ್ಟಿದ್ದೇವೆ. ಈ ದೃಷ್ಟಿಯಿಂದ ಆ ಸೆಕ್ಷನ್ ಕೂಡ ಇವತ್ತು ತೆಗೆದಿದ್ದೇನೆ. ಇನ್ನು ಇದರ ಬಗ್ಗೆ ಕೆಲವರು ಮಾತನಾಡಲಿಲ್ಲ. ಸೆಕ್ಷನ್ 39 ಎಂದು ಒಂದು ಇತ್ತು. ಸನ್ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ, ತಾವು ಅದನ್ನು ತರಿಸಿ ಒಂದು ದಿವಸ ಓದಿದ್ದೀರಿ. ಇದನ್ನು ಕಟ್ಟಲಿಕ್ಕೆ ಒಳ್ಳೆಯ ಸಹಕಾರಿಗಳೇ ಬರುತ್ತಿರಲಿಲ್ಲ. ನಾನೂ ಮಾಡಿದ್ದೇನೆ, ಮಾಡಿಲ್ಲ ಎಂದು ಹೇಳುವುದಿಲ್ಲ. ಇಲ್ಲಿ ಸಾಕಷ್ಟು ದುರುಪಯೋಗವಾಗಿದೆ. ನಾನು ಮನಸ್ಸಿಗೆ ಬಂದು ಮಾಡಿದ್ದೇನೆ ಮತ್ತು ಕೆಲವು ಮನಸ್ಸಿಲ್ಲದೆ ಮಾಡಿದ್ದೇನೆ. ಎಷ್ಟೋ ಸಂಘಗಳು ಉತ್ತಮವಾಗಿ ಕೆಲಸ ಮಾಡಿದ್ದರೂ ಕೂಡ ಅವರು ಬೋರ್ಡ್ ಮೀಟಿಂಗ್ ಮುಗಿಸಿ ಮನೆಗೆ ಹೋಗುವುದರೊಳಗೆ ಆಡಳಿತಾಧಿಕಾರಿಗಳು ಅದನ್ನು ತೆಗೆದುಕೊಂಡು ಬಿಡುತ್ತಿದ್ದರು. ಅವರಿಗೆ ಯಾವ ಕಾರಣ ಕೂಡ ಕೊಡುತ್ತಿರಲಿಲ್ಲ. ನಾನು ಒಂದು ಶುಗರ್ ಫ್ಯಾಕ್ಟರಿಯನ್ನು ಕಟ್ಟುವುದಕ್ಕೆ ಹೋದರೆ ನಾನು ಸಹಕಾರ ಮಂತ್ರಿಯಾಗಿದ್ದಾಗ ಕೆಲವರು ಬಂದು ಯಾಕ್ರಿ ಸಹಕಾರ ಕ್ಷೇತ್ರದಲ್ಲಿ ಕೊಡುತ್ತೀರಿ, ಯಾವುದಾದರೂ ಪ್ರೈವೇಟ್‌ನಲ್ಲಿ ಮಾಡಿಸಿಕೊಡಿ, ಇದರಲ್ಲಿ ಯಾಕೆ ತಲೆಕೆಡಿಸಿಕೊಳ್ಳುತ್ತೀರಿ ಎಂದು ಹೇಳಿದರು. ಈ ದೃಷ್ಟಿಯಿಂದ ಅದು ಬಹಳ ಕೆಟ್ಟ ಕಲಮ್ ಇತ್ತು. ಅದನ್ನೂ ಕೂಡ ತೆಗೆದುಹಾಕಿದ್ದೇನೆ. ಇನ್ನು 121 ಇದಕ್ಕೆ ತಾವೆಲ್ಲರೂ ಬಹಳ ಸ್ವಾಗತ ಮಾಡಿದ್ದೀರಿ. ನಿಜವಾಗಿಯೂ ಬಹಳ ದುರುಪಯೋಗವಾಗುತ್ತಿತ್ತು. ಚುನಾವಣೆಗಳನ್ನು ಮುಂದಕ್ಕೆ ಹಾಕುವುದು ಆಗುತ್ತಿತ್ತು. ಆಮೇಲೆ ಚುನಾವಣೆ ಹೇಗೆ ಮುಂದಕ್ಕೆ ಹಾಕುತ್ತಿದ್ದರು ಎಂದರೆ, ನನಗೆ ಎಷ್ಟು ನೋವು ಅನಿಸುತ್ತಿತ್ತು ಎಂದರೆ, ನಾಳೆ ಓಟಿಂಗ್ ಇದ್ದರೆ ಇವತ್ತು ಮುಂದೆ ಹಾಕಿಕಳುಹಿಸುತ್ತಿದ್ದರು. ಅವರದ್ದು ಇಂತಹ ದೊಡ್ಡ ದುರುಪಯೋಗವಾಗುತ್ತಿತ್ತು. ನನಗಂತೂ ಇದರ ಬಗ್ಗೆ ಮೊದಲಿನಿಂದಲೂ ನೋವು ಇತ್ತು. ಅದನ್ನು ಈಗ ತೆಗೆದಿದ್ದೇನೆ. ಇನ್ನು ತಾವು ಹೇಳಿದ ಹಾಗೆ ಕೆಲವು ಸೊಸೈಟಿಗಳದು ಧಫ್ತರ ನಮಗೆ ಸಿಗುತ್ತಿರಲಿಲ್ಲ. ಅವುಗಳು ಸೆಕ್ರೆಟರಿಯ ಬಗಲಿನಲ್ಲೇ ಇರುತ್ತಿದ್ದವು. ಇದು ಎಷ್ಟೋ ಸಲ ನಾವು ನೋಡಿದ್ದೇವೆ. 109ರ ಮೇಲೆ ನಾವು ಕೋರ್ಟಿಗೆ ಹೋಗಿ ಕೇಸ್ ಹಾಕಿದರೆ ನಮಗೆ ಧಫ್ತರ ಸಿಗುತ್ತಿರಲಿಲ್ಲ. ಬೇರೆ ಧಫ್ತರ ಹುಟ್ಟಿಸಲಿಕ್ಕೆ ಆಗುತ್ತಿರಲಿಲ್ಲ. ಈ ಕಾರಣದಿಂದ ಇದರಲ್ಲಿ ಅವಕಾಶ ಮಾಡಿದ್ದೇನೆ. ರಿಸಲ್ಯೂಷನ್ ಆದಮೇಲೆ 15 ದಿವಸಗಳ ಒಳಗೆ ಜಿಲ್ಲಾ ಮಧ್ಯವರ್ತಿ ಬ್ಯಾಂಕಿಗೆ ಕಳುಹಿಸಬೇಕು, ಸಂಬಂಧಪಟ್ಟ ನಮ್ಮ ಡಿಪಾರ್ಟ್‌ಮೆಂಟ್‌ಗೆ ಕಳುಹಿಸುವಂಥ ವ್ಯವಸ್ಥೆ ಮಾಡಿದ್ದೇನೆ. ಅವನು ಕಳುಹಿಸದೇ ಹೋದರೆ ಅವನಿಗೆ ಶಿಕ್ಷೆ ವಿಧಿಸಿದ್ದೇವೆ, ಮೂರು ಸಾವಿರ ದಂಡದ ಶಿಕ್ಷೆ ಇಟ್ಟಿದ್ದೇವೆ. ನಮಗೆ ಮತ್ತೊಂದು ಕಡೆ ಧಫ್ತರ ಹುಟ್ಟಬೇಕು, ಆ ಸೊಸೈಟಿಯ ದಫ್ತರ ಇನ್ನೊಂದು ಕಡೆ ನಮಗೆ ತಯಾರು ಆಗಬೇಕು. ಈ ವ್ಯವಸ್ಥೆಯನ್ನೂ ಕೂಡ ಮೊದಲನೆಯದಾಗಿ ಇವತ್ತು ನಾನು ಮಾಡುತ್ತಿದ್ದೇನೆ. ಇನ್ನು ಕೆಲವನ್ನು ನಾನು ನೆನಪು ಮಾಡಿಕೊಂಡು ಹೇಳಬೇಕು. ಇನ್ನೊಂದು ಮಾನ್ಯ ಮಿತ್ರರಾದ ಸದಾನಂದಗೌಡರು ಹೇಳಿದರು

ಐದುನೂರು ಏನಿತ್ತು ಅದನ್ನು ಒಂದು ಸಾವಿರ, ಎರಡು ಸಾವಿರ ಮಾಡಿ ಎಂದು ಇದು ನಮಗೆ ಗೊತ್ತಿದೆ. ಮಾನ್ಯ ಅಧ್ಯಕ್ಷರೇ, ಒಬ್ಬ ಸದಸ್ಯನದ್ದು ಐದುನೂರು ರೂಪಾಯಿ ಶೇರು ಇರುತ್ತದೆ. ಅವನು ಸಾಯುತ್ತಾನೆ. ಅವನ ಮಕ್ಕಳಿಗೆ ಅದನ್ನು ಕೊಡಬೇಕಾದರೆ, ಶೇರು ಹಣ ಐದುನೂರು ರೂಪಾಯಿ ಇದ್ದರೂ ಅವರು ಕೋರ್ಟಿಗೆ ಹೋಗಬೇಕು. ಕೋರ್ಟಿಗೆ ಹೋಗಿ ಸಕ್ಸೆಷನ್ ಸರ್ಟಿಫಿಕೇಟನ್ನು ತರಬೇಕು. ಅವರೇ ಐದು ನೂರು ರೂಪಾಯಿ ಕೊಡುವ ಹಾಗಿಲ್ಲ. ಈ ಕಾರಣದಿಂದ ಅದನ್ನು ಒಂದು ಲಕ್ಷ ರೂಪಾಯಿಗೆ ಏರಿಸಿದ್ದೇವೆ. ಶೇರು ಕೊಡಲಿಕ್ಕೆ ಒಂದು ಲಕ್ಷ ರೂಪಾಯಿವರೆಗೆ ಕಮಿಟಿಗೆ ಅಧಿಕಾರವನ್ನು ಕೊಟ್ಟಿದ್ದೇನೆ. ನಾವು ಸಹಕಾರಿ ಮೇಲೆ ಅವಿಶ್ವಾಸ ಮಾಡುವುದು ಬೇಡ. ಪ್ರಾಮಾಣಿಕತೆ ಬೇಕಾಗುತ್ತದೆ, ಇಲ್ಲವೆಂದು ನಾನು ಹೇಳುವುದಿಲ್ಲ. ಇಡೀ ಒಂದು ಬೋರ್ಡು ಇಂತಹ ಒಂದು ತೀರ್ಮಾನ ಮಾಡಿ ಏನು ವಾರಸುದಾರ ಇದ್ದಾನೆ, ಅವನಿಗೆ ಕೊಡಿ ಎಂದು ಹೇಳುವುದಕ್ಕೆ ಕೋರ್ಟಿನಿಂದ ತೆಗೆದುಕೊಂಡುಬಾರಪ್ಪ, ಐದು ನೂರು ರೂಪಾಯಿ ಮೇಲೆ ಇದೆ ಎಂದರೆ, ಕೋರ್ಟಿನ ಖರ್ಚೇ ಐದುನೂರು ರೂಪಾಯಿ ಬರುತ್ತದೆ. ಇವತ್ತು ತಮಗೆ ಗೊತ್ತಿದೆ ಕೋರ್ಟಿನಿಂದ ತರಬೇಕು ಎಂದು ಅಡ್ಡಾಡಬೇಕು, ಆ ನೋಟೀಸ್ ತೆಗೆಯಬೇಕು, ಇದನ್ನು ತೆಗೆಯಬೇಕು ಎಂದು ಹೇಳುತ್ತಾರೆ. ಅದಕ್ಕಾಗಿ ಇದನ್ನು ಒಂದು ಲಕ್ಷ ರೂಪಾಯಿವರೆಗೆ ಎಂದು ಮಾಡಿದ್ದೇನೆ. ಅದರ ಮೇಲೆ ಇದ್ದರೆ ಸಕ್ಸೆಷನ್ ಸರ್ಟಿಫಿಕೇಟ್ ಇರಬೇಕು ಎಂದು ಮಾಡಿದ್ದೇವೆಯೇ ವಿನಹ ಬೇರೆ ಏನಿಲ್ಲ. ಇದು ಬಹಳ ಒಳ್ಳೆಯದಿದೆ. ತಾವು ದಯವಿಟ್ಟು ಇದನ್ನು ಸ್ವಾಗತಿಸಬೇಕೆಂದು ಮಾನ್ಯ ಮಿತ್ರರನ್ನು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಆಮೇಲೆ ಇದರಲ್ಲಿ ಕೆಲವು ತಿದ್ದುಪಡಿಗಳ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ಮಾನ್ಯ ಡಿ.ಆರ್. ಪಾಟೀಲ್ ಅವರು ರಿಸರ್ವೇಷನ್ ಬಗ್ಗೆ ಹೇಳಿದ್ದಾರೆ. ಅದನ್ನು ನಾನು ತಂದಿದ್ದೇನೆ. ಅದನ್ನು ನಾನು ಮೂವ್ ಮಾಡುತ್ತೇನೆ, ಈಗಾಗಲೇ ಅದು ತಯಾರಾಗಿದೆ. ಅದನ್ನೂ ಕೂಡ ತಮ್ಮ ಮುಂದೆ ತರುತ್ತೇನೆ. 30-B Directions ಬಗ್ಗೆ ತಾವು ಹೇಳಿದ್ದೀರಿ. ಖಂಡಿತವಾಗಿ ನಾನೇ ಅದನ್ನು ತೆಗೆಯಬೇಕು ಎಂದು ಹೇಳಿದ್ದೆ. ಆದರೆ ಅದು ಹೇಗೋ ಉಳಿದುಕೊಂಡುಬಿಟ್ಟಿದೆ. ನಮ್ಮ ಹಿರಿಯ ಸಹಕಾರಿಗಳು ಅದರ ಬಗ್ಗೆ ಇವತ್ತು ಹೇಳಿದರು. ಖಂಡಿತವಾಗಿಯೂ ಆ 30ನ್ನು ಕೂಡ ನಿಮ್ಮ ಮುಂದೆ ನಾನು ತರುತ್ತೇನೆ.

ಅಧ್ಯಕ್ಷರು : ಎಕ್ಸ್‌ಟೆನ್‌ಷನ್‌ದ್ದು ಶಿವಪ್ಪನವರು ಏನೋ ಹೇಳಿದರಲ್ಲಾ?

ಶ್ರೀ ಎಸ್.ಎಸ್. ಪಾಟೀಲ್ : ಸಭಾಧ್ಯಕ್ಷರೇ, see 30(B) Directions ಎಂದು ಇದೆ, ಅದನ್ನು ತೆಗೆಯುತ್ತೇನೆ. ಅದೇ ರೀತಿಯಿಂದ ಡಿ.ಆರ್. ಪಾಟೀಲರು ನಾಮಿನೇಷನ್ ಬಗ್ಗೆ ಹೇಳಿದರು. ಆಫೀಸ್ ಬೇರರ್ಸ್ ಎಲೆಕ್ಷನ್‌ಗೆ ವೋಟಿಂಗ್ ರೈಟ್ಸ್ ಇಟ್ಟಿಲ್ಲ. ಆಫೀಸ್ ಬೇರರ್ಸ್ ಇದಕ್ಕೆ ಬರುವುದಿಲ್ಲ. ಎಲ್ಲಿ ನಮ್ಮ ಸರ್ಕಾರದ ಶೇರ್ಸ್ ಇರುತ್ತದೆ, ಅಲ್ಲಿ ಮಾತ್ರ ಹಾಕಬಹುದು ಎಂದು ತಿಳಿದುಕೊಂಡು ಮಾಡಿದ್ದೇವೆ. ಅಂದರೆ ಆ ಮೂರರಲ್ಲಿ ನಮ್ಮ ಮಿತ್ರರು ಹೇಳಿದಹಾಗೆ ಅಪೆಕ್ಸ್ ಇನ್‌ಸ್ಟಿಟ್ಯೂಷನ್ ಎನ್ನುವುದು ಏನಿದೆ, ಅವರು ಬೇರೆ ಬೇರೆ ಕಡೆಯಿಂದ ಆರಿಸಿಬರಬೇಕಾಗುತ್ತದೆ. ಆವಾಗ ಹರಿಜನರು ಅಲ್ಲಿ ಬರುವುದಿಲ್ಲ. ಈ ಕಾರಣದಿಂದ ಅಲ್ಲಿಯೂ ಕೂಡ ಅವರಿಗೆ ಅವಕಾಶ ಮಾಡಿಕೊಡಬೇಕೆಂಬ

ದೃಷ್ಟಿಯಿಂದ ವಿಶೇಷವಾಗಿ ಒಂದು ಎಸ್‌ಸಿ/ಎಸ್‌ಟಿ ಹಾಕಬೇಕು, ಮತ್ತು ಒಂದು ಮಹಿಳೆಯನ್ನು ಹಾಕಬೇಕು ಎನ್ನುವ ದೃಷ್ಟಿಯಿಂದ ಆ ಮೂರರಲ್ಲಿ ಈ ವ್ಯವಸ್ಥೆಯನ್ನು ಮಾಡಿದ್ದೇನೆ. ಇನ್ನು ಕೊನೆಯದಾಗಿ ಬಸವರಾಜು ಅವರು ಒಂದು ಮಾತನ್ನು ಹೇಳಿದರು. ಆಫೀಸ್ ಬೇರರ್ಸನ್ನು ಇದರೊಳಗೆ ತನ್ನಿ ಎಂದು ಪಂಚಾಯತ್ ವ್ಯವಸ್ಥೆಯಲ್ಲಿ ತಂದಿದ್ದಾರೆ, ಇಲ್ಲೂ ಕೂಡ ಆ ರೀತಿಯಾಗಿ ಮಾಡಿ ಎಂದು ಹೇಳಿದ್ದಾರೆ. ಪಂಚಾಯತ್ ವ್ಯವಸ್ಥೆ ಬೇರೆ, ಈ ವ್ಯವಸ್ಥೆ ಬೇರೆ. ಇಲ್ಲಿ ಹರಿಜನರಿಗಾಗಿಯೇ ಸಂಘ ಕಟ್ಟಿಕೊಡುತ್ತೇವೆ. ಗಿರಿಜನರಿಗಾಗಿಯೇ ಸಂಘ ಕೊಟ್ಟುಬಿಡುತ್ತೇವೆ. ಇಲ್ಲಿ ಬೇರೆ ಬೇರೆ ವ್ಯವಸ್ಥೆ ಇರುವುದರಿಂದ ಆ ಆಫೀಸ್ ಬೇರರ್ಸನ್ನು ತರುವುದಕ್ಕೆ ಅದು ಸಾಧ್ಯವಾಗುವುದಿಲ್ಲ. ಸ್ವತಂತ್ರವಾಗಿ ಅವರು ಕಟ್ಟಿಕೊಳ್ಳಲಿಕ್ಕೆ ಎಸ್‌ಸಿ/ಎಸ್‌ಟಿಯವರಿಗೆ ಎಲ್ಲಾ ಕೊಟ್ಟಿದ್ದೇವೆ. ಇವತ್ತು ಮಾನ್ಯ ಡಿ.ಆರ್. ಪಾಟೀಲರು ಬೇಡಿಕೆಗಳ ಮೇಲೆ ಮಾತನಾಡಿದ್ದಕ್ಕೆ ನಾನು ಸವಿಸ್ತಾರವಾಗಿ ಉತ್ತರ ಕೊಟ್ಟಿದ್ದೇನೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಇಲ್ಲಿ 'ಮ್ಯಾಕ್ಸಿಮಮ್' ಎಂದು ಹಾಕಿದ್ದೇವೆ. ಅದಕ್ಕೆ ಅಮೆಂಡ್‌ಮೆಂಟ್ ಬರುತ್ತದೆ. ಅದನ್ನು ಮಂಡಿಸಿ ಕೆಲವು ಅಮೆಂಡ್‌ಮೆಂಟ್‌ಗಳನ್ನು ನಾನು ತರುತ್ತಿದ್ದೇನೆ. ಇವತ್ತು ಏನಾಗಿದೆ ಎಂದರೆ ಆ ಸೆಕ್ಷನ್ 12(5) ದುರುಪಯೋಗ ಮಾಡಿಕೊಳ್ಳುವುದಕ್ಕೆ ಹಿಂದಿನಂತೆ ಆಗುವುದಿಲ್ಲ. ಮ್ಯಾಕ್ಸಿಮಮ್ 18 ಎಂದು ಇಟ್ಟಿದ್ದೇವೆ. ಕೆಲವು ಸಲ ಏನಾಗುತ್ತದೆ ಎಂದರೆ ನಾವು ಒಂದು ಯೂನಿಫಾರಂ ಆಗಿ ಮಾಡಬೇಕಾಗುತ್ತದೆ. ಈ ಸೊಸೈಟಿಯಲ್ಲಿ 9 ಇಟ್ಟುಕೊಳ್ಳುವುದು, ಆ ಸೊಸೈಟಿಯಲ್ಲಿ 11 ಎಂದು ಇಟ್ಟುಕೊಳ್ಳುವುದು, ಈ ಸೊಸೈಟಿಯಲ್ಲಿ 13 ಇಟ್ಟುಕೊಳ್ಳುವುದು ಆಗುತ್ತಿತ್ತು. ಇದು ಆಗಬಾರದು ಎನ್ನುವ ದೃಷ್ಟಿಯಿಂದ ಅಂತಹವರಿಗೆ ಮಾತ್ರ ಇದನ್ನು ಉಪಯೋಗಿಸಿಕೊಳ್ಳುತ್ತೇವೆಯೇ ಹೊರತು ಬೇರೆ ಯಾವ ದೃಷ್ಟಿಯಿಂದಲೂ ಇದನ್ನು ಉಪಯೋಗಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಈ ಕಾರಣದಿಂದ ಅದನ್ನೂ ಕೂಡ ....

ಶ್ರೀ ಹೆಚ್. ಶಿವಪ್ಪ : ಅದು ಅಬ್ಜೆಕ್ಟೀವ್ ಅಪ್ಲಿಕೇಷನ್ ಆಗುವುದಿಲ್ಲ. ಸೆಕ್ಷನ್ 121 ಯಾವ ರೀತಿ ಬಳಸುತ್ತಿದ್ದಾರೋ, ಇದೇ ರೀತಿ ನಾಳೆ ಬಂದರೆ ಬಳಸಬಹುದು. How can you foresee that the future Governments will not apply? ಆದ್ದರಿಂದ ಸೆಕ್ಷನ್ 12(5)ನ್ನು ತೆಗೆಯಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಸೆಕ್ಷನ್ 12(5) ಏನಿತ್ತು ಎಂದರೆ, ರಿಜಿಸ್ಟ್ರಾರ್ ಅವರೇ ಡೈರೆಕ್ಷನ್ಸ್ ಕೊಟ್ಟು ಹೀಗೆ ಇಡಿ ಎಂದು ಹಾಕುವಂಥ ವ್ಯವಸ್ಥೆ ಅದರಲ್ಲಿ ಇದೆ. ಬಹುಶಃ ನಮ್ಮ ಅನುಭವದಲ್ಲಿ, ಮತ್ತು ಅವರ ಅನುಭವದಲ್ಲಿ ಸೆಕ್ಷನ್ 12(5) ದುರುಪಯೋಗ ಈವರೆಗೆ ಆಗಿಲ್ಲ. ಸೆಕ್ಷನ್ 30(ಬಿ)ಯದ್ದು ದುರುಪಯೋಗವಾಗಿದೆ. ನೀವು ಚಾ ಎಷ್ಟು ಕುಡಿದಿರಿ. ಐದು ರೂಪಾಯಿ ಇದ್ದರೆ, ನಾಲ್ಕು ರೂಪಾಯಿಗೆ ಏಕೆ ಕುಡಿಯಲಿಲ್ಲ ಎಂದು ಕೇಳುತ್ತಿದ್ದ ಉದಾಹರಣೆಗಳು ಇವೆ. ಅದನ್ನು ಖಂಡಿತ ತೆಗೆಯುತ್ತೇನೆ. ಇವತ್ತು ಎಲ್ಲವನ್ನೂ ತೆಗೆಯುವುದಕ್ಕೆ ಆಗುವುದಿಲ್ಲ. ಒಂದು ವೇಳೆ ದುರುಪಯೋಗವಾಯಿತು ಎಂದರೆ, ಅದು ಆಗುತ್ತದೆ ಎಂಬುದು ನಮ್ಮ ಅನುಭವಕ್ಕೆ ಬಂದರೆ ಸರ್ಕಾರದ ಹಸ್ತಕ್ಷೇಪಕ್ಕೆ ಅವಕಾಶ ಇರಬಾರದು ಎಂದು ಆ ರೀತಿ ಮಾಡುವುದಕ್ಕೆ ನಾನು ತಯಾರಿದ್ದೇನೆ. ಇನ್ನು ಕೆಲವರು ಸಲಹೆಗಳನ್ನು ಕೊಟ್ಟಿದ್ದಾರೆ. ನನಗೆ ನೆನಪು ಇಲ್ಲ. ಆಗಾಗಲೇ ಹೇಳಿದ್ದರೆ ಚೆನ್ನಾಗಿ ಇತ್ತು

ಎಂದು ನನಗನ್ನಿಸುತ್ತದೆ. ಇದು ಏನಾಗಿದೆ ಎಂದರೆ ಇದು ಸಹಕಾರ ಕ್ಷೇತ್ರ. ನಾನು ಎಲ್ಲರಿಗಾಗಿ ಮತ್ತು ಎಲ್ಲರೂ ನನಗಾಗಿ. ಇಡೀ ರಾಜ್ಯದ್ದು ವ್ಯವಸ್ಥೆ ನಮ್ಮ ಆಡಳಿತದಲ್ಲಿ ಬರುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದು ನಿಮಿಷ ಈಲ್ಡ್ ಆಗಿ. ಈಗ ಅವರು ಕೇಳಿದ್ದುದು ಪ್ರಸ್ತುತ ಇದೆ. ಐದು ಪರ್ಸೆಂಟ್ ಕಲ್ಯಾಣನಿಧಿ, ಎರಡು ಪರ್ಸೆಂಟ್ ಸಹಕಾರ ನಿಧಿ, ಎಲೆಕ್ಷನ್ ಖರ್ಚಿಗೆ ಸಹಕಾರ ಸಂಘ ಕೊಟ್ಟ ಮೇಲೆ ಅಲ್ಲಿ ಮೆಂಬರ್ಸ್‌ಗೆ ಏನಾದರೂ ಸ್ವಲ್ಪ ಉಳಿಯುತ್ತದೆಯೇ ಒಂದು ಸೊಸೈಟಿಯಲ್ಲಿ ಎಲೆಕ್ಷನ್ ಮಾಡುವುದಕ್ಕೆ 10-12 ಸಾವಿರ ಬೇಕು. ಅಕಸ್ಮಾತ್ ಲಾಭ ಇದ್ದರೆ ಐದು ಪರ್ಸೆಂಟ್ ಕೊಡಲಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಇವತ್ತು ನಾನು ಏನು ಹೇಳುತ್ತೇನೆ ಎಂದರೆ ಬೇರೆ ಎಲ್ಲಾ ಕ್ಷೇತ್ರಗಳಲ್ಲಿ ದುಡಿದವರಿಗೆ ಎಲ್ಲಾ ವ್ಯವಸ್ಥೆ ಇದೆ. ಆದರೆ ನಮ್ಮ ಸಹಕಾರ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ದುಡಿದಂಥ ಒಬ್ಬ ಪ್ರಾಮಾಣಿಕ ಸದಸ್ಯರಿಗೆ ಅವನಿಗೆ ಏನಾದರೂ ಕ್ಯಾನ್ಸರ್ ಆಗಲಿ, ಇನ್ನೊಂದು ಆಗಲಿ ಅಥವಾ ಸಾಮಾನ್ಯ ಒಬ್ಬ ಮೆಂಬರ್ ಮಗ ಫಾರಿನ್‌ಗೆ ಹೋಗಬೇಕಾದರೆ ಅನುಕೂಲತೆ ಇರುವುದಿಲ್ಲ. ಅವರಿಗೆ ಎಲ್ಲಿ ಸಹಾಯ ಸಿಗಬೇಕು? ಈ ದೃಷ್ಟಿಯಿಂದ ಅದೆಲ್ಲಾ ತೆಗೆದು ಒಂದು ನಿಧಿ ಮಾಡಿ ಇಡುತ್ತೇನೆ. ಇವತ್ತು ನಾವು ನಿಧಿ ಸ್ಥಾಪನೆ ಮಾಡಬೇಕಾದ ಅವಶ್ಯಕತೆ ಇದೆ. ಸಹಕಾರ ಕ್ಷೇತ್ರದಲ್ಲಿ ಮೊದಲಿನಿಂದಲೂ ಯಾವುದೇ ನಿಧಿ ನಮ್ಮ ಹತ್ತಿರ ಇರಲಿಲ್ಲ. ಒಂದೈದು ಪರ್ಸೆಂಟ್ ಕೂಡಿಸುವುದರಿಂದ ಸುದೈವದಿಂದ ತಮ್ಮೆಲ್ಲರ ಆಶೀರ್ವಾದದಿಂದ ಇವತ್ತು ನಾನು ಅಧಿಕಾರಕ್ಕೆ ಬಂದಮೇಲೆ ಸುಮಾರು 2 ನೂರು ಕೋಟಿ ರೂಪಾಯಿ ಲಾಭ ಮಾಡುತ್ತಿದ್ದೇವೆ. ಉತ್ತರ ಕನ್ನಡ, ದಕ್ಷಿಣ ಕನ್ನಡದಲ್ಲಿ ಬರೇ ಲಾಭವಾಗುತ್ತದೆ, ಎನ್ನುವುದು ನಿಮ್ಮ ತಲೆಯಲ್ಲಿ ಬಂದು ಬಿಡುತ್ತದೆ. ಕೆಲವರು ನನಗೆ ಹೇಳಿದ್ದಾರೆ. ನಮ್ಮ ಲಾಭವನ್ನು ತೆಗೆದುಕೊಂಡು ಹೋಗುತ್ತೀರಿ, ಲುಕ್ಸಾನಿಗೆ ಅದನ್ನು ಹಾಕುತ್ತೀರಿ ಎಂದು ಹೇಳಿದ್ದಾರೆ. ಇದು ತಮ್ಮ ತಪ್ಪು ಎಂದು ನಾನು ಹೇಳಲಿಲ್ಲ. ತಮ್ಮ ತಲೆಯೊಳಗೆ ಹಾಗೆ ಬಂದಿದೆ. ಇಡೀ ರಾಜ್ಯದ 200 ಕೋಟಿಯಲ್ಲಿ ನಿಮ್ಮದು ಐದು ಆರು ಕೋಟಿ ಇರಬಹುದು. ಹೊರತು .....

ಶ್ರೀ ಡಿ.ವಿ. ಸದಾನಂದ ಗೌಡ : ಅದು ಬೇಡ ಎಂದು ನಾವು ಹೇಳುತ್ತಿಲ್ಲ. ಕಲ್ಯಾಣ ನಿಧಿಯನ್ನು ಅಲ್ಲಲ್ಲಿ ಸ್ಥಾಪನೆ ಮಾಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು.

ಶ್ರೀ ಎಸ್. ಎಸ್. ಪಾಟೀಲ್ : ಇನ್ನೂ ಬೇರೆ ನಿಧಿಗಳನ್ನು ನಾವು ಮಾಡುವವರಿದ್ದೇವೆ. ಮೊನ್ನೆ ಕೆಲವು ಸಹಕಾರಿಗಳು ನನಗೆ ಸಲಹೆ ಮಾಡಿದ್ದರು. ಈ ಕಾರಣದಿಂದ ಇದನ್ನು ಮಾಡಿದ್ದೇವೆ. ಮತ್ತೊಂದು ನಮಗೆ ನಮ್ಮದೇ ಆದ ಒಂದು ಪೇಪರ್ ಇಲ್ಲ, ಪ್ರಚಾರ ಇಲ್ಲ. ಅದಕ್ಕೆ ಒಂದು 'ಸಹಕಾರ' ಎಂಬ ಒಂದು ದಿನಪತ್ರಿಕೆಯನ್ನು ತರಬೇಕೆಂದು ಮಾಡಿದ್ದೇವೆ. ಈ ಮೂಲಕವಾಗಿ ಒಂದು ವ್ಯಾಪಕವಾಗಿ ಪ್ರಚಾರ ಮಾಡುವ ದೃಷ್ಟಿಯಿಂದ ಇದನ್ನೆಲ್ಲಾ ಇದರೊಳಗೆ ಅಳವಡಿಸಿದ್ದೇವೆ. ಇದನ್ನು ಕೇವಲ ಮಂತ್ರಿಗಳ ಕೈಯಲ್ಲಿ ಇಟ್ಟುಕೊಳ್ಳುವುದಿಲ್ಲ. ನಮ್ಮದೇ ಆದ ಎಲೆಕ್ಟೆಡ್ ಬೋರ್ಡ್ ಏನಿದೆ, ಅದರ ರೆಪ್ರಸೆಂಟೇಟಿವ್ಸನ್ನು ರೊಟೇಷನ್ ಮೇಲೆ ತೆಗೆದುಕೊಳ್ಳುತ್ತೇವೆ. ಪ್ರತಿ ಜಿಲ್ಲಾ ಅಧ್ಯಕ್ಷರು, ಅಪೆಕ್ಸ್

ಬ್ಯಾಂಕ್ ಅಧ್ಯಕ್ಷರು, ಲ್ಯಾಂಡ್ ಬ್ಯಾಂಕ್ ಅಧ್ಯಕ್ಷರು, ಆಮೇಲೆ ಕೆಲವು ಆಯ್ದ ಸೊಸೈಟಿಗಳು ರೊಟೇಷನ್ ಮೇಲೆ ಅದರಲ್ಲಿ ಬರಬೇಕೆಂದು ಮಾಡಿದ್ದೇವೆ. ಹಾಗೆ ಎಲ್ಲರೂ ಕುಳಿತು ತೀರ್ಮಾನವಾಗಬೇಕು. ಸುಮ್ಮನೆ ಯಾರಿಗೋ ದುರುಪಯೋಗ ಆಗುವಂಥ ವ್ಯವಸ್ಥೆ ಮಾಡುವುದಲ್ಲ.

ಅಧ್ಯಕ್ಷರು : ಇಲ್ಲಿ ಕೆಲವರು ಬಹಳ ದುಡಿದವರು ಎಲ್ಲಾ ಇದ್ದಾರೆ. ಕೆಲವರೆಲ್ಲಾ ಸಣ್ಣ ವಯಸ್ಸಿನಲ್ಲಿ ತಾಯಿ ಹಾಲು ಬಿಟ್ಟ ತಕ್ಷಣ ಸಹಕಾರಿ ಕ್ಷೇತ್ರಕ್ಕೆ ಸೇರಿದವರು ಇವತ್ತಿನವರೆಗೂ ಅದರಿಂದ ಹೊರಕ್ಕೇ ಬಂದಿಲ್ಲ. ಅವರೆಲ್ಲರ ಫೋಟೋ ಹಾಕಿಸಬೇಕು. ತಾಯಿ ಹಾಲು ಬಿಟ್ಟಿದ್ದೇ ಅವರು ಆಮೇಲೆ ಏನೂ ಆಹಾರವನ್ನು ಮುಟ್ಟಿಲ್ಲ. ಅಲ್ಲಿಂದ ಸಹಕಾರ ಕ್ಷೇತ್ರಕ್ಕೆ ಬಂದುಬಿಟ್ಟಿದ್ದಾರೆ. ಆ ಮಹಾನುಭಾವರದ್ದೆಲ್ಲಾ ಫೋಟೋಗಳನ್ನು ನೀವು 'ಸಹಕಾರ'ದಲ್ಲಿ ಹಾಕಬೇಕು.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ತಾವು ಹೇಳಿದ್ದುದು ಬರೀ ಸಹಕಾರ ಕ್ಷೇತ್ರಕ್ಕೆ ಮಾತ್ರ ಅಲ್ಲ .....

ಅಧ್ಯಕ್ಷರು : ಯಾವಗಲ್‌ರವರೇ ನೀವು ಏನು ಹೇಳುತ್ತೀರಿ?

ಶ್ರೀ ಬಿ.ಆರ್. ಯಾವಗಲ್ : ತಾವು ಹೇಳಿದಹಾಗೆ ಅವರು ತಾಯಿ ಹಾಲು ಬಿಟ್ಟ ತಕ್ಷಣ ಸಹಕಾರ ಕ್ಷೇತ್ರಕ್ಕೆ ಬಂದಿರುತ್ತಾರೆ. ಇದು ಅದಕ್ಕೆ ಮಾತ್ರ ಸೀಮಿತವಾದದ್ದು ಅಲ್ಲ, ರಾಜಕೀಯದಲ್ಲೂ ಸಹಿತ ಇದೆ.

12.50 ಪಿ.ಎಂ

ಶ್ರೀ ಎಸ್.ಎಸ್. ಪಾಟೀಲ್ : ಅಲ್ಲಿ ಕೆಲವು ಪಟ್ಟಭದ್ರಹಿತಾಸಕ್ತಿಗಳು ಇರುತ್ತಾರೆ. ಅವರು ಇನ್ನು ಬಹಳ ವರ್ಷಗಳ ಕಾಲ ಇರುವುದಕ್ಕಾಗುವುದಿಲ್ಲ. ಏಕೆಂದರೆ ಜನರು ಇವತ್ತು ಬುದ್ಧಿವಂತರಾಗಿದ್ದಾರೆ.

ಶ್ರೀ ಹೆಚ್. ಶಿವಪ್ಪ : ಈ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಸಿಕ್ಕದೇ ಇದ್ದಂಥವರಿಗೆ ಈಗ ಆಪಾದನೆ ಮಾಡುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ : ಆ ರೀತಿಯೂ ಹೇಳಬಾರದು. ಕೆಲವರು ಹಿಡಿದುಕೊಂಡು ಕುಳಿತು ಯಾರನ್ನೂ ಬರದಹಾಗೆ ಮಾಡುತ್ತಾರೆ. ಆಮೇಲೆ, ಇಲ್ಲಿ ಅರ್ಜಿ ಕೊಟ್ಟಕೂಡಲೇ ಸದಸ್ಯರಾಗಬೇಕೆಂದು ಮಾಡಿದ್ದೇವೆ ಇದರಲ್ಲಿ ಅವಕಾಶ ಇದೆ. ಮುಂದೆ ಆ ಸೊಸೈಟಿಯವರು ಅಸೋಸಿಯೇಟ್ ಮೆಂಬರ್ ಆಗಬೇಕು. ಈಗ ಉದಾಹರಣೆಗಾಗಿ ತಮಗೆ ಹೇಳುತ್ತೇನೆ. ಸೂಪರ್ ಸೆಷನ್ ಎಂದು ಹೇಳಿದಿರಿ. ನಾವೇನು ಮಾಡಿದ್ದೇವೆಂದರೆ, ಉದಾಹರಣೆಗಾಗಿ ಕೆಲವು ಸಂಘಗಳನ್ನು ತಾವು ಹೇಳುತ್ತೀರಿ. ನಾನು ಬಂದ ಮೇಲೆ, ಮಾರ್ಕೆಟಿಂಗ್ ಫೆಡರೇಷನ್ ಮತ್ತು ಲ್ಯಾಂಡ್ ಬ್ಯಾಂಕ್‌ಗಳಿಗೆ 15 ವರ್ಷ, 16 ವರ್ಷಗಳಿಂದ ಚುನಾವಣೆಯೇ ಆಗಿರಲಿಲ್ಲ. ನಾನು ನೋಡಿದೆ. 121ರ ಮೇಲೆ ಕೆಲವು ಸೆಕ್ಷನ್‌ಗೆ ವಿನಾಯಿತಿ ಕೊಟ್ಟುಬಿಡುತ್ತಿದ್ದರು.

ಶ್ರೀ ಬಿ. ನಂಜಾಮರಿ (ತಿಪಟೂರು) : ನನ್ನ ಕ್ಷೇತ್ರ, ತಿಪಟೂರಿನಲ್ಲಿರತಕ್ಕ ಪಿಎಲ್‌ಡಿ ಬ್ಯಾಂಕಿನಲ್ಲಿ ಕೆಲವೇ ವ್ಯಕ್ತಿಗಳು ಯಾರಿದ್ದಾರೆ, ಅವರು ರಾಜಕೀಯ ಮಾಡಿಕೊಂಡು ಫಾರಂ ತೆಗೆದುಕೊಂಡು ಹೋಗಿ, ಅವರ ಮನೆಯಲ್ಲಿಟ್ಟುಕೊಂಡು, ಆ ರೈತ ಹೋಗಿ ಕೇಳಿದಾಗ, ಆ ಸೆಕ್ರಟರಿ ಹೇಳುತ್ತಾರೆ, ಆ ಲೀಡರ್ ಹತ್ತಿರ ಹೋಗಿ ಫಾರಂ ತೆಗೆದುಕೊಂಡು ಬಂದರೆ ಮಾತ್ರ ನಾನು ಎಂಟ್ರಿಮಾಡಿಕೊಳ್ಳುತ್ತೇನೆ ಇಲ್ಲವಾದರೆ ಇಲ್ಲವೆಂದು ಹೇಳುತ್ತಾರೆ. ಈ ಪರಿಸ್ಥಿತಿ ನಮ್ಮ ತಿಪಟೂರಿನಲ್ಲಿ ನಡೆಯುತ್ತಾ ಇದೆ. ಇದು ಹೋಗಬೇಕು. ನಮ್ಮ ಕ್ಷೇತ್ರದಲ್ಲಿ ಲೋನ್ ಕೊಟ್ಟಿದ್ದಾರೆ, ಯಾವುದೇ ಕೈಗಾರಿಕೆಗಳು ಇಲ್ಲ. ಉದ್ಯಮಿಗಳು ಇಲ್ಲ. ಅಂತಹವರಿಗೆ, ಅವರ ಫಾಲೋಯರ್ಸ್‌ಗಳಿಗೆ ಸಾಲ ಕೊಟ್ಟಿದ್ದಾರೆ. ಅವರನ್ನು ಹೋಗಿ ಪರೀಕ್ಷೆ ಮಾಡಿದರೆ, ಯಾವ ಫ್ಯಾಕ್ಟರಿಗಳೂ ಇರುವುದಿಲ್ಲ. ಮನೆ ಕಟ್ಟುವುದಕ್ಕೆ ಹಣ ಕೊಡುತ್ತಾರೆ ಮನೆ ಇರುವುದಿಲ್ಲ. ಗುಡಿಸಿಲಿನಂಥ ಒಂದು ಮನೆ ಇರುತ್ತದೆ, ಮುರುಕು ಮನೆಗೆ ಹೊಸದಾಗಿ ಕಟ್ಟಲಿ ಎಂದು ಹಣ ಕೊಟ್ಟಿದ್ದಾರೆ. ನಮ್ಮ ಕ್ಷೇತ್ರದಲ್ಲಿ ತಾವು ಪರೀಕ್ಷೆ ಮಾಡಿ, ಬೇಕಾದಷ್ಟು ಕೇಸುಗಳಿಗೆ ಪಿಎಲ್‌ಡಿ ಬ್ಯಾಂಕಿನವರು ಕೊಟ್ಟಿರತಕ್ಕ ಲೋನ್‌ಗಳು ಇವೆ. ಅವರಿಗೆ ಬೇಕಾದವರಿಗೆ ಮಾತ್ರ ಕೊಡುತ್ತಾರೆ, ಬೇರೆಯವರಿಗೆ ಒಂದು ಫಾರಂ ಕೂಡ ಕೊಡುವುದಿಲ್ಲ. ದಯವಿಟ್ಟು ಅದನ್ನು ತಪ್ಪಿಸಬೇಕು. ಬೇರೆ ಪಾರ್ಟಿಯ ವ್ಯಕ್ತಿಗಳು ಎಂದರೆ, ಫಾರಂ ಕೂಡ ಕೊಡುತ್ತಾ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಸಂಬಂಧಪಟ್ಟ ಅಧಿಕಾರಿಗಳಿಗೆ ಒಂದು ಕಾಪಿ ಕೊಟ್ಟರೆ, ಅವನ್ನು ಮೆಂಬರ್ ಆಗಿಬಿಡುತ್ತಾನೆ. ಇನ್ನು ಆಡಳಿತಾಧಿಕಾರಿಗಳನ್ನು ತರುವಂಥ ವ್ಯವಸ್ಥೆ ಮಾಡಿದ್ದೇವೆ. ಸನ್ಮಾನ್ಯ ಅಧ್ಯಕ್ಷರೇ, ತಮಗೂ ಗೊತ್ತಿದೆ. ಕೆಲವು ಸಂಸ್ಥೆಗಳವರು ಚುನಾವಣೆಯನ್ನೇ ಮಾಡುತ್ತಿರಲಿಲ್ಲ. ಏನೋ ಒಂದು ಹೇಳಿಕೊಂಡು ಹೋಗುತ್ತಿದ್ದರು. ನಾನು ನೋಡಿದೆ, ಕೆಲವು ಸಂಸ್ಥೆಗಳವರು 10-15 ರಿಟ್ ಹಾಕಿಬಿಡುತ್ತಿದ್ದರೆ 15 ದಿವಸಕ್ಕೊಂದು, ತಿಂಗಳಿಗೊಂದು ರಿಟ್ ಹಾಕುತ್ತಿದ್ದರು. ನಾನು ಬಂದ ಕೂಡಲೇ ಇವರ ಬೆನ್ನುಹತ್ತಿದ ಮೇಲೆ ನಾಲ್ಕು ಹೋಯಿತು. ಇನ್ನೂ 7 ಇವೆ. ಅಂದರೆ ಈ ರೀತಿಯಾಗಿ ರಿಟ್ ಏಕೆ ತರುತ್ತಿದ್ದರು ಎಂದರೆ, ಹಿಂದಿದ್ದವರೇ ಮುಂದೆ ಹೋಗುತ್ತಿದ್ದರು, ಮುಂದಿನ ಬೋರ್ಡ್ ಬರುವವರೆಗೆ. ಆ ಅವಕಾಶವನ್ನು ಇದರಲ್ಲಿ ತೆಗದಿದ್ದೇನೆ. 5 ವರ್ಷವಾದ ಕೂಡಲೇ ಅವರು ಕಡ್ಡಾಯವಾಗಿ ಚುನಾವಣೆ ಮಾಡಲೇಬೇಕು. ಮಾಡದೇ ಇದ್ದರೆ ಡಿಸ್‌ಕ್ವಾಲಿಫಿಕೇಷನ್, ಅವರು ಸಹಕಾರಿ ಸಂಸ್ಥೆಯಲ್ಲಿ ಇರುವುದಕ್ಕೆ ಬರುವುದಿಲ್ಲ. ಆ ರೀತಿಯಾಗಿ ಮಾಡಿದ್ದೇನೆ. ಅಧಿಕಾರಿ ಯಾರು ಇರುತ್ತಾನೆ, ಅವನಿಗೆ ದಂಡ, ಶಿಕ್ಷೆಯನ್ನು ಇದರಲ್ಲಿ ಇಟ್ಟಿದ್ದೇನೆ. ಅನಂತರ, ಮುಂದುವರಿಯುವುದಿಲ್ಲವೆಂದು ಯಾರೂ ಕೋರ್ಟಿಗೆ ಹೋಗುವುದಿಲ್ಲ. ಆ ವೇಳೆಯಲ್ಲಿ ಆಡಳಿತಾಧಿಕಾರಿ ತಾನಾಗಿಯೇ ಬಂದುಬಿಡುತ್ತಾನೆ. ಆಟೋಮ್ಯಾಟಿಕ್ ಬಂದಹಾಗೆ ತಿಳಿದುಕೊಳ್ಳಬೇಕು ರೈತರು ಬಂದು ಮತ್ತೆ ಕೇಳುವ ಹಾಗೆ ಇಲ್ಲ. ಬಹಳ ಎಂದರೆ ರೈತರು ಇಂತವ ಎಂದು ಹೇಳುವುದಷ್ಟೇ ಉಳಿಯುತ್ತದೆ. ಅವರು ಅವತ್ತೇ ಮನೆಗೆ ಹೋಗಿಬಿಡುತ್ತಾರೆ. ಈ ಕಾರಣದಿಂದ ಯಾರೂ ಮುಂದೆ ಹಾಕುವ ಪ್ರಶ್ನೆಯೇ ಬರುವುದಿಲ್ಲ. ಆದ್ದರಿಂದ, ನಿಗದಿತ ವೇಳೆಗೆ ಇವತ್ತು ಚುನಾವಣೆ ನಡೆಯಲೇಬೇಕು. 121 ಸೆಕ್ಷನ್ ತೆಗೆದು ಬಿಟ್ಟಿದ್ದೇನೆ, ನಮಗೆ ಅದಿಕಾರವೇ ಇಲ್ಲ. ಅಧಿಕಾರಿಗಳು ಈ ಸೆಕ್ಷನ್ 121 ನ್ನು ದುರುಪಯೋಗ ಮಾಡಿಕೊಳ್ಳುತ್ತಾನೆ

ಎನ್ನುವ ದೃಷ್ಟಿಯಿಂದ ಇದನ್ನು ತೆಗೆದಿದ್ದೇನೆ. ಸೆಕ್ಷನ್ 38 ತೆಗೆದಿದ್ದೇನೆ. ಇನ್ನೊಂದು ಸೆಕ್ಷನ್ 14(ಎ) ಎಂದು ಇತ್ತು, ಇದನ್ನು ಸರ್ಕಾರದವರು ಬಹಳ ದುರುಪಯೋಗ ಮಾಡುತ್ತಿದ್ದರು. ಇದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಎರಡು ಸೊಸೈಟಿ ಇದ್ದರೆ, ಒಂದು ಕಾಂಗ್ರೆಸ್‌ದ್ದು ಮತ್ತು ಒಂದು ದಳದ್ದು ಕೂಡಿಸಿ ಹಾಕಿಬಡುವುದು. ಆಮೇಲೆ ಕಾಂಗ್ರೆಸ್‌ನವರು ಬಂದಕೂಡಲೇ, ಇದನ್ನು ತೆಗೆದು, ಅವರು ಮಾಡುವುದು. ಈ ದಂದೆ ನಡೆಯುತ್ತಾ ಇತ್ತು, ಇದು ಯಾರೂ ಅಲ್ಲಗಳೆಯುವಂಥ ಮಾತಲ್ಲ. ಆದ್ದರಿಂದ ಆ ಸೆಕ್ಷನ್ ಕೂಡ ತೆಗೆದಿದ್ದೇನೆ. ಎರಡು ಸಂಘಗಳೂ ಒಪ್ಪಿಕೊಂಡರೆ, ಮಾಡಬಹುದು ಎಂಬುದು ಮೊದಲೇ ಇತ್ತು. ಇವೆಲ್ಲಾ ನಡುವೆ ಕೂಡಿಸಿದ್ದರು. ಈ ಕಾರಣದಿಂದ ಈ ವಿಧೇಯಕವನ್ನು ತಾವೆಲ್ಲರೂ ವ್ಯಾಪಕವಾಗಿ ಸ್ವಾಗತ ಮಾಡಿದ್ದೀರಿ. ತಮ್ಮೆಲ್ಲರಿಗೂ ಇವತ್ತು ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಆಡಳಿತಾಧಿಕಾರಿಗಳು 6 ತಿಂಗಳೊಳಗಾಗಿ ಮೆಂಬರ್ ಮಾಡಿಕೊಳ್ಳಬಾರದೆಂಬ ಮಾತು ಹೇಳಿದಿರಿ. ಇದರ ಬಗ್ಗೆಯೂ ಇದರಲ್ಲಿ ಹಾಕಿದ್ದೇನೆ. ಒಂದು ವರ್ಷದ ಹಿಂದೆ ಅವನು ಮೆಂಬರ್ ಆಗಿರಬೇಕು. 6 ತಿಂಗಳೊಳಗೆ ಮೆಂಬರ್ ಮಾಡಿಕೊಳ್ಳಬೇಡಿ ಎಂದರೆ, ಇವತ್ತು ನೇರವಾಗಿ ಸೂಪರ್‌ಸೀಡ್ ಆಗುತ್ತದೆ. ಜೂನ್‌ನಲ್ಲಿ ರೈತರಿಗೆ ಸಾಲಬೇಕು. ಮೆಂಬರ್ ಆಗದೇ ಅವನಿಗೆ ಸಾಲ ಕೊಡುವುದಿಲ್ಲ. ಅಸೋಸಿಯೇಟ್ ಆಗಿಬಿಡುತ್ತಾನೆ, ಅಷ್ಟೇ ಉಳಿಯುತ್ತದೆ.

SRI. H. SHIVAPPA : He is appointed for a limited purpose. Membership is a policy matter. There are good number decisions of the High Court and Supreme Court.

ಶ್ರೀ ಎಸ್.ಎಸ್. ಪಾಟೀಲ್ : ಅವನಿಗೆ ವೋಟಿಂಗ್ ರೈಟ್ಸ್ ಬರುವುದಿಲ್ಲ. ಅವನು ಒಂದು ವರ್ಷದ ಹಿಂದೆ ಮೆಂಬರ್ ಆಗಿರಬೇಕು.

ಶ್ರೀ ಹೆಚ್. ಶಿವಪ್ಪ : ನೀವು ಸೆಕ್ಷನ್ 12(5) ಉಪಯೋಗ ಮಾಡಿ. ಅಡ್ಮಿನಿಸ್ಟ್ರೇಟರ್ ಎನ್ ರೋಲ್‌ಮೆಂಟ್ ಆಫ್ ಮೆಂಬರ್ಸ್ ಮಾಡುವುದು ಒಂದೇ.

ಶ್ರೀ ಎಸ್.ಎಸ್. ಪಾಟೀಲ್ : ಯಾವ ಸಂದರ್ಭದಲ್ಲಿ ಮೆಂಬರ್ ಮಾಡಿಕೊಳ್ಳಬೇಕೆಂಬುದನ್ನು ತಂದಿದ್ದೇನೆ.

ಶ್ರೀ ಹೆಚ್. ಶಿವಪ್ಪ : ಇರೆಗ್ಯುಲಾರಿಟೀಸ್ ಏನಾಗಿರುತ್ತದೆ, ಫೈನಾನ್‌ಷಿಯಲ್ ಲಾಸಸ್ ಇದ್ದರೆ, ಅದನ್ನು ಮಾಡಬೇಕೇ ವಿನಹ, he cannot interfere in the structural matters.

ಶ್ರೀ ಎಸ್.ಎಸ್. ಪಾಟೀಲ್ : 6 ತಿಂಗಳೊಳಗೆ ಸಾಲವನ್ನು ಆ ರೈತನಿಗೆ ಕೊಡಬೇಕಾಗುತ್ತದೆ.

ಶ್ರೀ ಹೆಚ್. ಶಿವಪ್ಪ : ಸಾಲ ಕೊಡುವುದಕ್ಕೆ ಅಸೋಸಿಯೋಟೆಡ್ ಮೆಂಬರ್ ಶಿಫ್ ಇರುತ್ತದೆ. ನಾಮಿನಲ್ ಮೆಂಬರ್‌ಷಿಪ್ ಇದೆ.

ಅಧ್ಯಕ್ಷರು : ಮಾನ್ಯ ಶಿವಪ್ಪನವರು ಹೇಳುವುದರಲ್ಲಿ ಅರ್ಥ ಇದೆ. ಯಾರು ಆಡಳಿತಾಧಿಕಾರಿ ಇರುತ್ತಾನೆ, ಆತ ಸಂಸ್ಥೆಗೆ ಬರತಕ್ಕಂತಾದ್ದು ಹಿಂದಿನ ಆಡಳಿತ ಮಂಡಳಿಯಲ್ಲಿ ಆಗಿರತಕ್ಕಂಥ ಎಲ್ಲಾ

ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಮಾತ್ರ. ಆತ ಬಂದು ಯದ್ವಾತದ್ವಾ ಮೆಂಬರುಗಳನ್ನು ಸೇರಿಸಿದರೆ, ಆತ ಮತ್ತೆ ಹೊಸದಾಗಿ ಇನ್ನೊಂದು ದ್ರೋಷ ಮಾಡಿ ಹೋದಹಾಗೆ ಆಗುತ್ತದೆ. ಒಂದು ವೇಳೆ ಸಾಲ ತೆಗೆದುಕೊಳ್ಳುವುದಕ್ಕೆ ಬೇಕಾದರೆ, ಬೇರೆ ಕ್ಯಾಟಗರಿ ಆಫ್ ಮೆಂಬರ್ಸನ್ನು ಮಾಡಿಕೊಳ್ಳಲಿ.

ಶ್ರೀ ಎಸ್.ಎಸ್. ಪಾಟೀಲ್ : ಮುಂದಿನ ಅಧಿವೇಶನದಲ್ಲಿ ಅದನ್ನೂ ಕೂಡ ತರುವಂಥ ಪ್ರಯತ್ನ ಮಾಡುತ್ತೇನೆ. ಅದನ್ನೂ ಕೂಡ ನಾನು ಒಪ್ಪಿಕೊಳ್ಳುತ್ತೇನೆ, ಇದರಲ್ಲಿ ಇನ್ನೂ ಕೆಲವು ದೋಷಗಳು ಬರಬಹುದು. ನಾವು ಎಷ್ಟೇ ಮಾಡಿದರೂ ಕೂಡ ನಮ್ಮ ಅನುಭವದಲ್ಲಿ ಏನಾದರೂ ದೋಷಗಳು ಬಂದರೆ ತಿದ್ದೋಣ.

ಶ್ರೀ ಹೆಚ್. ಶಿವಪ್ಪ : ಸಕ್ಕರೆ ಕಾರ್ಖಾನೆ ವಿಚಾರಗಳಲ್ಲಿ ಕೋರ್ಟಿಗೆ ಓಡಾಡಿದ್ದು ಅನುಭವದ ವಿಚಾರ ಇದೆ. ಮತ್ತೆ ಸೆಕ್ಷನ್ 12(5) ಕೂಡ ಅದೇ ಆಗಿದೆ.

ಶ್ರೀ ಎಸ್.ಎಸ್. ಪಾಟೀಲ್ : ಆ ಮಾತು ನಾನು ಒಪ್ಪಿಕೊಳ್ಳುತ್ತೇನೆ. ಬಹುಶಃ ತಾವೇನು ಹೇಳುತ್ತೀರೆಂದರೆ, 6 ತಿಂಗಳಾದ ಮೇಲೆ ಮತ್ತೊಂದು 6 ತಿಂಗಳು ಓಡಾಡಿಸಬಾರದು ಎಂದು ಕೆಲವರ ವಾದ ಬರುತ್ತಿದೆ. ಅದೂ ಕೂಡ ಒಪ್ಪತಕ್ಕಂಥ ಮಾತು. ಆದರೆ, ಕೆಲವು ಸಂದರ್ಭಗಳಲ್ಲಿ, ಆ ವ್ಯವಹಾರಗಳನ್ನೆಲ್ಲಾ ನೋಡಿ, ಮುಗಿಸಿ ಮಾಡುವಂಥ ಅವಕಾಶ ಬರುತ್ತದೆಯೇನೋ ಎಂದು ಬಿಟ್ಟಿದ್ದೆವು. ನಾನೂ ಕೂಡ ಆಗ, ಈ ವಾದ ಮಾಡಿದೆ.

ಅಧ್ಯಕ್ಷರು : ಮಾನ್ಯ ಎಸ್.ಎಸ್. ಪಾಟೀಲರೇ, ನಿಮ್ಮ ವಿವರಣೆಯನ್ನು ಇವರೆಲ್ಲರೂ ಒಪ್ಪಿದ್ದಾರೆ. ಮತ್ತು ಖುಷಿಯಾಗಿದ್ದಾರೆ. ಈಗ ಮತಕ್ಕೆ ಹಾಕಿಬಿಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ಡೈರಕ್ಟರ್ ಆಫ್ ಆಡಿಟ್ ಪೋಸ್ಟನ್ನು ಕಡ್ಡಾಯವಾಗಿ ಮುಂದುವರಿಸಬೇಕು. ಈಗೇನು ಅವರು ಅಡಿಷನಲ್ ಡೈರಕ್ಟರ್ ಪೋಸ್ಟ್ ಮಾಡುತ್ತಿದ್ದಾರೆ, ಅದಕ್ಕೂ ಡೈರೆಕ್ಟರ್ ಪೋಸ್ಟ್ ಗೂ ಏನೂ ವ್ಯತ್ಯಾಸ ಇಲ್ಲ. ರಿಜಿಸ್ಟ್ರಾರ್ ಗೆ ರಿಪೋರ್ಟ್ ಮಾಡುವುದನ್ನು, ಸೆಕ್ರೆಟರಿ, ಕೋ ಆಪರೇಷನ್‌ಗೆ ರಿಪೋರ್ಟ್ ಮಾಡೇ ಮಾಡುತ್ತಾರೆ. ಈಗಿರುವ ಸ್ಥಿತಿಯಲ್ಲಿ ಇದರ ಬದಲಾವಣೆಯಿಂದ ಏನೂ ಪ್ರಯೋಜನವಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಈಗ ಇದನ್ನು ಮಾಡುವುದಕ್ಕಾಗುವುದಿಲ್ಲ. ಅವರು ಮೂರು ವರ್ಷ ಬಂದಕೂಡಲೇ, ಇನ್ನೂ ಎರಡು ವರ್ಷ ಮುಂದೆ ಹೋಗುತ್ತದೆ. ಇದು ಆಗುವುದಿಲ್ಲ. ಇನ್ನು ಮುಂದೆ ಯಾರು ಚುನಾವಣೆ ಮಾಡುತ್ತಾರೆ, ಅವರಿಗಷ್ಟೇ ಇದು ಅನ್ವಯವಾಗುತ್ತದೆ. ಎಲ್ಲಾ ಸದಸ್ಯರೂ ಮಾತನಾಡಿದ್ದಾರೆ. ಅದು ಸರಿ ಆಗುವುದಿಲ್ಲ.

ಅಧ್ಯಕ್ಷರು : ಈಗಾಗಲೇ ಸಚಿವರು ವಿವರಣೆ ಕೊಟ್ಟಿದ್ದಾರೆ. ಸರ್ಕಾರದ ನಿಲುವನ್ನು ಹೇಳಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ : ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಇನ್ನೊಂದು ಕ್ಲಾರಿಫಿಕೇಷನ್ ಮಾಡಬೇಕಾಗುತ್ತದೆ. ಈಗಾಗಲೇ ಹಲವಾರು ಸಹಕಾರಿ ಸಂಸ್ಥೆಗಳವರು ಏನೂ ಮಾಡುತ್ತಿದ್ದಾರೆಂದರೆ, ಅವರು ಷೇರು ಕ್ಯಾಪಿಟಲನ್ನು ಹೆಚ್ಚು ಮಾಡಿದ್ದಾರೆ. 10 ರೂಪಾಯಿ ಇದ್ದುದ್ದನ್ನು

100 ರೂಪಾಯಿ ಮಾಡಿದ್ದಾರೆ. ಚುನಾವಣೆ ಬರುವಂಥ ಸಂದರ್ಭದಲ್ಲಿ ಯಾರು ಆಡಳಿತದಲ್ಲಿ ಇದ್ದರೋ ಅವರು ಯಾವ ಷೇರ್ ಬಾಕಿ ಇತ್ತು, ಅದನ್ನು ಭರ್ತಿ ಮಾಡಲಿಲ್ಲ. 10 ರೂಪಾಯಿ ಇದ್ದುದ್ದನ್ನು 100 ರೂಪಾಯಿ ಮಾಡಿದಾಗ, ಯಾರು ಬಾಕಿ 90 ರೂಪಾಯಿಗಳನ್ನು ಕಟ್ಟಲಿಲ್ಲ ಅಥವಾ 50 ರೂಪಾಯಿ ಮಾಡಿದ್ದರೆ ಬಾಕಿ 40 ರೂಪಾಯಿ ಕಟ್ಟಲಿಲ್ಲ ಅಂತಹವರಿಗೆ ಓಟು ಇಲ್ಲದಂತೆ ಮಾಡುವ ಕೆಲಸ ಕೂಡ ಆಗುತ್ತಿದೆ. ಅಂತಹ ಆಡಳಿಕ, ಅಂತಹ ವ್ಯವಸ್ಥೆ ಆಗುತ್ತದೆ. ಇದರ ಬಗ್ಗೆಯೂ ಕೂಡ ಮಂತ್ರಿಗಳು ಸ್ಪಷ್ಟ ನಿಲುವಿದೆ. ಅದನ್ನು ಇಲ್ಲಿ ಕ್ಲಾರಿಫೈ ಮಾಡಬೇಕೆಂದು ಇಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಈಗಾಗಲೇ ಹಲವಾರು ಹೈಕೋರ್ಟ್ ರೂಲಿಂಗ್ ನೀಡಿರುತ್ತವೆ. ಸುಪ್ರೀಂ ಕೋರ್ಟಿನಲ್ಲಿ ರೂಲಿಂಗ್ ಆಗಿದೆ. ನನಗೂ ಕೂಡ ಕೆಲವು ಜಡ್ಜ್ ಮೆಂಟ್ ಕಳುಹಿಸಿದ್ದಾರೆ. ಒರಿಜಿನಲ್ ಮೆಂಬರ್ ಏನಿರುತ್ತಾನೆ, ಅವನು 10 ರೂಪಾಯಿ ಕಟ್ಟಿಯೇ ಮೆಂಬರ್ ಇರಬಹುದು. ಇವತ್ತು ಅದರ ಷೇರು ವ್ಯಾಲ್ಯು 1000 ರೂಪಾಯಿ ಮಾಡಿದರೂ ಕೂಡ ಅವನು ಉಳಿಯುತ್ತಾನೆ ಅವನ ಮೆಂಬರ್ ಷಿಪ್ ತೆಗೆಯಲಿಕ್ಕೆ ಯಾರಿಗೂ ಆಗುವುದಿಲ್ಲ. ಅವರಿಗೆಲ್ಲಾ ರೈಟ್ಸ್ ಇದೆ ಎಂಬ ವಿಚಾರದಲ್ಲಿ ರೂಲಿಂಗ್ಸ್ ಆಗಿವೆ.

ಅಧ್ಯಕ್ಷರು : ಸಹಕಾರ ಮಂತ್ರಿಗಳ ಉತ್ತರ ಮುಗಿದಿದೆ.

ಶ್ರೀ ಅರಗ ಜ್ಞಾನೇಂದ್ರ : ಆ ಕಲ್ಯಾಣ ನಿಧಿ ಬಗ್ಗೆ ಕ್ಲಾರಿಫೈ ಸರಿ ಆಗಲಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಸನ್ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಕೇಳಿದೆ, ಆದರೆ ಅವರು ಸಮರ್ಥನೆ ಮಾಡುತ್ತಾರೆ. ದಯವಿಟ್ಟು ಸೆಕ್ಷನ್ 2(ಎಎ) ಏನಿದೆ ಅದರ ಪ್ರಕಾರ ರಿಜಿಸ್ಟ್ರಾರ್ ಇನ್‌ಸ್ಪೆಕ್ಷನ್‌ಗೆ ಹೋಗುತ್ತಾರೆ ಎನ್ನುವುದನ್ನು ಬಿಟ್ಟರೆ, ಮುಂಚೆ ಬೇರೆ ಇದ್ದರು. ಮಾನ್ಯ ಶಿವಪ್ಪನವರು ಬಹಳ ಚೆನ್ನಾಗಿ ಹೇಳಿದ್ದಾರೆ. ಜಡ್ಜ್ ಮತ್ತು ಪ್ರಾಸಿಕ್ಯೂಟರ್ ಬೇರೆ ಇರಬೇಕು. ಇಬ್ಬರೂ ಒಂದೇ ಆಗಬಾರದು ಎಂದು.

ಶ್ರೀ ಎಸ್. ಎಸ್. ಪಾಟೀಲ್ : ಇಲ್ಲಿ ಎರಡೂ ಕಡೆ ಜಡ್ಜ್ ಇರುತ್ತಾರೆ. ಹಾಲಿ ಈಗ ಜಡ್ಜ್ ಮತ್ತು ಪ್ರಾಸಿಕ್ಯೂಟರ್ ಇದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್ : ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಯಲ್ಲಿ ನೀವು ಏನೂ ಕೂಡ ಕಾರಣ ಕೊಟ್ಟಿಲ್ಲ. ಆದರೂ ಕೂಡ ನೀವು ಹೇಳುತ್ತಾ ಇದ್ದೀರಿ. ಸಹಕಾರ ಸಂಘಗಳ ರಿಜಿಸ್ಟ್ರಾರ್‌ರವರು ರಾಜ್ಯದ ಸಹಕಾರಿ ಲೆಕ್ಕಪರಿಶೋಧನೆಯ ನಿರ್ದೇಶಕರಾಗಿರತಕ್ಕದ್ದು ಎಂದು.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ನಾವು ಮೂರು ಜನ ನಾಮಿನೇಷನ್ ಬಗ್ಗೆ ಒಂದು ಎಸ್.ಸಿ. ಎಸ್.ಟಿ, ಒಂದು ಮಹಿಳೆ ಹಾಗೂ ಸೆಕ್ಷನ್ 30(ಬಿ)ಗೆ ಡೈರೆಕ್ಷನ್ಸ್ ತಂದಿದ್ದೇವೆ. ಅದೇ ರೀತಿಯಲ್ಲಿ ಸದಸ್ಯರು ಸೂಚಿಸಿದ ರೀತಿಯಲ್ಲಿ ಇನ್ನೂ ಕೆಲವು ತಿದ್ದುಪಡಿಗಳನ್ನು ತಂದಿದ್ದೇವೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"1997ರ ಕರ್ನಾಟಕ ಸಹಕಾರ ಸಂಘ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು :

ಖಂಡ 2ಕ್ಕೆ ತಿದ್ದುಪಡಿ :

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಖಂಡ 2ಕ್ಕೆ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

CLAUSE - 2

"That in clause (al) sought to be inserted in section 2 by sub-clause (1) the words" to the extent of fifty per cent of the total share capital or not less than ten lakhs rupees from the Government" shall be omitted".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"That in clause (al) sought to be inserted in section 2 by sub-clause (1) the words "to the extent of fifty percent of the total share capital or not less than ten lakhs rupees from the Government" shall be omitted".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ :

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 3 ರಿಂದ 21

ಅಧ್ಯಕ್ಷರು : ಪ್ರಸ್ತಾವ ಏನೆಂದರೆ :

"ಖಂಡ 3 ರಿಂದ 21, ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. ಹಾಗೂ ಖಂಡ 3 ರಿಂದ 21 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 22ಕ್ಕೆ ತಿದ್ದುಪಡಿ :

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಖಂಡ 22ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

CLAUSE - 22

"That in sub-section (2) of section 28A, sought to be substituted :

(1) for clauses (i) and (ii), the following shall be substituted, namely:

"(1) in the case of a primary society or a secondary society whose area of operation extends to, -

(a) a part of a taluk, nine members;

(b) whole taluk, eleven members;

(c) beyond a taluk but not beyond a district, thirteen members;

(d) beyond a district, eighteen members;

(2) clauses (iii) and (iv) shall b e renumbered as clauses (ii) and (iii)."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ :

``That in sub-section (2) of section 28A, sought to be substituted :-

(1) for clauses (i) and (ii), the following shall be substituted namely,-

"(i) in the case of a primary society or a secondary society whose area of operation extends to,-

(a) a part of a taluk, nine members;

(b) whole taluk, eleven members;

(c) beyond a taluk but not beyond a district; thirteen members;

(d) beyond a district, eighteen members,

(2) Clauses (iii) and (iv) shall be renumbered as clauses (ii) and (iii).

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 22 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

“ಖಂಡ 22, ತಿದ್ದುಪಡಿಯಾದ ರೀತಿಯಲ್ಲಿ, ವಿಧೇಯಕದ ಅಂಗವಾಗಿರುತ್ತದೆ”.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 22 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 23

ಅಧ್ಯಕ್ಷರು : ಪ್ರಸ್ತಾವ ಏನೆಂದರೆ -

"ಖಂಡ 23 ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 23 ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 24ಕ್ಕೆ ತಿದ್ದುಪಡಿ:-

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಖಂಡ 24ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

"That in section 29 sought to be substituted, in sub-section(1), the words "of whom one shall be a person belonging to the Scheduled Castes or Scheduled Tribes and one shall be a woman, "shall be inserted at the end."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"That in section 29 sought to be substituted, in sub-section (1), the words" of whom one shall be a person belonging to the Scheduled Castes or Scheduled Tribes and one shall be a woman; "shall be inserted at the end".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 24 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಖಂಡ 24 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 24 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 25 ರಿಂದ 28

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಖಂಡ 25 ರಿಂದ 28 ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 25 ರಿಂದ 28 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 29ಕ್ಕೆ ತಿದ್ದುಪಡಿ

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಖಂಡ 29ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

"ಸದರಿ ವಿಧೇಯಕದ 29ನೇ ಖಂಡದ ಮೂಲಕ ಸೇರಿಸುವ 29 ಜಿ ಪ್ರಕರಣದ (1) ನೇ ಉಪ ಪ್ರಕರಣದ ಪರಂತುಕದಲ್ಲಿನ ಬಾಬು (11)ಕ್ಕೆ ಈ ಮುಂದಿನದನ್ನು ಪ್ರತಿ ಯೋಜಿಸತಕ್ಕದ್ದು, ಎಂದರೆ

"ಇತರ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ, ಅಂಥ ಸಂಘಗಳು, ನೇಮಕಾತಿಯನ್ನು ಐದು ವರ್ಷಗಳಿಗೆ ಕಡಿಮೆಯಿಲ್ಲದ ಅವಧಿಗೆ ಮಾಡುವಂತೆ ಕೋರಿದ್ದಲ್ಲಿ, ಸರ್ಕಾರ ಅಥವಾ ರಿಜಿಸ್ಟ್ರಾರರು ಮುಖ್ಯ ಕಾರ್ಯ ನಿರ್ವಾಹಕರುಗಳನ್ನು ನೇಮಕ ಮಾಡಬಹುದು ಮತ್ತು ತೆಗೆದುಹಾಕಬಹುದು".

ಅಧ್ಯಕ್ಷರು ; ಪ್ರಸ್ತಾವ ಏನೆಂದರೆ,

"ಸದರಿ ವಿಧೇಯಕದ 29ನೇ ಖಂಡದ ಮೂಲಕ ಸೇರಿಸುವ 29 ಜಿ ಪ್ರಕರಣದ (1)ನೇ ಉಪ ಪ್ರಕರಣದ ಪರಂತುಕದಲ್ಲಿನ ಬಾಬು (11) ಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :

"ಇಂತಹ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ, ಅಂಥ ಸಂಘಗಳು, ನೇಮಕಾತಿಯನ್ನು ಐದು ವರ್ಷಗಳಿಗೆ ಕಡಿಮೆಯಿಲ್ಲದ ಅವಧಿಗೆ ಮಾಡುವಂತೆ ಕೋರಿದ್ದಲ್ಲಿ, ಸರ್ಕಾರ ಅಥವಾ ರಿಜಿಸ್ಟ್ರಾರರು ಮುಖ್ಯ ಕಾರ್ಯನಿರ್ವಾಹಕರುಗಳನ್ನು ನೇಮಕ ಮಾಡಬಹುದು ಮತ್ತು ತೆಗೆದುಹಾಕಬಹುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 29 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಖಂಡ 29 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 29 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 30

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಖಂಡ 30 ವಿಧೇಯಕದ ಅಂಗವಾಗಿರುತ್ತದೆ" ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 30 ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 31ಕ್ಕೆ ತಿದ್ದುಪಡಿ:

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಖಂಡ 31ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

"ಸದರಿ ವಿಧೇಯಕದ 31ನೇ ಖಂಡದ ಶೀರ್ಷಿಕೆಯಲ್ಲಿ ಮತ್ತು ಪ್ರಕರಣದಲ್ಲಿ ``30ಎ" ಎಂಬ ಅಂಕಿ ಮತ್ತು ಅಕ್ಷರದ ತರುವಾಯ "ಮತ್ತು 30ಬಿ" ಎಂಬ ಪದ, ಅಂಕಿ ಮತ್ತು ಅಕ್ಷರವನ್ನು ಸೇರಿಸತಕ್ಕದ್ದು".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಸದರಿ ವಿಧೇಯಕದ 31ನೇ ಖಂಡದ ಶೀರ್ಷಿಕೆಯಲ್ಲಿ ಮತ್ತು ಪ್ರಕರಣದಲ್ಲಿ ``30ಎ" ಎಂಬ ಅಂಕಿ ಮತ್ತು ಅಕ್ಷರದ ತರುವಾಯ "ಮತ್ತು 30ಬಿ" ಎಂಬ ಪದ, ಅಂಕಿ ಮತ್ತು ಅಕ್ಷರವನ್ನು ಸೇರಿಸತಕ್ಕದ್ದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 31 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಖಂಡ 31 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 31 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 32 ರಿಂದ 71ರವರೆಗೆ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಖಂಡ 32 ರಿಂದ 71ರವರೆಗೆ, ಎರಡೂ ಸೇರಿದಂತೆ, ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 32 ರಿಂದ 71ರವರೆಗೆ ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ``1997ರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾಗಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ : "1997ರ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು, ತಿದ್ದುಪಡಿಯಾಗಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು : ಇನ್ನೊಂದು ಮಸೂದೆಯನ್ನು ತೆಗೆದುಕೊಳ್ಳೋಣ.

ಕರ್ನಾಟಕ ಸೌಹಾರ್ದ ಸಹಕಾರಿ ವಿಧೇಯಕ, 1997

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೇ, ``1997ರ ಕರ್ನಾಟಕ ಸೌಹಾರ್ದ ಸಹಕಾರ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

ಅಧ್ಯಕ್ಷರು : ವಿಧೇಯಕದ ಬಗ್ಗೆ ಏನಾದರೂ ಹೇಳುವುದು ಇದ್ದರೆ ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಎಲ್ಲಾ ವಿವರ ನೀಡಿದ್ದೇನೆ. ಈಗ ನಾವು ಏನು ವಿಧೇಯಕ ಪಾಸ್ ಮಾಡಿದ್ದೇವೆ ಅದರಲ್ಲಿ ಇರುವ ಅಂಶಗಳೇ ಇದರಲ್ಲಿಯೂ ಸಹ ಇವೆ. ಹೆಚ್ಚಿಗೆ ಏನೂ ಇಲ್ಲ.

ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಅಧ್ಯಕ್ಷರೇ, ಇದು ಹೊಸ ವಿಧೇಯಕ. ಇದರ ಬಗ್ಗೆ ನಮಗೆ ಯಾರಿಗೂ ಏನೂ ಗೊತ್ತಿಲ್ಲ. ನಾವು ಈ ವಿಧೇಯಕವನ್ನು ನೋಡಿಯೇ ಇಲ್ಲ. ಇದು ಹೊಸ ಆಕ್ಟ್ ಮುಂದಿನ ಅಧಿವೇಶನದಲ್ಲಿ ತನ್ನಿ.

ಶ್ರೀ ಎಸ್.ಎಸ್. ಪಾಟೀಲ್ : ಇದು ಬಹಳ ಉತ್ತಮವಾದ ಮಸೂದೆ. ಇವತ್ತು ಮಂಡನೆ ಮಾಡಿರುವ ವಿಧೇಯಕ ಅಲ್ಲ. ಈ ವಿಧೇಯಕವನ್ನು ಹಿಂದೆಯೇ ನಾನು ಈ ಸದನದಲ್ಲಿ ಮಂಡಿಸಿದ್ದೇನೆ. ಈ ಮಸೂದೆ ಈಗ ನಾವು ಮಂಜೂರಾತಿ ಕೊಟ್ಟ ಮಸೂದೆಗಿಂತ ಫ್ರೀ ಆಗಿದೆ. ಸರ್ಕಾರದ ಹಿಡಿತ ಇದರಲ್ಲಿ ಏನೂ ಬರುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ಇದು ಹೊಸ ವಿಧೇಯಕದ ಸದಸ್ಯರು ಯಾರೂ ಓದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಇದು ಮೂರನೇ ಅಧಿವೇಶನ ಈ ವಿಧೇಯಕ ಮಂಡನೆ ಮಾಡಿ. ಈ ವಿಧೇಯಕವನ್ನು ಎಷ್ಟೋ ಜನ ಮೆಚ್ಚಿದ್ದಾರೆ. ಮಾನ್ಯ ಕುರಿಯನ್ ರವರೂ ಸಹ ಮೆಚ್ಚಿ ನನಗೆ ಪತ್ರ ಬರೆದಿದ್ದಾರೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಅಧ್ಯಕ್ಷರೇ, ಎಲ್ಲಾ ಸಹಕಾರಿಗಳು ಇದನ್ನು ಸ್ವಾಗತ ಮಾಡಿದ್ದಾರೆ. ಆದ್ದರಿಂದ ನಾವು ಒಪ್ಪಿಗೆ ಕೊಡುವುದು ಒಳ್ಳೆಯದು.